# ತಿರುಕ್ಕುರಳ್ ಕಲಿಯೋಣ

## Thirukkural Payilvom

(Kannada)

காசி தமிழ் சங்கமம்
काशी तमिल संगमम्
KASHI TAMIL SANGAMAM

## काशी तमिल संगमम 5.0

"तिरुक्कुऱळ् पयिल्वोम् - तिरुक्कुरल अभ्यास करें"

*Translator*
Dr. M. Rangaswamy

केंद्रीय शास्त्रीय तमिऴ् संस्थान, चेन्नै

2026

## ಪರಿವಿಡಿ


| | |
|---|---|
| **ಅಧ್ಯಾಯ 1 - ಕಾಶಿ ಮತ್ತು ತಮಿಳುನಾಡು** | **6** |
| **ಅಧ್ಯಾಯ 2 - ತಿರುವಳ್ಳುವರ ಜೀವನಚರಿತ್ರೆ** | **10** |
| **ಅಧ್ಯಾಯ 3 - ತಿರುಕ್ಕುರಳ್ ಕೃತಿಯ ರಚನೆ ಮತ್ತು ವೈಶಿಷ್ಟ್ಯತೆ** | **12** |
| **ಅಧ್ಯಾಯ 4 - ವ್ಯಾಖ್ಯಾನಕಾರರು ಮತ್ತು ಆವೃತ್ತಿ(ಮುದ್ರಣ)ಯ ಇತಿಹಾಸ** | **15** |
| **ಅಧ್ಯಾಯ 5 – ದಿವ್ಯಗ್ರಂಥ ತಿರುಕ್ಕುರಳ್** | **16** |
| **5.1 ತಿರುಕ್ಕುರಳಿನಲ್ಲಿ ಪ್ರೀತಿ ಮತ್ತು ಧರ್ಮ** | **16** |
| **5.2 ತಿರುಕ್ಕುರಳಿನಲ್ಲಿ ಆತಿಥ್ಯ** | **20** |
| **5.3 ತಿರುಕ್ಕುರಳಿನಲ್ಲಿ ಜೀವಪರ ಸಹಾನುಭೂತಿ** | **22** |
| **5.4 ತಿರುಕ್ಕುರಳಿನಲ್ಲಿ ಸನ್ಯಾಸತ್ವ** | **23** |
| **5.5 ತಿರುಕ್ಕುರಳಿನಲ್ಲಿ ವೈಯಕ್ತಿಕ ನಡತೆ** | **25** |
| **5.6 ತಿರುಕ್ಕುರಳಿನಲ್ಲಿ ಆತ್ಮವಿಶ್ವಾಸದ ಚಿಂತನೆಗಳು** | **26** |
| **5.7 ತಿರುಕ್ಕುರಳಿನಲ್ಲಿ ಶಿಕ್ಷಣ** | **28** |
| **5.8 ತಿರುಕ್ಕುರಳಿನಲ್ಲಿ ನಾಯಕತ್ವದ ಲಕ್ಷಣಗಳು** | **30** |
| **5.9 ತಿರುಕ್ಕುರಳಿನಲ್ಲಿ ಆರೋಗ್ಯಪರ ಚಿಂತನೆ** | **31** |
| **5.10 ತಿರುಕ್ಕುರಳಿನಲ್ಲಿ ವೈದ್ಯಕೀಯ ನೀತಿ** | **32** |
| **5.11 ತಿರುಕ್ಕುರಳಿನಲ್ಲಿ ಮಾನಸಿಕ ಆರೋಗ್ಯದ ಚಿಂತನೆ** | **33** |
| **5.12 ತಿರುಕ್ಕುರಳಿನಲ್ಲಿ ಮಾನವೀಯತೆ** | **34** |
| **5.13 ತಿರುಕ್ಕುರಳಿನಲ್ಲಿ ಸಾಮಾಜಿಕ ಸಾಮರಸ್ಯ** | **35** |
| **5.14 ತಿರುಕ್ಕುರಳಿನಲ್ಲಿ ಸ್ನೇಹ** | **37** |
| **5.15 ತಿರುಕ್ಕುರಳಿನಲ್ಲಿ ರಾಜನೀತಿ** | **38** |
| **5.16 ತಿರುಕ್ಕುರಳಿನಲ್ಲಿ ಆಡಳಿತಾತ್ಮಕ ಸಾಮರ್ಥ್ಯ** | **39** |
| **5.17 ತಿರುಕ್ಕುರಳಿನಲ್ಲಿ ಆರ್ಥಿಕ ಚಿಂತನೆಗಳು** | **40** |
| **5.18 ತಿರುಕ್ಕುರಳಿನಲ್ಲಿ ಉಳುಮೆ** | **41** |
| **5.19 ತಿರುಕ್ಕುರಳಿನಲ್ಲಿ ಪರಿಸರ** | **42** |
| **5.20 ತಿರುಕ್ಕುರಳಿನಲ್ಲಿ ಕೌಟುಂಬಿಕ ಮೌಲ್ಯಗಳು** | **43** |
| **5.21 ತಿರುಕ್ಕುರಳಿನಲ್ಲಿ ಮಹಿಳೆಯರು** | **45** |
| **5.22 ತಿರುಕ್ಕುರಳಿನಲ್ಲಿ ನಿರ್ವಹಣೆ** | **46** |
| **5.23 ವಿಶ್ವ ಭಾಷೆಗಳಲ್ಲಿ ತಿರುಕ್ಕುರಳ್** | **47** |
| **ಅಧ್ಯಾಯ - 6 ಕುರಳ್ ಮಣಿಮಾಲೆ** | **49** |

# ಅಧ್ಯಾಯ 1- ಕಾಶಿ ಮತ್ತು ತಮಿಳುನಾಡು

ಕಾಶಿ ಮತ್ತು ತಮಿಳುನಾಡು ಸುದೀರ್ಘ ಐತಿಹಾಸಿಕ ಸಂಬಂಧವನ್ನು ಹೊಂದಿದೆ. ಕಾಶಿ ಎಂಬ ವಾರಣಾಸಿಯನ್ನು ತಮಿಳು ಶಾಸ್ತ್ರೀಯ ಸಾಹಿತ್ಯರಚನೆಗಳು ಉಲ್ಲೇಖಿಸುತ್ತವೆ. ಕಲಿತ್ತೊಗೈ, ಸಿಲಪ್ಪದಿಗಾರಂ, ಮಣಿಮೇಖಲೈ, ನೀಲಕೇಶಿ, ಚೂಳಾಮಣಿ, ಪೆರುಂಗದೈ, ವಿಲ್ಲಿಭಾರತ, ತೇವಾರಂ, ಪೆರಿಯಪುರಾಣಂ, ನಾಲಾಯಿರತ್ ದಿವ್ಯ ಪ್ರಬಂಧಂ, ತಿರುಪ್ಪುಗಳ್, ಶಿವಬೋಗಾಸಾರಂ, ತಿರುವಿಳೈಯಾಡಲ್ ಪುರಾಣಂ, ಕಾಂಜಿಪುರಾಣಂ, ಶಿವಜ್ಞಾನಪಾಲಯ ಸ್ವಾಮಿಗಳ್ ಕಲಂಬಗಮ್, ತಿರುವರುಟ್ಪಾ, ವೀರಪಾಂಡ್ಯ ಕಟ್ಟಬೊಮ್ಮು ಕದೈಪ್ಪಾಡಲ್, ಭಾರತಿಯಾರ್ ಕವಿದೈ, ಕವಿಮಣಿಯಿನ್ ಮಲರುಂ ಮಾಲೈಯುಂ-ಮೊದಲಾದವುಗಳಲ್ಲಿ ಕಾಶಿಯನ್ನು ಕುರಿತ ಮಾಹಿತಿಗಳು ಸ್ಥಾನಪಡೆದಿವೆ. ಇವುಗಳಲ್ಲದೆ ಶಾಸನಗಳು ಮತ್ತು ತಾಮ್ರ ಫಲಕಗಳಲ್ಲಿ ಪುರಾವೆಗಳಿವೆ. ಕಾಶಿಯನ್ನು ಕುರಿತು ಕಾಶಿಕ್ಕಲಂಬಗಮ್, ಕಾಶಿತ್ ತುಂಡಿವಿನಾಯಗರ್ ಪದಿಗಮ್, ಕಾಶಿಕಾಣ್ಡಮ್, ಕಾಶಿರಗಸ್ಯಮ್, ಕಾಶಿಯಾತಿರೈ, ಕಾಶಿಮಗಾತ್ಮಿಯಮ್ ಅಥವಾ ಸಿಂಹದ್ವಜನ್ ಕದೈ, ಕಾಶಿ ವಿಶ್ವನಾಥ ಶತಕಮ್, ಶ್ರೀ ಕಾಶಿ ಯಾತ್ರಾ ದೀಪಂ-ಮೊದಲಾದ ಕೃತಿಗಳು ರಚನೆಯಾಗಿವೆ. ಈ ರೀತಿಯಾಗಿ, ಕಾಶಿ ಮತ್ತು ತಮಿಳುನಾಡು ನಡುವಿನ ಸಂಪರ್ಕವನ್ನು ಅನಾದಿ ಕಾಲದಿಂದಲೂ ಅರಿಯಬಹುದು.

ಈ ಹಿನ್ನೆಲೆಯಲ್ಲಿ ಕಾಶಿ ಮತ್ತು ತಮಿಳುನಾಡಿನ ಚಾರಿತ್ರಿಕ ಸಂಪರ್ಕಗಳನ್ನು ಗುರುತಿಸುವುದು, ಇವೆರಡರ ಜ್ಞಾನಪರಂಪರೆಗಳನ್ನು ಒಂದೆಡೆ ಸಂಯೋಜಿಸಿ ಇವುಗಳ ನಡುವೆ ಕಂಡುಬರುವ ಸಂಪರ್ಕಗಳನ್ನು ಹಂಚಿಕೊಳ್ಳುವುದು, ದೀರ್ಘಕಾಲದಿಂದ ಅಸ್ತಿತ್ವದಲ್ಲಿರುವ ನಾಗರಿಕತೆಯ ನಿರಂತರತೆಯನ್ನು ಪ್ರಕಟಪಡಿಸುವುದು; 'ಒಂದೇ ಭಾರತ-ಉನ್ನತ ಭಾರತ' ಎಂಬ ಪರಿಕಲ್ಪನೆಯಲ್ಲಿ ಸಾಂಸ್ಕೃತಿಕ ಪರಂಪರೆಗಳನ್ನು ತಿಳಿಯಪಡಿಸುವುದರ ಮೂಲಕ ರಾಷ್ಟ್ರೀಯ ಏಕತೆಯನ್ನು ಒತ್ತಾಯಿಸುವುದು, ಜ್ಞಾನ ವಿನಿಮಯವನ್ನು ಉತ್ತೇಜಿಸುವುದು, ಭಾರತೀಯ ಮಟ್ಟದಲ್ಲಿ ತಮಿಳು ಭಾಷೆ ಮತ್ತು ಶಾಸ್ತ್ರೀಯ ಸಾಹಿತ್ಯರಚನೆಗಳನ್ನು ಪರಿಚಯಿಸುವುದು, ಯುವಕರನ್ನು ಭಾರತೀಯ ಸಾಂಸ್ಕೃತಿಕ ಪರಂಪರೆಯೊಂದಿಗೆ ಹೊಂದಿಸುವುದು ಮತ್ತು ತಂತ್ರಜ್ಞಾನದ ಸಹಾಯದಿಂದ ಭಾರತೀಯ ಭಾಷೆಗಳ ನಡುವೆ ಭಾಷಾ ಸಂವಹನವನ್ನು ಸಂಯೋಜಿಸುವುದು-ಮುಂತಾದ ಕಾರಣಗಳನ್ನು ಹಿನ್ನೆಲೆಯಾಗಿಟ್ಟುಕೊಂಡು ಭಾರತ ಸರ್ಕಾರದ ಶಿಕ್ಷಣ ಸಚಿವಾಲಯವು ಕಾಶಿ-ತಮಿಳು ಸಂಗಮವನ್ನು ನಡೆಸುತ್ತಾ ಬರುತ್ತಿದೆ.

ಕಾಶಿ ಮತ್ತು ತಮಿಳುನಾಡು ನಡುವಿನ ಸಂಬಂಧವನ್ನು ವಿವರಿಸುವ ಸಲುವಾಗಿ, ಜ್ಞಾನಪರಂಪರೆ ಮತ್ತು ಸಾಂಸ್ಕೃತಿಕ ಸಂಬಂಧಗಳನ್ನು ಬಲಪಡಿಸುವುದು, ಭಾರತೀಯ ಜ್ಞಾನಪರಂಪರೆಗೆ ಅಗಸ್ತ್ಯ ಮುನಿಗಳ ಕೊಡುಗೆ ಮತ್ತು ತಮಿಳು ಕಲಿಯೋಣ ಎಂಬ ವಸ್ತುವಿಷಯಗಳ ಅಡಿಯಲ್ಲಿ ನಾಲ್ಕು ಕಾಶಿ ತಮಿಳು ಸಂಗಮಗಳು ನಡೆದವು. ಇವುಗಳ ಮುಂದುವರಿಕೆಯಾಗಿ ಈ ವರ್ಷ ವಾರಣಾಸಿಯಲ್ಲಿ "ತಿರುಕ್ಕುರಳ್ ಕಲಿಯೋಣ" ಎಂಬ ವಸ್ತುವಿಷಯದ ಮೇಲೆ, 28.11.2026 ರಿಂದ 12.12.2026 ರವರೆಗೆ 'ಕಾಶಿ ತಮಿಳು ಸಂಗಮ 5.0' ನಡೆಯಲಿದೆ.

### ಕಾಶಿ – ತಮಿಳುನಾಡು : ಐತಿಹಾಸಿಕ ಎಳೆಗಳು

ಗಂಗಾ ನದಿಯ ದಡದಲ್ಲಿರುವ ಕಾಶಿ ಮತ್ತು ವೈಗೈ, ಕಾವೇರಿ ನದಿಗಳ ದಡದಲ್ಲಿರುವ ತಮಿಳುನಾಡು ಭಾರತದ ಅತ್ಯಂತ ಪುರಾತನ ಜ್ಞಾನ ಕೇಂದ್ರಗಳು. ಇವುಗಳನ್ನು ಒಗ್ಗೂಡಿಸಿ ಶತಶತಮಾನಗಳಾಗಿ ಮುಂದುವರಿಯುತ್ತಿರುವ ಕೆಲವು ಎಳೆಗಳು:

- **ಕುಮರಗುರುಬರ್ (17 ನೇ ಶತಮಾನ):** ಧರ್ಮಪುರ ಅಧೀನಕ್ಕೆ ಸೇರಿದ ಇವರು ಕಾಶಿಯಲ್ಲಿ ಕುಮಾರಸ್ವಾಮಿ ಮಠವನ್ನು ಸ್ಥಾಪಿಸಿ, ಕೇಥಾರ ಸ್ನಾನಘಟ್ಟದಲ್ಲಿ ಕೇಥಾರೇಶ್ವರ ದೇವಾಲಯವನ್ನು ನಿರ್ಮಿಸಿದರು. 'ಕಾಶಿಕ್ ಕಲಂಬಗಮ್' ಗೀತೆಯನ್ನು ರಚಿಸಿದ ಇವರು ಕಾಶಿಯಲ್ಲಿಯೇ ದೈವಾಧೀನವಾದರು.
- **ಮಹಾಕವಿ ಭಾರತಿಯಾರ್:** ಅವರು 1898 ರಿಂದ 1902 ರವರೆಗೆ ಕಾಶಿ ಹನುಮಾನ್ ಸ್ನಾನಘಟ್ಟದಲ್ಲಿ ವಾಸಿಸುತ್ತಿದ್ದರು. ಅವರು ವಾಸಿಸುತ್ತಿದ್ದ ಮನೆಯನ್ನು 'ಭಾರತಿ ಇಲ್ಲಮ್(ಭಾರತಿಯಾರರ ನಿವಾಸ)' ಎಂದು ನವೀಕರಿಸಲ್ಪಟ್ಟು 11.12.2022 ರಂದು ತೆರೆಯಲಾಯಿತು. 'ಕಾಶಿ ನಗರದ ಕವಿ ಮಾಡುವ ಭಾಷಣವನ್ನು ಕಾಂಚಿಯಲ್ಲಿ ಕೇಳುವುದಕ್ಕೊಂದು ಸಾಧನವನ್ನಾಗಿ ಮಾಡೋಣ' ಎಂಬ ಅವರ ಸಾಲು ಉತ್ತರ ಮತ್ತು ದಕ್ಷಿಣವನ್ನು ಬೆಸೆಯುವ ಕನಸಾಗಿದೆ.
- **ತೆನ್‌ಕಾಶಿ, ಶಿವಕಾಶಿ:** 'ತೆರ್ಕು ಕಾಶಿ(ದಕ್ಷಿಣದ ಕಾಶಿ)' ಎಂಬ ಹೆಸರೇ ಸಂಪರ್ಕವನ್ನು ಸೂಚಿಸುತ್ತದೆ. 15ನೇ ಶತಮಾನದ ಪಾಂಡ್ಯರಾಜ 'ಪರಾಕ್ರಮ' ಪಾಂಡ್ಯನೊಂದಿಗೆ ಈ ದೇವಾಲಯಗಳು ಸಂಬಂಧವನ್ನು ಹೊಂದಿವೆ. ತೆನ್‌ಕಾಶಿಯ ಪಾಂಡ್ಯರಾಜನಾದ ಅತಿವೀರರಾಮ ಪಾಂಡ್ಯನು 'ಕಾಶಿ ಕಾಂಡಮ್' ಎಂಬ ಕೃತಿಯನ್ನು ರಚಿಸಿದನು.
- **ಎಲ್ಲಾ ನೀರು ಗಂಗೆ, ಎಲ್ಲಾ ನೆಲವು ಕಾಶಿ:** ಪಾಂಡ್ಯರ ಸಂಪ್ರದಾಯದಲ್ಲಿ ಪ್ರಸ್ತುತಪಡಿಸಲಾದ ಈ ಸಾಲನ್ನು 2023ರ ಕಾಶಿ-ತಮಿಳು ಸಂಗಮದ ಉದ್ಘಾಟನಾ ಸಮಾರಂಭದಲ್ಲಿ ಮಾನ್ಯ ಪ್ರಧಾನಿಯವರು ಉಲ್ಲೇಖಿಸಿದರು.
- **ಕಾಶಿ–ರಾಮೇಶ್ವರಂ ಯಾತ್ರೆ:** ರಾಮೇಶ್ವರಂ ದರ್ಶನದೊಂದಿಗೆ ಕಾಶಿ ಯಾತ್ರೆಯು ಅಂತ್ಯಗೊಳ್ಳುತ್ತದೆ ಎಂಬುದು ಬಹಳ ಹಿಂದಿನಿಂದಲೂ ಬಂದಿರುವ ನಂಬಿಕೆ. ಇಂದಿಗೂ ತಮಿಳು ವಿವಾಹ ಸಂಪ್ರದಾಯ ಸಮಾರಂಭದಲ್ಲಿ 'ಕಾಶಿ' ಯಾತ್ರೆ ಎಂಬುದು ಸ್ಥಾನಪಡೆದಿದೆ.
- **ಶೈಕ್ಷಣಿಕ ಸೇತುವೆ:** ಬನಾರಸ್ ಹಿಂದೂ ವಿಶ್ವವಿದ್ಯಾಲಯದಲ್ಲಿ 'ಸುಬ್ರಮಣ್ಯ ಭಾರತಿ ತಮಿಳು ಸಂಶೋಧನಾ ಪೀಠ'ವನ್ನು ಸ್ಥಾಪಿಸಲಾಗುವುದು ಎಂದು ಭಾರತದ ಮಾನ್ಯ ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿ ಅವರು 11.09.2021 ರಂದು ಭಾರತಿಯವರ ಶತಮಾನೋತ್ಸವದ ದಿನದಂದು ಘೋಷಿಸಿದರು.

**ಕಾಶಿ ತಮಿಳು ಸಂಗಮದ ಪ್ರಯಾಣ:**

**ಕಾಶಿ ತಮಿಳು ಸಂಗಮ 1.0**

- 'ಕಾಶಿ ಮತ್ತು ತಮಿಳುನಾಡು ನಡುವಿನ ಸಂಪರ್ಕ' ಎಂಬ ವಸ್ತುವಿಷಯದ ಮೇಲೆ ಕಾಶಿ ತಮಿಳು ಸಂಗಮ 1.0 ಉತ್ತರಪ್ರದೇಶದ ವಾರಣಾಸಿಯ ಬನಾರಸ್ ಹಿಂದೂ ವಿಶ್ವವಿದ್ಯಾಲಯದ ಆವರಣದಲ್ಲಿ 16.11.2022 ರಿಂದ 15.12.2022 ರವರೆಗೆ ನಡೆಯಿತು.

**ಕಾಶಿ ತಮಿಳು ಸಂಗಮ 2.0**

- 'ಜ್ಞಾನಪರಂಪರೆ ಮತ್ತು ಸಾಂಸ್ಕೃತಿಕ ಸಂಬಂಧಗಳನ್ನು ಬಲಪಡಿಸುವುದು' ಎಂಬ ವಸ್ತುವಿಷಯದ ಮೇಲೆ ಕಾಶಿ ತಮಿಳು ಸಂಗಮ 2.0 ಉತ್ತರಪ್ರದೇಶದ ವಾರಣಾಸಿಯ ನಮೋ ಸ್ನಾನಘಟ್ಟದಲ್ಲಿ 17.12.2023 ರಿಂದ 30.12.2023ರ ವರೆಗೆ ನಡೆಯಿತು.

**ಕಾಶಿ ತಮಿಳು ಸಂಗಮ 3.0**

- "ಭಾರತೀಯ ಜ್ಞಾನಪರಂಪರೆಗೆ ಅಗಸ್ತ್ಯ ಮುನಿಗಳ ಕೊಡುಗೆ" ಎಂಬ ವಸ್ತುವಿಷಯದ ಮೇಲೆ ಕಾಶಿ ತಮಿಳು ಸಂಗಮ 3.0 ಉತ್ತರಪ್ರದೇಶದ ವಾರಣಾಸಿಯ ನಮೋ ಸ್ನಾನಘಟ್ಟದಲ್ಲಿ 15.02.2025 ರಿಂದ 24.02.2025ರ ವರೆಗೆ ನಡೆಯಿತು.

**ಕಾಶಿ ತಮಿಳು ಸಂಗಮ 4.0**

- "ತಮಿಳು ಕಲಿಯೋಣ" ಎಂಬ ವಸ್ತುವಿಷಯದ ಮೇಲೆ ಕಾಶಿ ತಮಿಳು ಸಂಗಮ 4.0 ಉತ್ತರಪ್ರದೇಶದ ವಾರಣಾಸಿಯ ನಮೋ ಸ್ನಾನಘಟ್ಟದಲ್ಲಿ 02.12.2025 ರಿಂದ 15.12.2025ರ ವರೆಗೆ ನಡೆಯಿತು. ಕಾಶಿ ತಮಿಳು ಸಂಗಮ ಸಮಾರೋಪ ಸಮಾರಂಭವು ತಮಿಳುನಾಡಿನ ರಾಮೇಶ್ವರಂನಲ್ಲಿ 30.12.2025 ರಂದು ನಡೆಯಿತು.

**ಕಾಶಿ ತಮಿಳು ಸಂಗಮ 5.0**

- "ತಿರುಕ್ಕುರಳ್ ಕಲಿಯೋಣ" ಎಂಬ ವಸ್ತುವಿಷಯದ ಮೇಲೆ ಉತ್ತರಪ್ರದೇಶದ ವಾರಣಾಸಿಯ ನಮೋ ಸ್ನಾನಘಟ್ಟದಲ್ಲಿ 28.11.2026 ರಿಂದ 12.12.2026ರ ವರೆಗೆ ನಡೆಯಲಿದೆ. ಭಾರತದಾದ್ಯಂತ ಇರುವ ಕಾಲೇಜುಗಳು ಮತ್ತು ವಿಶ್ವವಿದ್ಯಾಲಯಗಳಿಂದ 1,000 ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲಾಗುತ್ತದೆ. ಹಾಗೆ ಆಯ್ಕೆ ಮಾಡಿದ ವಿದ್ಯಾರ್ಥಿಗಳು ಅವರವರ ಮಾತೃಭಾಷೆಯಲ್ಲೇ ತಿರುಕ್ಕುರಳನ್ನು ಕಲಿತು, ತಂತಮ್ಮ ಕಾಲೇಜುಗಳಿಗೆ ಮತ್ತು ವಿಶ್ವವಿದ್ಯಾಲಯಗಳಿಗೆ ಹಿಂತಿರುಗಿ ತಿರುಕ್ಕುರಳಿನ ಸಂದೇಶವನ್ನು ಪಸರಿಸುವರು.

ತಿರುಕ್ಕುರಳ್ ಯಾವುದೇ ಒಂದು ಧರ್ಮವನ್ನೋ, ಅರಸನನ್ನೋ ಅಥವಾ ದೇಶವನ್ನೋ ಹೆಸರಿನಿಂದ ಉಲ್ಲೇಖಿಸುವುದಿಲ್ಲ. ಆದುದರಿಂದಲೇ ಪ್ರತಿಯೊಬ್ಬರೂ ಅದನ್ನು ತಮ್ಮದೇ ಎಂದು ಕೊಂಡಾಡುತ್ತಿದ್ದಾರೆ. ಶಾಸ್ತ್ರೀಯ ತಮಿಳು ಭಾಷಾ ಅಧ್ಯಯನ ಕೇಂದ್ರೀಯ ಸಂಸ್ಥೆಯು ಈ ಕೃತಿಯನ್ನು 35 ಅನುವಾದಗಳಾಗಿ ಪ್ರಕಟಿಸಿರುವುದರೊಂದಿಗೆ ಎಂಟನೇ ಪರಿಚ್ಛೇದದ ಪಟ್ಟಿಯಲ್ಲಿನ ಇಪ್ಪತ್ತೆರಡು ಭಾಷೆಗಳಲ್ಲೂ ತನ್ನ ಬಹುಭಾಷಾ ಆಯಪ್ ಮೂಲಕ ಒದಗಿಸುತ್ತದೆ. ಹೀಗಾಗಿ ಕಾಶ್ಮೀರದಲ್ಲಿನ ಒಬ್ಬ ವಿದ್ಯಾರ್ಥಿಯೂ ಮತ್ತು ಕನ್ಯಾಕುಮಾರಿಯಲ್ಲಿನ ಒಬ್ಬ ವಿದ್ಯಾರ್ಥಿಯೂ ಒಂದೇ ಕುರಳನ್ನು ತಂತಮ್ಮ ಭಾಷೆಯಲ್ಲಿ ಒಂದೇ ದಿನದಲ್ಲಿ ಕಲಿಯಬಹುದು.

# ಅಧ್ಯಾಯ 2 - ತಿರುವಳ್ಳುವರ ಜೀವನಚರಿತ್ರೆ

ತಿರುವಳ್ಳುವರ ಬಗ್ಗೆ ನಮಗೆ ಖಚಿತವಾಗಿ ತಿಳಿದಿರುವ ಒಂದು ವಿಷಯವೆಂದರೆ ಅವರು ನೀಡಿದ 1,330 ಕುರಳ್‌ಗಳು. ಅವರ ಜನನ, ಕುಟುಂಬ ಮತ್ತು ವೃತ್ತಿಯ ಬಗೆಗಿನ ಸುದ್ದಿಗಳು ಬಹುತೇಕ ನಂತರದ ದಂತಕಥೆಗಳಾಗಿವೆ. ಆದಾಗ್ಯೂ, ಕೃತಿಯೇ ಅದರ ಲೇಖಕರನ್ನು ಸ್ಪಷ್ಟವಾಗಿ ಪರಿಚಯಿಸುತ್ತದೆ.

**ಹೆಸರು ಮತ್ತು ಇತರ ವಿಶೇಷ ಹೆಸರುಗಳು**

'ವಳ್ಳುವರ್' ಎಂಬ ಹೆಸರಿನೊಂದಿಗೆ 'ತಿರು' ಎಂಬ ವಿಶೇಷಣಪದ ಸೇರಿ 'ತಿರುವಳ್ಳುವರ್' ಎಂದಾಯಿತು. ವಾಕ್ಪರಂಪರೆಯು ಅವರಿಗೆ ಅನೇಕ ವಿಶೇಷ ಹೆಸರುಗಳನ್ನು ನೀಡಿದೆ: ನಾಯನಾರ್, ತೇವರ್, ದೈವಪುಲವರ್, ಮುದರ್‌ಪಾವಲರ್, ನಾನ್ಮುಗನಾರ್, ಮಾತಾನುಪಂಗಿ, ಚೆನ್ನಾಪ್ಪೋದಾರ್, ಪೆರುನಾವಲರ್, ಪೊಯಿಲ್ ಪುಲವರ್. ಈ ಹೆಸರುಗಳು ತಮಿಳು ಸಮುದಾಯವು ಅವರ ಬಗ್ಗೆ ಹೊಂದಿರುವ ಗೌರವವನ್ನು ತೋರಿಸುತ್ತವೆ.

**ಕಾಲ : ವಿದ್ವಾಂಸರ ಅಭಿಪ್ರಾಯಗಳು**

ತಿರುಕ್ಕುರಳಿನ ಕಾಲವನ್ನು ಕ್ರಿ.ಪೂ. 300 ರಿಂದ ಕ್ರಿ.ಶ. 5 ನೇ ಶತಮಾನದವರೆಗೆ ವಿವಿಧ ರೀತಿಯಲ್ಲಿ ಅಂದಾಜಿಸಲಾಗಿದೆ. ಜೆಕ್ ವಿದ್ವಾಂಸ ಕಮಿಲ್ ಜ್ವೆಲೆಬಿಲ್ ಕ್ರಿ.ಶ. 450-500 ಎಂದು ಹೇಳಿದ್ದಾರೆ. ಎನ್‌ಸೈಕ್ಲೋಪೀಡಿಯಾ ಬ್ರಿಟಾನಿಕಾ 6 ನೇ ಶತಮಾನವೆಂದು ಉಲ್ಲೇಖಿಸುತ್ತದೆ; ಮತ್ತೆ ಕೆಲವರು ಕ್ರಿ.ಪೂ. 1 ನೇ ಶತಮಾನ ಎಂದು ಹೇಳುತ್ತಾರೆ. ತಮಿಳು ಪರಂಪರೆಯು ತಿರುವಳ್ಳುವರ ಕಾಲವನ್ನು ಕ್ರಿ.ಪೂ. 31 ಎಂದು ಹೇಳುತ್ತದೆ. ಮರೈಮಲೈಯಡಿಗಳ್ ಅವರು ಪ್ರಸ್ತಾಪಿಸಿದ ಈ ಲೆಕ್ಕಾಚಾರದ ಆಧಾರದ ಮೇಲೆ ತಮಿಳುನಾಡು ಸರ್ಕಾರವು 1971ರಲ್ಲಿ ಅಧಿಕೃತ ಗೆಜೆಟ್‌ನಲ್ಲಿ 'ತಿರುವಳ್ಳುವರ ವರ್ಷ' ಎಂಬ ವ್ಯವಸ್ಥೆಯನ್ನು ಪ್ರಕಟಿಸಿತು; ಇದು 1972 ರಿಂದ ಜಾರಿಗೆ ಬಂದಿತು. ವಳ್ಳುವರ ವರ್ಷ= ಸಾಮಾನ್ಯ ವರ್ಷ + 31; ತೈ(ಮಾಘ) ತಿಂಗಳು 2026 ರಿಂದ 2057 ರವರೆಗೆ ತಿರುವಳ್ಳುವರ ವರ್ಷ.

**ದಂತಕಥೆಗಳು**

ನಂತರದ ಕಾಲಘಟ್ಟದ ಪ್ರತ್ಯೇಕ ಗೀತೆಗಳು ಮತ್ತು ವಾಕ್ಪರಂಪರೆಗಳು ಕೆಲವು ದಂತಕಥೆಗಳನ್ನು ಒದಗಿಸುತ್ತವೆ. ಇವುಗಳಿಗೆ ಯಾವುದೇ ಐತಿಹಾಸಿಕ ಪುರಾವೆಗಳಿಲ್ಲ; ಆದಾಗ್ಯೂ, ಇವು ಜನರ ಮನಸ್ಸಿನಲ್ಲಿ ತಿರುವಳ್ಳುವರ್ ಜೀವಿಸುತ್ತಿರುವ ಸ್ವರೂಪವನ್ನು ತೋರಿಸುತ್ತವೆ.

- ಅವರು ಚೆನ್ನೈನ ಮೈಲಾಪುರದಲ್ಲಿ ಜನಿಸಿದರು ಎಂದು ವ್ಯಾಪಕವಾಗಿ ನಂಬಲಾಗಿದೆ. ಅಲ್ಲಿ ಅವರಿಗೆ ಪ್ರತ್ಯೇಕ ದೇವಾಲಯವಿದೆ.
- ವಾಕ್ಪರಂಪರೆಯ ಪ್ರಕಾರ ತಿರುವಳ್ಳುವರು ನೇಕಾರ ವೃತ್ತಿಯನ್ನು ಅನುಸರಿಸುತ್ತಿದ್ದರೆಂದೂ, ಅವರ ಪತ್ನಿ ವಾಸುಕಿಯೆಂದೂ ಹೇಳಲಾಗುತ್ತಿದೆ. ಪತಿ ಕರೆದಾಗ ಬಾವಿಯಲ್ಲಿ ನೀರೆತ್ತುತ್ತಿದ್ದ ಹಗ್ಗವನ್ನು ಹಾಗೆಯೇ ಬಿಟ್ಟು ಬಂದರು ಎಂಬ ಕಥೆ ದಾಂಪತ್ಯದ ಪ್ರೀತಿಗೆ ಉದಾಹರಣೆ ಎಂದು ಹೇಳಲಾಗುತ್ತದೆ.
- ಮಧುರೈ ತಮಿಳು ಸಂಘದಲ್ಲಿ ಕೃತಿಯನ್ನು ಪ್ರಸ್ತುತಪಡಿಸಿದಾಗ, ಸಂಘ ಮಂಡಳಿಯು ಕುರಳಿಗೆ ಮಾತ್ರ ಸ್ಥಾನವನ್ನು ನೀಡಲಾಗಿತ್ತೆಂಬ ಒಂದು ಕಥೆ ಇದೆ.
- ಈ ಕೃತಿಯನ್ನು ಹೊಗಳಿ ಹಾಡಲ್ಪಟ್ಟ ಐವತ್ತೈದು ವೆಣ್ಬಾಪದ್ಯಗಳ ಸಂಕಲನ ತಿರುವಳ್ಳುವಮಾಲೈ. ಇದರಲ್ಲಿ ಇಡೈಕ್ಕಾಡರ್ ಎಂಬವರು 'ಸಾಸಿವೆ ಕಾಳನ್ನು ರಂಧ್ರಮಾಡಿ ಸಪ್ತಸಾಗರವನ್ನು ಒಳಗೆ ತುಂಬಿಸಿದಂತೆ' ಎಂದು

ಹೇಳಿರುವರು; ಅವ್ವೈಯಾರ್ ಅವರು 'ಅಣುವನ್ನು ರಂಧ್ರಗೊಳಿಸಿ ಏಳು ಸಾಗರಗಳನ್ನು ತುಂಬಿಸಿದಂತೆ ಕಿರಿದಾದ ಕುರಳ್' ಎಂದು ಹೇಳಿ ಅದನ್ನು ಮತ್ತಷ್ಟು ನಿಖರಗೊಳಿಸಿದ್ದಾರೆ

**ಕೃತಿಯಲ್ಲಿ ಕಾಣುವ ಲೇಖಕರು**

ತಿರುವಳ್ಳುವರ್ ಧರ್ಮ, ರಾಜನೀತಿ, ಅರ್ಥ, ಯುದ್ಧ, ವೈದ್ಯಕೀಯ ಮತ್ತು ಪ್ರೀತಿ ಸೇರಿದಂತೆ ಜೀವನದ ಎಲ್ಲಾ ವಿಭಾಗಗಳಲ್ಲೂ ಜ್ಞಾನವನ್ನು ಹೊಂದಿದವರು. ಅವರು ಒಬ್ಬ ವ್ಯಕ್ತಿಯನ್ನು ಹುಟ್ಟಿನಿಂದ ಅಳೆಯುವುದಿಲ್ಲ, ಬದಲಾಗಿ ಅವರ ಕಾರ್ಯಗಳಿಂದ ಅಳೆಯುತ್ತಾರೆ. ಆದ್ದರಿಂದ, ಜೈನರು, ಬೌದ್ಧರು, ಶೈವರು ಮತ್ತು ವೈಷ್ಣವರು ಸೇರಿದಂತೆ ಹಲವು ಮತದವರು ತಿರುವಳ್ಳುವರನ್ನು ತಮ್ಮವರೆಂದು ಕೊಂಡಾಡುತ್ತಿದ್ದಾರೆ. ಈ ಬಹುತ್ವದ ಬಾಧ್ಯತೆಯೇ ಅವರ ಸಾರ್ವತ್ರಿಕತೆಗೆ ಅತ್ಯುತ್ತಮ ಪುರಾವೆಯಾಗಿದೆ. ಶಾಸ್ತ್ರೀಯ ವಿದ್ವಾಂಸರು ಅವರನ್ನು ಭಾರತದ ಸಾಮಾನ್ಯ ನೈತಿಕ ಪರಂಪರೆಯ ಧ್ವನಿಯಾಗಿ ನೋಡುತ್ತಾರೆ.

**ಸ್ಮಾರಕಗಳು**

- **ತಿರುವಳ್ಳುವರ ದಿನ:** ತೈ(ಮಾಘ) ತಿಂಗಳು 2ನೇ ದಿನ, ಪೊಂಗಲ್(ಮಕರ ಸಂಕ್ರಾಂತಿ) ಹಬ್ಬದ ನಾಲ್ಕು ದಿನಗಳ ನಡುವೆ ಆಚರಿಸಲಾಗುತ್ತದೆ.
- **ವಲ್ಲುವರ್ ಕೊಟ್ಟಮ್, ಚೆನ್ನೈ:** ಏಪ್ರಿಲ್ 1976 ರಲ್ಲಿ ರಾಷ್ಟ್ರಪತಿ ಶ್ರೀಫಕ್ರುದ್ದೀನ್ ಅಲಿ ಅಹ್ಮದ್ ಅವರಿಂದ ತೆರೆಯಲಾಯಿತು. ವಿ. ಗಣಪತಿ ಸ್ಥಪತಿ ಅವರು ವಿನ್ಯಾಸಗೊಳಿಸಿದ ಈ ದೇವಾಲಯದಲ್ಲಿ 1,330 ಕುರಳ್‌ಗಳನ್ನು ಕಲ್ಲಿನಲ್ಲಿ ಕೆತ್ತಲಾಗಿದೆ. ಇದನ್ನು 21 ಜೂನ್ 2025 ರಂದು ನವೀಕರಿಸಲ್ಪಟ್ಟು ಪುನಃ ತೆರೆಯಲಾಯಿತು.
- **ತಿರುವಳ್ಳುವರ ಪ್ರತಿಮೆ** : ಕನ್ಯಾಕುಮಾರಿಯಲ್ಲಿ 133 ಅಡಿ ಎತ್ತರದ ತಿರುವಳ್ಳುವರ ಪ್ರತಿಮೆಯನ್ನು ನಿರ್ಮಿಸಲಾಗಿದೆ. ಅಂದರೆ 133 ಅಧ್ಯಾಯಗಳಿಗೆ ಒಂದು ಅಡಿ. ಪೀಠದ 38 ಅಡಿ ಎತ್ತರವು ಧರ್ಮಭಾಗದಲ್ಲಿನ 38 ಅಧ್ಯಾಯಗಳನ್ನೂ, 95 ಅಡಿ ಎತ್ತರವು ಅರ್ಥ ಮತ್ತು ಕಾಮಭಾಗಗಳ ಅಧ್ಯಾಯಗಳನ್ನೂ ಪ್ರತಿನಿಧಿಸುತ್ತವೆ. 01.01.2000 ರಂದು ಉದ್ಘಾಟನೆಗೊಂಡ ಈ ಪ್ರತಿಮೆಯು 2004 ಸುನಾಮಿಯನ್ನು ಸಹ ತಡೆದುಕೊಂಡಿತು. ಬೆಳ್ಳಿ ಮಹೋತ್ಸವದ ಸಂದರ್ಭದಲ್ಲಿ, ವಿವೇಕಾನಂದ ಬಂಡೆಯನ್ನು ಸಂಪರ್ಕಿಸುವ 77 ಮೀಟರ್ ಗಾಜಿನ ಸೇತುವೆಯನ್ನು ಡಿಸೆಂಬರ್ 30, 2024 ರಂದು ಉದ್ಘಾಟಿಸಲಾಯಿತು; ಈ ಪ್ರತಿಮೆಯನ್ನು 'ಜ್ಞಾನದ ಪ್ರತಿಮೆ' ಎಂದೂ ಕರೆಯಲಾಗುತ್ತದೆ.

## ಅಧ್ಯಾಯ 3 – ತಿರುಕ್ಕುರಳ್ ಕೃತಿಯ ರಚನೆ ಮತ್ತು ವೈಶಿಷ್ಟ್ಯತೆ

ತಿರುಕ್ಕುರಳ್ ಕೃತಿಯು 1,330 ಕುರಳ್(ದ್ವಿಪದಿ)ಗಳನ್ನು ಒಳಗೊಂಡಿದೆ. ಅವುಗಳನ್ನು ಹತ್ತು ಹತ್ತರಂತೆ **133** ಅಧ್ಯಾಯಗಳಾಗಿಯೂ, ಧರ್ಮ-ಅರ್ಥ-ಕಾಮ ಎಂಬ ಮೂರು ವಿಭಾಗಗಳಾಗಿಯೂ ವಿಂಗಡಿಸಲಾಗಿದೆ. ಎಲ್ಲಾ ಕುರಳ್(ದ್ವಿಪದಿ)ಗಳು ಎರಡು ಸಾಲುಗಳು ಮತ್ತು ಏಳು ಗಣಗಳನ್ನು ಒಳಗೊಂಡು, ಕುರಳ್‌ವೆಣ್ಪಾ ಛಂದಸ್ಸಿನಲ್ಲಿ ರಚನೆಯಾಗಿವೆ.

**ಮುಪ್ಪಾಲ್(ಮೂರು ಭಾಗಗಳು) ರಚನೆ**

| ಮುಪ್ಪಾಲ್(ಮೂರು ಭಾಗಗಳು) : 133 ಅಧ್ಯಾಯಗಳು, 1,330 ಕುರಳ್(ದ್ವಿಪದಿ)ಗಳು<br>(ಪರಿಮೇಲಳಗರ್ ಅವರ ವ್ಯಾಖ್ಯಾನದನುಸಾರವಾಗಿ ಅಧ್ಯಾಯಗಳ ಸಂಖ್ಯೆ) | | |
|---|---|---|
| **ಅರತ್ತುಪಾಲ್(ಧರ್ಮಭಾಗ)** | **ಪೊರುಟ್ಪಾಲ್(ಅರ್ಥ ಭಾಗ)** | **ಕಾಮತ್ತುಪಾಲ್(ಕಾಮ ವಿಭಾಗ)** |
| **38 ಅಧ್ಯಾಯಗಳು(1-38)**<br>**380 ಕುರಳ್‌ಗಳು** | **70 ಅಧ್ಯಾಯಗಳು(39-108)**<br>**700 ಕುರಳ್‌ಗಳು** | **25 ಅಧ್ಯಾಯಗಳು (109-133)**<br>**250 ಕುರಳ್‌ಗಳು** |
| **ಪೀಠಿಕೆ ದೈವ ಸ್ತುತಿ 4 ಅಧ್ಯಾಯಗಳು**<br>**ಗೃಹಸ್ಥಧರ್ಮ 20 ಅಧ್ಯಾಯಗಳು**<br>ಸನ್ಯಾಸ ಧರ್ಮ 13 ಅಧ್ಯಾಯಗಳು<br>ವಿಧಿ 1 ಅಧ್ಯಾಯಗಳು | **ರಾಜನೀತಿ 25 ಅಧ್ಯಾಯಗಳು**<br>**ಅಮಾತ್ಯತೆ 32 ಅಧ್ಯಾಯಗಳು**<br>**ಉಳಿಕೆ** 13 ಅಧ್ಯಾಯಗಳು | **ರಹಸ್ಯ ಪ್ರಣಯ 7 ಅಧ್ಯಾಯಗಳು**<br>**ದಾಂಪತ್ಯ ಜೀವನ 18 ಅಧ್ಯಾಯಗಳು** |

### ಧರ್ಮಭಾಗ-38 ಅಧ್ಯಾಯಗಳು

**ಧರ್ಮ ಭಾಗವು ಮನುಷ್ಯನ ಆಂತರಿಕ ಜೀವನ ಮತ್ತು ಕೌಟುಂಬಿಕ ಜೀವನದ ಬಗ್ಗೆ ಪ್ರಸ್ತಾಪಿಸುತ್ತದೆ.**

- **ಪೀಠಿಕೆ (1-4):** ದೈವಸ್ತುತಿ, ಮಳೆಯ ಸ್ತುತಿ, ಸನ್ಯಾಸಿಯ ಮಹಿಮೆ, ಧರ್ಮಬಲ ಪ್ರತಿಪಾದನೆ. ದೈವಸ್ತುತಿಯ ನಂತರ ಸುರಿಯುವ ಮಳೆಗೆ ಪ್ರತ್ಯೇಕ ಅಧ್ಯಾಯವನ್ನು ನೀಡಿರುವುದು ಪ್ರಕೃತಿಯೇ ಜೀವನದ ಆಧಾರ ಎಂಬ ತಿರುವಳ್ಳುವರ ದೃಷ್ಟಿಕೋನವನ್ನು ತೋರಿಸುತ್ತದೆ.
- **ಗೃಹಸ್ಥ ಧರ್ಮ (5-24):** ಗೃಹಜೀವನ, ಬಾಳಸಂಗಾತಿಯ ಒಳಿತು, ಮಕ್ಕಳನ್ನು ಪಡೆಯುವಿಕೆ ಮೊದಲ್ಗೊಂಡು ಪ್ರೀತಿಪರತೆ, ಅತಿಥಿ ಸತ್ಕಾರ, ಸವಿಮಾತುಗಳನ್ನಾಡುವುದು, ಕೃತಜ್ಞತೆಯ ಅರಿಕೆ, ಸಮದರ್ಶಿತನ, ಸಹನ ಶೀಲತೆ, ಉಪಕಾರದ ತಿಳಿವಳಿಕೆ, ದಾನ, ಕೀರ್ತಿವರೆಗೆ. ಗೃಹಸ್ಥ ಧರ್ಮವನ್ನು ಸನ್ಯಾಸ ಧರ್ಮಕ್ಕೆ ಸಮಾನವಾಗಿಯೂ, ಕೆಲವೆಡೆ ಉನ್ನತವಾಗಿಯೂ ವಳ್ಳುವರು ಗೌರವಿಸುತ್ತಾರೆ.
- **ಸನ್ಯಾಸ ಧರ್ಮ (25-37):** ಕರುಣೆ ತೋರುವುದು, ಮಾಂಸ ತ್ಯಾಜ್ಯ, ನಿಜ ಹೇಳುವುದು, ಕೋಪ ತಾಳದಿರುವುದು, ಕೇಡೆಣಿಸದಿರುವುದು, ಕೊಲ್ಲದಿರುವುದು, ನೆಲೆ ಇಲ್ಲದಿರುವುದು, ತ್ಯಾಗ, ನಿಜವನ್ನು ತಿಳಿಯುವುದು, ಆಸೆಯನ್ನು

ಹರಿಯುವುದು. ವಿದ್ವಾಂಸರನ್ನು ಹೆಚ್ಚು ಸೆಳೆದ ಅಹಿಂಸೆಗೆ ಸಂಬಂಧಿಸಿದ ಕುರಳ್‌ಗಳು ಈ ಅಧ್ಯಾಯದಲ್ಲೇ (ಅಧ್ಯಾಯ 8) ಅಡಕವಾಗಿವೆ.

- **ವಿಧಿ(38)** : ಮಾನವ ಪ್ರಯತ್ನವನ್ನು ಮೀರಿ ನಿಲ್ಲುವ ಕರ್ಮಫಲಗಳ ಬಗೆಗಿನ ಒಂದೇ ಅಧ್ಯಾಯ.

**ಅರ್ಥ ಭಾಗ - 70 ಅಧ್ಯಾಯಗಳು**

ಅರ್ಥ ಭಾಗವು ಕೃತಿಯ ಅರ್ಧಕ್ಕಿಂತ ಹೆಚ್ಚಿನ ಭಾಗವಾಗಿದೆ. ಇದು ರಾಜನೀತಿ, ಆಡಳಿತ, ಆರ್ಥಿಕತೆ, ಸ್ನೇಹ ಮತ್ತು ಸಮಾಜ ಮುಂತಾದವುಗಳನ್ನು ಅಭಿವ್ಯಕ್ತಿಸುತ್ತದೆ.

- **ರಾಜನೀತಿ (39-63):** ಅರಸನ ಹಿರಿಮೆ, ವಿದ್ಯೆ, ಕೇಳುವಿಕೆ, ಅರಿವು ಮೊದಲ್ಗೊಂಡು ನ್ಯಾಯಾಡಳಿತ, ಬೇಹುಗಾರಿಕೆ, ಪುರುಷ ಪ್ರಯತ್ನ ಪಡೆದಿರುವುದು, ಆಪತ್ತಿನಲ್ಲಿ ಸ್ಥೈರ್ಯದವರೆಗೆ. ಅಡಳಿತ ಮಾಡುವವರ ವಿಶೇಷ ಗುಣಾತಿಶಯಗಳೂ ನೀತಿಗನುಸಾರವಾದ ಆಡಳಿತವೂ ಇಲ್ಲಿ ಕೇಂದ್ರಬಿಂದುವಾಗಿದೆ.
- **ಅಮಾತ್ಯತೆ (64-95):** ಮಂತ್ರಿಗುಣ, ಮಾತಿನ ಬಲಿಮೆ, ಕಾರ್ಯ ನಿರ್ಧಾರ, ರಾಯಭಾರ, ನಾಡು, ಕೋಟೆ, ಸಿರಿಕೂಡಿಸುವ ಬಗೆ, ಪಡೆ, ಸ್ನೇಹ, ಹಗೆತನ, ಔಷಧ ಸೇವನೆ. ಆಡಳಿತಾಂಗಗಳನ್ನು ಒಂದೊಂದಾಗಿ ಪರಿಶೀಲಿಸುತ್ತದೆ.
- **ಉಳಿಕೆ(ಇತರ ವಿಚಾರಗಳು) (96-108):** ಕುಲದ ಹಿರಿಮೆ, ಮಾನ, ಸದ್ಭಾವನೆ, ಸದ್ಗುಣವುಳ್ಳವರಾಗಿರುವುದು, ಉಳುವುದು, ಬಡತನ, ಭಿಕ್ಷಾಟನೆ, ಕೀಳುತನ, ನಾಗರಿಕರ ಸದ್ಗುಣಗಳನ್ನು ಕುರಿತು ಇಲ್ಲಿ ಅಭಿವ್ಯಕ್ತಿಸಲಾಗಿದೆ.

**ಕಾಮ ಭಾಗ – 25 ಅಧ್ಯಾಯಗಳು**

ಕಾಮಭಾಗವು ಸಂಗಂ ಸಾಹಿತ್ಯದಲ್ಲಿನ ಆಂತ್ರಿಕ ಜೀವನಕ್ರಮದ ಹಿನ್ನೆಲೆಯಲ್ಲಿ ರಚನೆಗೊಂಡ ಪ್ರೇಮ ನಾಟಕ. ನಾಯಕ, ನಾಯಕಿ, ಗೆಳತಿ-ಮೊದಲಾದವರ ಹೇಳಿಕೆಗಳಾಗಿಯೇ ಕುರಳ್‌ಗಳು ರಚನೆಯಾಗಿವೆ. 'ಸೂಚಿಸದು ಒಬ್ಬರ ಅಂಕಿತನಾಮವನು' ಎಂಬ ತೋಲ್ಕಾಪ್ಪಿಯದ ತತ್ವಕ್ಕೆ ಅನುಗುಣವಾಗಿ ಯಾರ ಹೆಸರೂ ಉಲ್ಲೇಖಿತವಾಗಿಲ್ಲ; ಆದ್ದರಿಂದ ಈ ಪ್ರಣಯ ಎಲ್ಲರಿಗೂ ಸೇರುವಂಥದ್ದಾಗಿದೆ.

**ರಹಸ್ಯ ಪ್ರಣಯ (109-115):** ಕಾಮಿನಿಯ ಸೌಂದರ್ಯಬಾಧೆ ಮೊದಲ್ಗೊಂಡು ವದಂತಿಯನ್ನು ಕುರಿತು ನುಡಿಯುವ ವರೆಗೆ. ವಿವಾಹಕ್ಕೆ ಹಿಂದಿನ ಪ್ರಣಯ.

**ಗೃಹಧರ್ಮ(ಪತಿವ್ರತಾಧರ್ಮ) (116-133):** ವಿಹವನ್ನು ತಾಳದಿರುವುದು ಮೊದಲ್ಗೊಂಡು ಪ್ರಣಯ ಕಲಹದ ಆನಂದದವರೆಗೆ. ವಿವಾಹಿತ ದಂಪತಿಗಳ ಅಗಲಿಕೆ, ವ್ಯಸನ, ಕಲಹ, ಪುನರ್ಮಿಲನ ಮುಂತಾದವು.

ಧರ್ಮವಿಲ್ಲದ ಅರ್ಥ(ರಾಜನೀತಿ), ಅರ್ಥವಿಲ್ಲದ ಕೌಟುಂಬಿಕ ಜೀವನ, ಪ್ರೀತಿ ಇಲ್ಲದ ಆನಂದ-ಇವು ವಳ್ಳುವರ ದೃಷ್ಟಿಯಲ್ಲಿ ಪೂರ್ಣವಲ್ಲ. ಧರ್ಮ, ಅರ್ಥ, ಕಾಮ ಮತ್ತು ಮೋಕ್ಷಗಳನ್ನು ಮಾನವ ಜೀವನದ ನಾಲ್ಕು ಆದರ್ಶಗಳಾಗಿ ವಳ್ಳುವರು ಹೇಳುತ್ತಾರೆ. ಅವರು ಮೊದಲ ಮೂರನ್ನೂ ವಿಸ್ತಾರವಾಗಿ ಹೇಳಿ, ಮೋಕ್ಷವನ್ನು ಸನ್ಯಾಸ ಧರ್ಮ ವಿಭಾಗದಲ್ಲೂ ನಿಜವನ್ನು ತಿಳಿಯುವಿಕೆ ಅಧ್ಯಾಯದಲ್ಲೂ ಅಡಕಗೊಳಿಸಿದ್ದಾರೆ. ಈ ಸಾಮಾನ್ಯ ಚೌಕಟ್ಟೇ ತಿರುಕ್ಕುರಳನ್ನು ಭಾರತದ ಯಾವುದೇ ಭಾಗದಲ್ಲಿರುವ ಓದುಗರಿಗೆ ಸುಲಭವಾಗಿ ಪ್ರವೇಶಿಸುವಂತೆ ಮಾಡುತ್ತದೆ.

**ಕುರಳ್ ವೆಣ್ಬಾ ಛಂದಸ್ಸು**

- **ಸಾಲು:** ಎರಡು ಸಾಲುಗಳು. ಮೊದಲ ಸಾಲಿನಲ್ಲಿ ನಾಲ್ಕು ಗಣಗಳು, ಕೊನೆಯ ಸಾಲಿನಲ್ಲಿ ಮೂರು ಗಣಗಳು; ಒಟ್ಟು ಏಳು ಗಣಗಳು.
- **ತಳೈ(ಎರಡು ಗಣಗಳ ನಡುವಿನ ಸಂಬಂಧ):** ವೆಣ್ಡಳೈ ಎಂಬುದು ವೆಣ್ಬಾ ಛಂದಸ್ಸು. ಕೊನೆಯ ಸಾಲಿನಲ್ಲಿನ ಕೊನೆಯ ಗಣವು ನಾಳ್(ದಿನ), ಮಲರ್(ಸುಮ), ಕಾಸು(ಹಣ), ಪಿಱಪ್ಪು(ಜನನ) ಎಂಬ ಸಂಕೇತಗಳಲ್ಲಿ ಯಾವುದಾದರೂ ಒಂದನ್ನೊಳಗೊಂಡು ಕೊನೆಗೊಳ್ಳುತ್ತದೆ.
- **ಗಣವಿಂಗಡಣೆ - ಕುರಳ್ 1**: ಅಕರ | ಮುದಲ | ಎಳುತ್ತೆಲ್ಲಾಮ್ | ಆದಿ

  ಭಗವನ್ | ಮುದಱ್ಱೇ | ಉಲಗು.

  (ಅಕಾರವೇ ಮೊದಲು ಅಕ್ಷರದೊಳು ಆದಿ

  ಭಗವಂತನಿರುವಂತೆ ಮೊದಲ್ಗೆ ಧರಣಿಯೊಳು)

ಈ ಸಂಕ್ಷಿಪ್ತತೆಯೇ ಕುರಳಿನ ಶಕ್ತಿಯಾಗಿದೆ. ಅವ್ವೈಯಾರ್ ಅವರು ಇದನ್ನು 'ಅಣುವನ್ನು ರಂಧ್ರಗೊಳಿಸಿ ಏಳು ಸಾಗರಗಳನ್ನು ತುಂಬಿಸಿದಂತೆ ಕಿರಿದಾದ ಕುರಳ್' ಎಂದು ಹೇಳುತ್ತಾರೆ. ಹಾಗಾಗಿ ಈ ಕುರಳ್ಗಳು ಇಂದು ನೆನಪಿನಲ್ಲಿಟ್ಟುಕೊಳ್ಳಲು, ಅನುವಾದಿಸಲು ಮತ್ತು ಸಾಮಾಜಿಕ ಮಾಧ್ಯಮದಲ್ಲಿ ಹಂಚಿಕೊಳ್ಳಲು ಸೂಕ್ತವಾಗಿವೆ.

**ತಿರುಕ್ಕುರಳಿನ ಇನ್ನಿತರ ವಿಶೇಷ ಹೆಸರುಗಳು**

ಮುಪ್ಪಾಲ್, ಉತ್ತರವೇದಂ, ದೈವನೂಲ್, ಪೊಯ್ಯಾಮೊಳಿ, ವಾಯುರೈವಾಳ್ತು, ಪೊದುಮಱೈ ಎಂಬವು ತಿರುಕ್ಕುರಳಿನ ಕೆಲವು ವಿಶೇಷ ಹೆಸರುಗಳಾಗಿವೆ. 'ಪೊದುಮಱೈ(ಸಾರ್ವತ್ರಿಕ ವೇದ)' ಎಂಬ ಹೆಸರಿಗೆ ಕಾರಣ ಅದರಲ್ಲಿ ಅಡಕಗೊಂಡಿರುವ ವಿಷಯ. ಫ್ರೆಂಚ್ ಅನುವಾದಕ ಎ. ಎಸ್. ಏರಿಯಲ್ ಹೇಳಿದಂತೆ, ವಳ್ಳುವರು 'ಜಾತಿ, ಜನರು, ನಂಬಿಕೆ- ಯಾವುದನ್ನೂ ಗಮನಿಸದೆ ಇಡೀ ಮಾನವ ಸಮುದಾಯಕ್ಕೇ ಮಾತನಾಡುತ್ತಾರೆ.'

# ಅಧ್ಯಾಯ 4 - ವ್ಯಾಖ್ಯಾನಕಾರರು ಮತ್ತು ಆವೃತ್ತಿ(ಮುದ್ರಣ)ಯ ಇತಿಹಾಸ

ಹತ್ತನೇ ಶತಮಾನದಿಂದ ಹದಿಮೂರನೇ ಶತಮಾನದವರೆಗೆ ಪರಿಮೇಲಳಗರ್, ಮಣಕ್ಕುಡವರ್, ಕಾಳಿಂಗರ್, ಪರಿದಿಯಾರ್, ಪರಿಪೆರುಮಾಳ್, ದರುಮರ್, ತಾಮತ್ತರ್, ನಚ್ಚರ್, ತಿರುಮಲೈಯಾರ್, ಮಲ್ಲರ್-ಎಂಬ ಹತ್ತು ವ್ಯಾಖ್ಯಾನಕಾರರು ತಿರುಕ್ಕುರಳಿಗೆ ವ್ಯಾಖ್ಯಾನಗಳನ್ನು ಬರೆದಿದ್ದಾರೆ. ಇವುಗಳಲ್ಲಿ, ಮಣಕ್ಕುಡವರ್, ಪರಿದಿಯಾರ್, ಕಾಳಿಂಗರ್, ಪರಿಪೆರುಮಾಳ್, ಪರಿಮೇಲಳಗರ್-ಮುಂತಾದವರ ವ್ಯಾಖ್ಯಾನಗಳು ಪೂರ್ಣವಾಗಿ ಲಭ್ಯವಿದೆ; ದರುಮರ್, ತಾಮತ್ತರ್ ಮತ್ತು ನಚ್ಚರ್-ಮೊದಲಾದವರ ವ್ಯಾಖ್ಯಾನಗಳು ಭಾಗಭಾಗವಾಗಿ ಲಭ್ಯವಿದೆ. ತಿರುಮಲೈಯಾರ್, ಮಲ್ಲರ್ ಅವರ ವ್ಯಾಖ್ಯಾನಗಳು ಪ್ರಸ್ತುತ ಲಭ್ಯವಿಲ್ಲ. ಈ ವ್ಯಾಖ್ಯಾನ ಪರಂಪರೆಯೇ ತಿರುಕ್ಕುರಳನ್ನು ಹಲವು ಶತಮಾನಗಳಿಂದ ಸಂರಕ್ಷಿಸಿ ಇಂದಿನ ಪೀಳಿಗೆಗೆ ನೀಡಿದೆ.

**ಸಮಕಾಲೀನ ವ್ಯಾಖ್ಯಾನಗಳು**

19-20ನೇ ಶತಮಾನಗಳಲ್ಲಿ ಕವಿರಾಜ ಪಂಡಿತರು, ಉ.ವೇ.ಸ್ವಾಮಿನಾಥಯ್ಯರ್, ಕೆ.ವಡಿವೇಲು ಚೆಟ್ಟಿಯಾರ್, ಅಯೋಧ್ಯದಾಸರ್, ವಿ.ಓ. ಚಿದಂಬರನಾರ್, ತಿರು.ವಿ.ಕ., ನಾಮಕ್ಕಲ್ ಕವಿಞರ್, ಭಾರತಿದಾಸನ್-ಮುಂತಾದವರು ತಿರುಕ್ಕುರಳಿಗೆ ವ್ಯಾಖ್ಯಾನಗಳನ್ನು ರಚಿಸಿದ್ದಾರೆ. ಸರಳ ವ್ಯಾಖ್ಯಾನ ಪರಂಪರೆಯು 1949ರಲ್ಲಿ ಎಂ.ವರಧರಾಜನಾರ್ ಅವರ 'ತಿರುಕ್ಕುರಳ್ ಸರಳ ವ್ಯಾಖ್ಯಾನ'ದಿಂದ ಆರಂಭವಾಯಿತು. ಪ್ರಸ್ತುತ ಕಾಲಘಟ್ಟದಲ್ಲೂ ತಿರುಕ್ಕುರಳಿಗೆ ವ್ಯಾಖ್ಯಾನಗಳನ್ನು ಮುಂದುವರಿಕೆಯಾಗಿ ಬರೆಯಲಾಗುತ್ತಿದೆ.

**ಹಸ್ತಪ್ರತಿಯಿಂದ ಮುದ್ರಣಕ್ಕೆ**

ಶತಮಾನಗಳಿಂದಲೂ ತಿರುಕ್ಕುರಳನ್ನು ಹಸ್ತಪ್ರತಿಗಳಲ್ಲೇ ಸಂರಕ್ಷಿಸಲಾಗಿದೆ. 1812ರಲ್ಲಿ ತಂಜಾವೂರಿನ ಜ್ಞಾನಪ್ರಕಾಶ್ ಅವರು ನಾಳಡಿಯಾರ್ ಮತ್ತು ತಿರುವಳ್ಳುವಮಾಲೈ ಜೊತೆಗೆ ತಿರುಕ್ಕುರಳನ್ನು ಮೊದಲ ಮುದ್ರಿತ ಆವೃತ್ತಿಯನ್ನು ಪ್ರಕಟಿಸಿದರು. ಅಂದಿನಿಂದ ಇಂದಿನವರೆಗೆ ನೂರಾರು ಆವೃತ್ತಿಗಳು ಪ್ರಕಟಗೊಂಡಿವೆ.

**ತಂತ್ರಜ್ಞಾನದ ಕಾಲಘಟ್ಟ**

ಇಂದು ಸಂಪೂರ್ಣ ತಿರುಕ್ಕುರಳ್ ಬಹುಭಾಷಾ ಆಯಪ್‌ಗಳು, ಆಡಿಯೊ ಸೇರಿದಂತೆ ಹೊಸ ಆಯಾಮಗಳಲ್ಲಿ ಅಂತರ್ಜಾಲ ಮತ್ತು ಸ್ಮಾರ್ಟ್‌ಫೋನ್‌ಗಳಲ್ಲಿ ಲಭ್ಯವಿದೆ.

## ಅಧ್ಯಾಯ 5 – ದಿವ್ಯಗ್ರಂಥ ತಿರುಕ್ಕುರಳ್

ಈ ಅಧ್ಯಾಯವು ತಿರುಕ್ಕುರಳಿನ 108 ಅಧ್ಯಾಯಗಳ ವಸ್ತುವಿಷಯಗಳನ್ನು ಕುರಿತು ಪರಿಚಯಾತ್ಮವಾಗಿ ಒಂದರಿಂದ ಇಪ್ಪತ್ತಮೂರು ಶೀರ್ಷಿಕೆಗಳ ಅಡಿಯಲ್ಲಿ ರಚನೆಗೊಂಡಿದೆ.

### 5.1 ತಿರುಕ್ಕುರಳಿನಲ್ಲಿ ಪ್ರೀತಿ ಮತ್ತು ಧರ್ಮ

ಸಾರ್ವತ್ರಿಕ ವೇದವಾಗಿ ಪೂಜಿಸಲ್ಪಡುವ ತಿರುಕ್ಕುರಳ್, ಮಾನವ ಜೀವನದ ಮೂಲ ಮೌಲ್ಯಗಳನ್ನು ಬಹಳ ಸಮೃದ್ಧತೆಯಿಂದ ಮತ್ತು ಆಳವಾಗಿ ವಿವರಿಸುವ ಜೀವನಶೈಲಿಯ ಸಾಹಿತ್ಯ ರಚನೆಯಾಗಿದೆ. ತಿರುವಳ್ಳುವರು ಒಬ್ಬ ವ್ಯಕ್ತಿ ಹೇಗೆ ಬದುಕಬೇಕು ಎಂಬುದನ್ನು ಮಾತ್ರವಲ್ಲದೆ, ಅವನು ಯಾವ ರೀತಿಯ ಮನಸ್ಥಿತಿಯೊಂದಿಗೆ ಬದುಕಬೇಕು ಎಂಬುದನ್ನು ಸಹ ವಿವರಿಸುತ್ತಾರೆ. ಆ ಜೀವನಶೈಲಿಯ ಬಗೆಗಿನ ಚಿಂತನೆಯ ಕೇಂದ್ರದಲ್ಲಿ ಪ್ರೀತಿ ಮತ್ತು ಸದ್ಗುಣಗಳಿವೆ. ತಿರುಕ್ಕುರಳಿನಲ್ಲಿ ಪ್ರೀತಿಯು ಸದ್ಗುಣದ ಜೀವಾಳವಾಗಿಯೂ, ಸದ್ಗುಣವು ಪ್ರೀತಿಯ ಅನುಷ್ಠಾನವಾಗಿಯೂ ಪ್ರಕಟವಾಗುತ್ತವೆ.

**ಪ್ರೀತಿ - ಮಾನವ ಜೀವನದ ಅಡಿಪಾಯ**

ತಿರುವಳ್ಳುವರ್ ಪ್ರೀತಿಯನ್ನು ಕೇವಲ ಭಾವನೆಯಾಗಿ ಆಲೋಚಿಸಿಲ್ಲ; ಅವರು ಮನುಷ್ಯನನ್ನು ಸ್ವಾರ್ಥದಿಂದ ಸಾಮಾನ್ಯ ಒಳಿತಿನ ಕಡೆಗೆ ಉನ್ನತೀಕರಿಸುವ ಮೂಲಭೂತ ಗುಣವಾಗಿ ನೋಡುತ್ತಾರೆ.

> அன்பிலார் எல்லாம் தமக்குரியர் அன்புடையார்
> என்பும் உரியர் பிறர்க்கு. (குறள் 72)
>
> ಅನ್ಬಿಲಾರ್ ಎಲ್ಲಾಮ್ ತಮಕ್ಕುರಿಯರ್ ಅನ್ಬುಡೈಯಾರ್
> ಎನ್ಬುಮ್ ಉರಿಯರ್ ಪಿಱರ್ಕ್ಕು.
>
> ಪ್ರೇಮರಹಿತರು ಎಲ್ಲವನೂ ತಮದೆಂಬರು
> ಪ್ರೇಮವುಳ್ಳವರು ತನ್ನೆಲುಬನೂ ಅರ್ಪಿಸುವರು ಪರರಿಗೆ.(ಕುರಳ್ 72)

ಎಂಬುದರ ಮೂಲಕ ಪ್ರೀತಿಯಿಲ್ಲದವನ ಮನಸ್ಸು ತನ್ನ ಸ್ವಾರ್ಥವನ್ನು ಮಾತ್ರ ಯೋಚಿಸುತ್ತದೆ. ಪ್ರೀತಿಯುಳ್ಳ ಹೃದಯವು ತನ್ನ ಎಲುಬನ್ನೂ ಸಹ ಇತರರಿಗೆ ನೀಡಲು ಹಿಂಜರಿಯುವುದಿಲ್ಲ. ಹೀಗಾಗಿ ಪ್ರೀತಿ 'ನಾನು' ಎಂಬ ಸಂಕುಚಿತ ಭಾವನೆಯನ್ನು 'ನಾವು' ಎಂಬ ವಿಶಾಲ ಭಾವನೆಯಾಗಿ ಪರಿವರ್ತಿಸುತ್ತದೆ. ಅದು ಕುಟುಂಬದಲ್ಲಿ ವಾತ್ಸಲ್ಯವಾಗಿಯೂ, ಸಮುದಾಯದಲ್ಲಿ ಕರುಣೆಯಾಗಿಯೂ, ಜಾಗತಿಕಮಟ್ಟದಲ್ಲಿ ಮಾನವೀಯತೆಯಾಗಿಯೂ ವಿಸ್ತರಿಸುತ್ತದೆ.

> அன்பின் வழியது உயிர்நிலை அஃதிலார்க்கு
> என்புதோல் போர்த்த உடம்பு. (குறள் 80)
>
> ಅನ್ಬಿನ್ ವೞಿಯದು ಉಯಿರ್ನಿಲೈ ಅಃದಿಲಾರ್ಕ್ಕು
> ಎನ್ಬುತೋಲ್ ಪೋರ್ತ್ತ ಉಡಮ್ಬು.
>
> ಪ್ರೇಮಮಯ ಶರೀರದಲಿ ಜೀವಿಸುವುದು ಆತ್ಮ
> ಪ್ರೇಮರಹಿತನ ಶರೀರ ತೊಗಲ ಹೊದ್ದ ಅಸ್ಥಿಪಂಜರವು. (ಕುರಳ್ 80)

ಶರೀರವು ಜೀವಂತವಾಗಿರುವುದು ಮಾತ್ರ ಜೀವನವಲ್ಲ; ಇತರ ಜೀವಿಗಳ ಸಂತೋಷ ಮತ್ತು ದುಃಖವನ್ನು ಅನುಭವಿಸುವ ಮನಸ್ಸು ಇದ್ದಾಗ ಮಾತ್ರ ಜೀವನ ಅರ್ಥಪೂರ್ಣವಾಗುತ್ತದೆ. ಆದುದರಿಂದ, ತಿರುವಳ್ಳುವರ ದೃಷ್ಟಿಯಲ್ಲಿ ಪ್ರೀತಿಯೆಂಬುದು

ಕೇವಲ ಮಾನವನ ಗುಣವಲ್ಲ; ಅದು ಮಾನವ ಜೀವನದ ಜೀವಾಳ.

**ಪ್ರೀತಿ ಮತ್ತು ಧರ್ಮ**

ಪ್ರೀತಿ ಮತ್ತು ಧರ್ಮದ ನಡುವಿನ ಅವಿನಾಭಾವ ಸಂಬಂಧವನ್ನು,

அன்பும் அறனும் உடைத்தாயின் இல்வாழ்க்கை
பண்பும் பயனும் அது. (குறள் 45)

ಅನ್ಬುಮ್ ಅಱನುಮ್ ಉಡೈತ್ತಾಯಿನ್ ಇಲ್ವಾೞ್ಕ್ಕೈ
ಪಣ್ಬುಮ್ ಪಯನುಮ್ ಅದು.

ಪ್ರೇಮ ಮಯ ಧರ್ಮ ಮಾರ್ಗದಲಿ ಸ್ಥಿತ
ಗೃಹಸ್ಥಂಗೆ ಕೇಳದೆ ದೊರಕುವುದು ಸುಫಲ ಪ್ರಾಪ್ತಿ. (ಕುರಳ್ 45)

ಎಂಬ ಕುರಳ್ ತಿಳಿಸುತ್ತದೆ. ಗೃಹಜೀವನದ ಹಿರಿಮೆ ಸಂಪತ್ತಿನಲ್ಲೋ ಅಥವಾ ಅಧಿಕಾರದಲ್ಲೋ ಇಲ್ಲ; ಅದು ಪ್ರೀತಿ ಮತ್ತು ಧರ್ಮಗಳಿಂದ ಕೂಡಿದ ಜೀವನದಲ್ಲಿದೆ. ಇಲ್ಲಿ ಪ್ರೀತಿಯು ಅಂತರಂಗದ ಗುಣವಾಗಿಯೂ, ಧರ್ಮ ಅದರ ಕಾರ್ಯ ರೂಪವಾಗಿಯೂ ನೆಲೆಗೊಂಡಿದೆ.

ಪ್ರೀತಿಯುಳ್ಳ ವ್ಯಕ್ತಿ ಇತರರಿಗೆ ಹಾನಿ ಮಾಡಲು ಬಯಸುವುದಿಲ್ಲ. ಇತರರ ನೋವನ್ನು ತನ್ನದೇ ನೋವು ಎಂದು ಭಾವಿಸುವ ವ್ಯಕ್ತಿಯಿಂದ ಸ್ವಾಭಾವಿಕವಾಗಿಯೇ ದಾನ, ಆತಿಥ್ಯ, ಕೇಡೆಣಿಸದಿರುವುದು, ಕೊಲ್ಲದಿರುವುದು ಮತ್ತು ಕರುಣೆಗಳಂತಹ ಸದ್ಗುಣಗಳು ಉದ್ಭವಿಸುತ್ತವೆ. ಆದುದರಿಂದ, ತಿರುಕ್ಕುರಳಿನಲ್ಲಿ ಉಲ್ಲೇಖಿಸಲಾದ ಸದ್ಗುಣಗಳು ಬಲವಂತವಾಗಿ ಹೇರಲ್ಪಡುವ ಶಿಸ್ತಲ್ಲ; ಅವು ಪ್ರೀತಿಯಿಂದ ಸಹಜವಾಗಿ ಹುಟ್ಟಿಕೊಳ್ಳುವ ಜೀವನ ಮಾರ್ಗ. ಇದನ್ನು,

அறத்திற்கே அன்புசார்பு என்ப அறியார்
மறத்திற்கும் அஃதே துணை. (குறள் 76)

ಅಱತ್ತಿಱ್ಕೇ ಅನ್ಬುಸಾರ್ಬು ಎನ್ಬ ಅಱಿಯಾರ್
ಮಱತ್ತಿಱ್ಕುಮ್ ಅಃದೇ ತುಣೈ.

ಧರ್ಮಕ್ಕೆ ಮಾತ್ರ ಪ್ರೇಮ ಯುಗ್ಮವೆಂಬರು ಅಜ್ಞಾನಿಗಳು
ಅಧರ್ಮಕ್ಕೆ ಕಾವಲು ಅದುವೇ. (ಕುರಳ್ 76)

ಎಂದು ವಳ್ಳುವರು ಮತ್ತಷ್ಟು ಗಂಭೀರವಾಗಿ ವಿವರಿಸುತ್ತಾರೆ. ಪ್ರೀತಿ ಕೇವಲ ಮೃದುತ್ವದ ಸಂಕೇತವಲ್ಲ; ಅದು ಒಬ್ಬ ವ್ಯಕ್ತಿಯು ತನ್ನ ಕರ್ತವ್ಯವನ್ನು ಮಾಡಲು, ಇತರರ ಒಳಿತಿಗಾಗಿ ತ್ಯಾಗಗಳನ್ನು ಮಾಡಲು ಮತ್ತು ನ್ಯಾಯದ ಪರವಾಗಿ ಧೈರ್ಯದಿಂದ ನಿಲ್ಲಲು ಪ್ರೇರೇಪಿಸುವ ಆಂತರಿಕ ಶಕ್ತಿಯಾಗಿದೆ.

**ಧರ್ಮ(ಸದ್ಗುಣ) – ಮಾನಸಿಕ ಪರಿಶುದ್ಧತೆಯಿಂದ ಪ್ರಾರಂಭವಾಗುತ್ತದೆ**

ತಿರುವಳ್ಳುವರ್ ಅವರ ನೈತಿಕ ಚಿಂತನೆಯು ಬಾಹ್ಯ ಕ್ರಿಯೆಗಳನ್ನು ಮಾತ್ರ ಆಧರಿಸಿಲ್ಲ. ಅದು ಆಂತರಿಕತೆಯನ್ನು ಆಧರಿಸಿದೆ. ನೈತಿಕತೆಯ ಆರಂಭವು ಮಾನವ ಮನಸ್ಸು. ಆದುದರಿಂದ

மனத்துக்கண் மாசிலன் ஆதல் அனைத்தறன்
ஆகுல நீர பிற. (குறள் 34)

ಮನತ್ತುಕ್ಕಣ್ ಮಾಸಿಲನ್ ಆದಲ್ ಅನೈತ್ತಱನ್
ಆಗುಲ ನೀರ ಪಿಱ.

ಮನವಿರೆ ಮಲರಹಿತವಾಗಿ ಅದುವೇ ಶ್ರೇಯ ಧರ್ಮವು
ಬೇರೆಲ್ಲವ ಪಾಲಿಪದು ಬರೇ ಮಾತಿನ ಔತಣವು. (ಕುರಳ್ 34)

ಎಂದು ಮನಸ್ಸಿನ ಪರಿಶುದ್ಧತೆಯೇ ಧರ್ಮದ ಆಧಾರವಾಗಿದೆ ಎಂದು ವಳ್ಳುವರ್ ಹೇಳುತ್ತಾರೆ. ಒಂದು ಕಾರ್ಯವು ಹೊರನೋಟಕ್ಕೆ ಚೆನ್ನಾಗಿ ಕಂಡುಬಂದರೂ, ಅದರ ಹಿಂದೆ ಮೋಸ, ಅಸೂಯೆ, ದುರಾಸೆ ಅಥವಾ ಕೀರ್ತಿಯ ಲಾಲಸೆ ಇದ್ದರೆ, ಅದರ ಸದ್ಗುಣ ಮೌಲ್ಯ ಕಡಿಮೆಯಾಗುತ್ತದೆ. ಆದುದರಿಂದ, ಸದ್ಗುಣವೆಂಬುದು ಒಬ್ಬ ವ್ಯಕ್ತಿ ಏನು ಮಾಡುತ್ತಾನೆ ಎಂಬುದರಲ್ಲಿ ಮಾತ್ರವಲ್ಲ; ಅವನು ಅದನ್ನು ಏಕೆ ಮಾಡುತ್ತಾನೆ ಎಂಬುದರಲ್ಲೂ ಇರುತ್ತದೆ.
ಸದ್ಗುಣದ ಮಹತ್ವವನ್ನು,

அறத்தினூஉங்கு ஆக்கமும் இல்லை அதனை
மறத்தலின் ஊங்கில்லை கேடு. (குறள் 32)

ಅಱತ್ತಿನೂಉಙ್ಗು ಆಕ್ಕಮುಮ್ ಇಲ್ಲೈ ಅದನೈ
ಮಱತ್ತಲಿನ್ ಊಙ್ಗಿ ಲ್ಲೈ ಕೇಡು.

ಧರ್ಮ ಪಾಲನೆಯೇ ಶ್ರೇಯಕ್ಕೆ ಹಾದಿ,
ಧರ್ಮವ ಮರೆವುದು ಬೇರಲ್ಲ ಕೇಡು.(ಕುರಳ್ 32)

ಎಂದು ತಿರುವಳ್ಳುವರು ಪ್ರತಿಪಾದಿಸುತ್ತಾರೆ. ಸಂಪತ್ತು ಮತ್ತು ಅಧಿಕಾರ ಶಾಶ್ವತವಲ್ಲ; ಆದರೆ ಸದ್ಗುಣದ ಮೂಲಕ ಗಳಿಸಿದ ಮಾನವ ಮೌಲ್ಯ ಶಾಶ್ವತ. ಇದೇ ಕಾರಣಕ್ಕಾಗಿ ವಳ್ಳುವರು ಸದ್ಗುಣವನ್ನು ಮಾನವ ಜೀವನದ ಅತ್ಯುನ್ನತ ಸಂಪತ್ತಾಗಿ ನೋಡುತ್ತಾರೆ.

**ಪ್ರೀತಿ ಮತ್ತು ಕರುಣೆ**

ತಿರುಕ್ಕುರಳಿನಲ್ಲಿ ಪ್ರತಿಪಾದಿಸಲಾದ ಪ್ರೀತಿಯು ಕುಟುಂಬ ಮತ್ತು ಸಂಬಂಧಿಕರೊಂದಿಗೆ ನಿಲ್ಲುವುದಿಲ್ಲ. ಅದು ಇತರ ಮನುಷ್ಯರನ್ನು ಮೀರಿ ಎಲ್ಲಾ ಜೀವಿಗಳನ್ನು ಅಪ್ಪಿಕೊಳ್ಳುವಾಗ ಕರುಣೆಯೆಂಬ ಅತ್ಯುನ್ನತ ಮಟ್ಟವನ್ನು ತಲುಪುತ್ತದೆ.

அருட்செல்வம்செல்வத்துள் செல்வம் பொருட்செல்வம்
பூரியார் கண்ணும் உள. (குறள் 241)

ಅರುಟ್ಚೆಲ್ವಮ್ ಸೆಲ್ವತ್ತುಳ್ ಸೆಲ್ವಮ್ ಪೊರುಟ್ಚೆಲ್ವಮ್
ಪೂರಿಯಾರ್ ಕಣ್ಣುಮ್ ಉಳ.

ಸಂಪತ್ತೊಳು ಶ್ರೇಷ್ಠವು ದಯಾಭಾವನೆ ಎಂಬ ಸಂಪತ್ತು; ಧನ
ಸಂಪತ್ತ ನೀಚ ವ್ಯಕ್ತಿಯೂ ಪಡೆದಿರಬಹುದು. (ಕುರಳ್ 241)

ಇತರ ಜೀವಿಗಳ ದುಃಖವನ್ನು ತಿಳಿಯುವ ಕರುಣೆಯೆಂಬ ಸಂಪತ್ತೇ ಹಣವಂತಿಕೆಯ ಸಂಪತ್ತಿಗಿಂತ ಶ್ರೇಷ್ಠವಾದದ್ದು. ಈ ರೀತಿ ತಿರುಕ್ಕುರಳಿನಲ್ಲಿ ಅಭಿವ್ಯಕ್ತಗೊಂಡಿರುವ ಪ್ರೀತಿ, ವೈಯಕ್ತಿಕ ಪ್ರೀತಿ → ಕೌಟುಂಬಿಕ ಪ್ರೀತಿ → ಸಾಮಾಜಿಕ ಪ್ರೀತಿ→ ಗಾಢವಾದ ವಾತ್ಸಲ್ಯವಾಗಿ ವಿಸ್ತರಿಸುತ್ತದೆ. ಆದುದರಿಂದಲೇ,

தன்னுயிர்க்கு இன்னாமை தானறிவான் என்கொலோ
மன்னுயிர்க்கு இன்னா செயல். (குறள் 318)

තන්නුයිර්ක්කු ඉන්නාමෛ තානඅිවාන් එන්කොලෝ
මන්නුයිර්ක්කු ඉන්නා සෙයල්.

ತನಗದು ಅಹಿತವೆಂದು ತಾನರಿತಿರೆ ಎಂದೂ
ಪರರಿಗೆ ಅಹಿತವ. (ಕುರಳ್ 318)

ಎಂದು ತಿರುವಳ್ಳುವರು ಕೇಳುತ್ತಾರೆ. ತನ್ನ ಜೀವಕ್ಕೆ ಇದು ಕೆಡುಕಾದುದು ಎಂದು ಅರಿತುಕೊಂಡವನು ಇತರ ಜೀವಿಗಳಿಗೂ ಆ ಕೇಡನ್ನೆಸಗುವುದರ ಕಾರಣವೇನೋ? ಎಂಬ ಈ ಪ್ರಶ್ನೆಯಲ್ಲಿ ನೈತಿಕತೆಯ ಆಳವಾದ ಅಡಿಪಾಯ ಪ್ರಕಟಗೊಳ್ಳುತ್ತದೆ. ಇತರರ ಸ್ಥಾನದಲ್ಲಿ ತನ್ನನ್ನು ತಾನು ನೋಡುವ ಮನಸ್ಸೇ ನಿಜವಾದ ನೈತಿಕತೆಯ ಆರಂಭವಾಗಿದೆ.

**ಇಂದಿನ ಜಗತ್ತಿಗೆ ಒಂದು ಸಂದೇಶ**

ವಿಜ್ಞಾನ, ತಂತ್ರಜ್ಞಾನ ಮತ್ತು ಆರ್ಥಿಕತೆಯಲ್ಲಿ ಮಾನವ ಸಮಾಜವು ಅಗಾಧ ಪ್ರಗತಿ ಸಾಧಿಸಿದ್ದರೂ, ದ್ವೇಷ, ಹಿಂಸೆ, ಸ್ವಾರ್ಥ ಮತ್ತು ತಾರತಮ್ಯಗಳಂತಹ ಸಮಸ್ಯೆಗಳು ಮುಂದುವರಿದಿವೆ. ಈ ನಿಟ್ಟಿನಲ್ಲಿ, ತಿರುಕ್ಕುರಳಿನಲ್ಲಿ ಅಭಿವ್ಯಕ್ತವಾಗಿರುವ ಪ್ರೀತಿ ಮತ್ತು ನೈತಿಕತೆಯು ಪ್ರಾಚೀನ ಅಭಿಪ್ರಾಯಗಳಾಗಿರದೆ, ಇಂದಿನ ಜಗತ್ತಿಗೂ ಅಗತ್ಯವಾದ ಮಾನವೀಯ ತತ್ವಗಳಾಗಿವೆ.

ಜ್ಞಾನವು ಮನುಷ್ಯನಿಗೆ ಶಕ್ತಿಯನ್ನು ನೀಡುತ್ತದೆ; ಧರ್ಮವು ಆ ಶಕ್ತಿಯನ್ನು ಒಳಿತಿಗಾಗಿ ಬಳಸಲು ಅವನಿಗೆ ಮಾರ್ಗದರ್ಶನ ನೀಡುತ್ತದೆ. ತಂತ್ರಜ್ಞಾನವು ಮನುಷ್ಯರನ್ನು ಒಗ್ಗೂಡಿಸುತ್ತದೆ; ಪ್ರೀತಿ ಅವರ ಹೃದಯಗಳನ್ನು ಒಗ್ಗೂಡಿಸುತ್ತದೆ. ಕಾನೂನು ತಪ್ಪು ಮಾಡುವುದನ್ನು ತಡೆಯುತ್ತದೆ; ಧರ್ಮವು ತಪ್ಪು ಮಾಡದಂಥ ಮನಸ್ಸನ್ನು ರೂಪಿಸುತ್ತದೆ.

ತಿರುಕ್ಕುರಳಿನಲ್ಲಿ ಕಂಡುಬರುವ ಪ್ರೀತಿ ಮತ್ತು ಧರ್ಮಗಳು ಎರಡು ಪ್ರತ್ಯೇಕ ತತ್ವಗಳಲ್ಲ. ಪ್ರೀತಿ ಧರ್ಮದ ಮೂಲ ಬೇರಾಗಿಯೂ, ಧರ್ಮ ಪ್ರೀತಿಯ ಫಲವಾಗಿಯೂ ಪರಿಣಮಿಸುತ್ತವೆ. ಪ್ರೀತಿ ಮನುಷ್ಯನನ್ನು ಸ್ವಾರ್ಥದಿಂದ ಮುಕ್ತಗೊಳಿಸುತ್ತದೆ; ಧರ್ಮವು ಅವನನ್ನು ಸಾಮಾನ್ಯ ಒಳಿತಿನ ಕಡೆಗೆ ಕರೆದೊಯ್ಯುತ್ತದೆ. ಪ್ರೀತಿ ಕರುಣೆಯಾಗಿ ವಿಸ್ತರಿಸುವಾಗ ಮನುಷ್ಯನು ಎಲ್ಲಾ ಜೀವಿಗಳನ್ನು ತನ್ನೊಂದಿಗೆ ಸಂಪರ್ಕ ಹೊಂದಿದಂತೆ ನೋಡುತ್ತಾನೆ.

ಆದುದರಿಂದ, ತಿರುವಳ್ಳುವರು ಕುರಳ್‌ಗಳಲ್ಲಿ ಅನಾವರಣಗೊಳಿಸಿರುವ ನೈತಿಕ ಜೀವನವು ಭಯದಿಂದ ಆಚರಿಸುವ ನಡೆವಳಿಯಲ್ಲ; ಇದು ಪ್ರೀತಿಯಿಂದ ಸ್ವಾಭಾವಿಕವಾಗಿ ಅರಳುವ ಉನ್ನತ ಜೀವನ ವಿಧಾನವಾಗಿದೆ. ಪ್ರೀತಿ ಮನುಷ್ಯನನ್ನು ಮನುಷ್ಯನನ್ನಾಗಿಸುತ್ತದೆ; ಧರ್ಮವು ಆ ಮನುಷ್ಯನನ್ನು ಶ್ರೇಷ್ಠ ಮನುಷ್ಯನನ್ನಾಗಿಸುತ್ತದೆ. ಇವೆರಡೂ ಒಟ್ಟಿಗೆ ಸೇರಿದಾಗ ಮನುಷ್ಯನ ವೈಯಕ್ತಿಕ ನೆಮ್ಮದಿ, ಕೌಟುಂಬಿಕ ಆರೋಗ್ಯ, ಸಾಮಾಜಿಕ ಏಕತೆ ಮತ್ತು ಜಾಗತಿಕ ಮಾನವೀಯತೆಗಳು ಅರಳುತ್ತವೆ.

## 5.2 ತಿರುಕ್ಕುರಳಿನಲ್ಲಿ ಆತಿಥ್ಯ

ತಮಿಳು ಸಂಸ್ಕೃತಿಯ ಅತ್ಯುನ್ನತ ಸಂಕೇತಗಳಲ್ಲಿ ಆತಿಥ್ಯವೂ ಒಂದು. ಅಪರಿಚಿತರಾಗಿದ್ದರೂ ಸಹ ಮನೆಗೆ ಬಂದವರನ್ನು ನಗುಮುಖದಿಂದ ಸ್ವಾಗತಿಸಿ, ಅವರಿಗೆ ಆಹಾರ ನೀಡಿ, ಪ್ರೀತಿಯಿಂದ ಆರೈಕೆ ಮಾಡುವುದು ತಮಿಳರ ಜೀವನ ವಿಧಾನ. ತಿರುವಳ್ಳುವರು ಇದನ್ನು ಸಾಮಾಜಿಕ ಪದ್ಧತಿಯೆಂದು ಮಾತ್ರ ಪರಿಗಣಿಸದೆ, ಅದನ್ನು ಗೃಹಜೀನದ ಮೂಲಭೂತ ಸದ್ಗುಣವಾಗಿಯೂ ಉನ್ನತೀಕರಿಸುತ್ತಾರೆ. ತಿರುಕ್ಕುರಳಿನಲ್ಲಿ ಅವರು ಅತಿಥಿಸತ್ಕಾರವನ್ನು ಕುರಿತು ಒಂದು ಅಧ್ಯಾಯವನ್ನು ರಚಿಸಿ, ಅತಿಥಿಗಳನ್ನು ಉಪಚರಿಸುವ ಮಹತ್ವವನ್ನು ಸ್ಪಷ್ಟಪಡಿಸುತ್ತಾರೆ.

**ಕೌಟುಂಬಿಕ ಜೀವನದ ಫಲ – ಅತಿಥಿ ಸತ್ಕಾರ**

இருந்தோம்பி இல்வாழ்வது எல்லாம் விருந்தோம்பி
வேளாண்மை செய்தற் பொருட்டு. (குறள் 81)

ಇರುನ್ದೋಮ್ಬಿ ಇಲ್ವಾಳ್ವದು ಎಲ್ಲಾಮ್ ವಿರುನ್ದೋಮ್ಬಿ
ವೇಳಾಣ್ಮೈ ಸೆಯ್ದಱ್ ಪೊರುಟ್ಟು.

ಕಣದಲಿ ಬಡಿದು ದುಡಿದು ಬಾಳ್ವದೆಲ್ಲ
ಕಳ ಕಳನೆ ಅತಿಥಿಯ ಸತ್ಕರಿಸಲಿಕ್ಕಲ್ಲವೆ?. (ಕುರಳ್ 81)

ಒಬ್ಬ ವ್ಯಕ್ತಿ ಧನವನ್ನು ಸಂಪಾದಿಸಿ, ಅದನ್ನು ಸಂರಕ್ಷಿಸಿ ಕುಟುಂಬವನ್ನು ನಿರ್ವಹಿಸುವುದರ ಉದ್ದೇಶವು ಕೇವಲ ತಾನು ಮತ್ತು ತನ್ನ ಕುಟುಂಬಕ ಬದುಕುವುದಕ್ಕೆ ಮಾತ್ರವಲ್ಲ; ಇತರರಿಗೆ ಉಪಯೋಗಿಸುವುದಕ್ಕಾಗಿಯೇ ಎಂದು ತಿರುವಳ್ಳುವರು ಹೇಳುತ್ತಾರೆ. ಇಲ್ಲಿ ಅತಿಥಿ ಸತ್ಕಾರ ಎಂಬುದು ಆಹಾರ ನೀಡುವುದನ್ನು ಮೀರಿ, ತನ್ನಲ್ಲಿರುವುದನ್ನು ಇತರರೊಂದಿಗೆ ಹಂಚಿಕೊಂಡು ಜೀವಿಸುವ ಸಮಾಜ ಧರ್ಮವಾಗಿ ಬದಲಾಗುತ್ತದೆ.

ಅತಿಥಿಗಳು ಹೊರಗೆ ಇರುವಾಗ ಅಮೃತವಾಗಿದ್ದರೂ ತಾನೊಬ್ಬನೇ ಮಾತ್ರ ಸೇವಿಸುವುದು ತಕ್ಕದ್ದಲ್ಲವೆಂಬುದನ್ನು

விருந்து புறத்ததாத் தானுண்டல் சாவா
மருந்தெனினும் வேண்டற்பாற்று அன்று. (குறள் 82)

ವಿರುನ್ದು ಪುಱತ್ತದಾತ್ ತಾನುಣ್ಡಲ್ ಸಾವಾ
ಮರುನ್ದೆನಿನುಮ್ ವೇಣ್ಡಱ್ಪಾಱ್ಱು ಅನ್ಱು.

ಬಂದ ಅತಿಥಿಯ ಸತ್ಕರಿಸದೆ ತಾನುಂಡ
ಅಮೃತವೂ ಅನುಚಿತವಲ್ಲವೆ?. (ಕುರಳ್ 82)

ಎಂಬ ಕುರಳ್ ಮೂಲಕ ವಳ್ಳುವರ್ ಪ್ರಸ್ತುತ ಪಡಿಸುತ್ತಾರೆ. ನಾವು ಗಳಿಸಿದ್ದನ್ನು ನಮಗಾಗಿ ಮಾತ್ರ ಇಟ್ಟುಕೊಳ್ಳುವುದು ಸಂಪತ್ತಿನ ನಿಜವಾದ ಬಳಕೆಯಲ್ಲ ಎಂಬುದೇ ಇದರ ಒಳಾರ್ಥ.

**ಆಹಾರಕ್ಕಿಂತ ಆಹ್ಲಾದಕರ ಮುಖ ಉತ್ತಮವಾದದ್ದು**

ಅತಿಥಿ ಸತ್ಕಾರದಲ್ಲಿ ಆಹಾರ ಮಾತ್ರ ಮುಖ್ಯವಲ್ಲ; ಅದನ್ನು ಬಡಿಸುವ ಮನಸ್ಥಿತಿ ಮತ್ತು ಮುಖಭಾವ ಕೂಡ ಮುಖ್ಯ.

மோப்பக் குழையும் அனிச்சம் முகம்திரிந்து
நோக்கக் குழையும் விருந்து. (குறள் 90)

ಮೋಪ್ಪಕ ಕುೞೈಯುಮ್ ಅನಿಚ್ಚಮ್ ಮುಗಮ್ತಿರಿನ್ದು
ನೋಕ್ಕಕ ಕುೞೈಯುಮ್ ವಿರುನ್ದು.

ಮೂಸಿದೊಡೆ ಮುದಡುವುದು ಅನಿಚ್ಚ ಪುಷ್ಪ
ವಿಮುಖಿನ ನೋಡಲು ಸೊರಗುವನು ಅತಿಥಿ. (ಕುರಳ್ 90)

ಅನಿಚ್ಚ ಎಂಬ ಹೂವು ಮೂಸಿದ ಕೂಡಲೇ ಬಾಡುತ್ತದೆ. ಆ ಹೂವಿನಂತೆ, ವಕ್ರಮುಖದಿಂದ ಅತಿಥಿಯನ್ನು ನೋಡಿ ಸ್ವಾಗತಿಸಿದರೆ ಕೂಡಲೇ ಅವನ ಹೃದಯವೂ ಬಾಡಿಹೋಗುತ್ತದೆ ಎಂದು ತಿರುವಳ್ಳುವರು ಹೇಳುತ್ತಾರೆ. ಒಬ್ಬರು ನೀಡುವ ಹಣದ ಪ್ರಮಾಣಕ್ಕಿಂತ "ನೀವು ನಮಗೆ ಬೇಕಾದವರು" ಎಂಬ ಭಾವನೆಯನ್ನು ಮೂಡಿಸುವುದೇ ನಿಜವಾದ ಅತಿಥಿ ಸತ್ಕಾರ ಎಂದು ಅವರು ಸೂಕ್ಷ್ಮವಾಗಿ ತಿಳಿಸುತ್ತಾರೆ.

**ಸಾಮಾಜಿಕ ಸಂಬಂಧದ ಆಧಾರ**

ಅತಿಥಿ ಸತ್ಕಾರವು ಮನುಷ್ಯರ ನಡುವಿನ ಅಂತರವನ್ನು ಕಡಿಮೆ ಮಾಡುತ್ತದೆ. ಇದು ಅಪರಿಚಿತರನ್ನು ಬಂಧುಗಳಾಗಿ ಪರಿವರ್ತಿಸುತ್ತದೆ; ಇದು ವ್ಯಕ್ತಿಯನ್ನು ಸಮಾಜದೊಡನೆ ಸಂಪರ್ಕಿಸುತ್ತದೆ. ಆದುದರಿಂದ, ಆತಿಥ್ಯವನ್ನು ವೈಯಕ್ತಿಕ

ಸದ್ಗುಣವಾಗಿ ಮಾತ್ರವಲ್ಲದೆ, ಸಾಮಾಜಿಕ ಒಗ್ಗಟ್ಟನ್ನು ರೂಪಿಸುವ ಗುಣವಾಗಿಯೂ ಕಾಣಬಹುದು. ಆತಿಥ್ಯವನ್ನು ಗೃಹಜೀವನದ ಅತ್ಯುನ್ನತ ಕರ್ತವ್ಯವೆಂದು ಪ್ರಶಂಸಿಸಲಾಗಿದೆ ಎಂಬುದನ್ನು,

இருந்தோம்பி இல்வாழ்வது எல்லாம் விருந்தோம்பி
வேளாண்மை செய்தற் பொருட்டு. (குறள் 81)

ಇರುನ್ದೋಮ್ಬಿ ಇಲ್ವಾೞ್ವದು ಎಲ್ಲಾಮ್ ವಿರುನ್ದೋಮ್ಬಿ
ವೇಳಾಣ್ಮೈ ಸೆಯ್ದಱ್ ಪೊರುಟ್ಟು.

ಕಣದಲಿ ಬಡಿದು ದುಡಿದು ಬಾಳ್ವದೆಲ್ಲ
ಕಳ ಕಳನೆ ಅತಿಥಿಯ ಸತ್ಕರಿಸಲಿಕ್ಕಲ್ಲವೆ?. (ಕುರಳ್ 81)

ಎಂಬ ಕುರಳ್(ದ್ವಿಪದಿ) ಸ್ಪಷ್ಟಪಡಿಸುತ್ತದೆ. ಈ ಚಿಂತನೆಯು ಇಂದಿನ ನಗರೀಕರಣ, ವ್ಯಕ್ತಿ ಕೇಂದ್ರಿತ ಜೀವನದಲ್ಲೂ ಪ್ರಸ್ತುತವಾಗಿದೆ. ಅತಿಥಿ ಸತ್ಕಾರದ ಆಧುನಿಕ ರೂಪ ಕೇವಲ ಆಹಾರವನ್ನು ನೀಡುವುದಲ್ಲ; ಇದು ಇತರರನ್ನು ಗೌರವಿಸುವುದು, ಹೊಸಬರನ್ನು ಸ್ವೀಕರಿಸುವುದು ಮತ್ತು ಸಹಾಯ ಬೇಕಾದವರಿಗೆ ಬೆಂಬಲವಾಗಿ ನಿಲ್ಲುವುದು-ಮುಂತಾದವನ್ನು ಸಹ ಒಳಗೊಳ್ಳುದೆ.

ತಿರುಕ್ಕುರಳಿನಲ್ಲಿ, ಅತಿಥಿ ಸತ್ಕಾರವೆಂಬುದು ಆಹಾರವನ್ನು ನೀಡುವ ಕ್ರಿಯೆಯಲ್ಲ; ಅದು ಹೃದಯವನ್ನು ಹಂಚಿಕೊಳ್ಳುವ ಸದ್ಗುಣ. ಸಂಪತ್ತಿನ ಶ್ರೇಷ್ಠತೆ ಅದರ ಸ್ವಾಧೀನದಲ್ಲಿಲ್ಲ; ಅದು ಹಂಚಿಕೊಳ್ಳುವುದರಲ್ಲಿದೆ. ಗೃಹಜೀವನದ ವೈಭವವು ಅದರ ಸೌಕರ್ಯಗಳಲ್ಲಿಲ್ಲ; ಅದು ಅಲ್ಲಿಗೆ ಬರುವ ವ್ಯಕ್ತಿಯು ಪಡೆಯುವ ಪ್ರೀತಿಯಲ್ಲಿದೆ. ಆದುದರಿಂದ, ಅತಿಥಿ ಸತ್ಕಾರದ ಮೂಲಕ ತಿರುವಳ್ಳುವರು "ತನಗಾಗಿ ಬದುಕುವುದರೊಂದಿಗೆ ಇತರರಿಗಾಗಿಯೂ ಬದುಕುವುದೇ ಅತ್ಯುನ್ನತ ಗೃಹಜೀವನ" ಎಂಬ ಮಾನವೀಯ ಚಿಂತನೆಯನ್ನು ಸ್ಥಾಪಿಸುತ್ತಾರೆ.

## 5.3 ತಿರುಕ್ಕುರಳಿನಲ್ಲಿ ಜೀವಪರ ಸಹಾನುಭೂತಿ

ಮನುಷ್ಯರನ್ನು ಮಾತ್ರ ಕೇಂದ್ರೀಕರಿಸದೆ, ಎಲ್ಲಾ ಜೀವರಾಶಿಗಳನ್ನು ಗೌರವಿಸಿ ಬದುಕಬೇಕು ಎಂಬ ವಿಶಾಲವಾದ ನೈತಿಕ ಚಿಂತನೆಯು ತಿರುಕ್ಕುರಳಿನಲ್ಲಿ ಕಂಡುಬರುತ್ತದೆ. ಕರುಣೆ ತೋರುವುದು, ಮಾಂಸ ತ್ಯಾಜ್ಯ, ಕೊಲ್ಲದಿರುವುದು ಮತ್ತು ಕೇಡೆಣಿಸದಿರುವುದು-ಮುಂತಾದ ಅಧ್ಯಾಯಗಳಲ್ಲಿ ಜೀವಿಗಳ ಬದುಕುವ ಹಕ್ಕನ್ನು ತಿರುವಳ್ಳುವರು ಒತ್ತಾಯಿಸುತ್ತಾರೆ.

தன்னூன் பெருக்கற்குத் தான்பிறிது ஊன்உண்பான்
எங்ஙனம் ஆளும் அருள். (குறள் 251)

ತನ್ನೂನ್ ಪೆರುಕ್ಕಱ್ಕುತ್ ತಾನ್ಪಿಱಿದು ಊನ್‌ಉಣ್ಪಾನ್
ಎಙ್ಙನಮ್ ಆಳುಮ್ ಅರುಳ್.

ತನ್ನೊಡಲ ಬೆಳೆಸಲು ಉಣಲು ಬೇರೆ ಬಾಡನು
ತನ್ನೊಳು ಕರುಣೆ ಬರುವದೆಂತು? (ಕುರಳ್ 251)

ಇನ್ನೊಂದು ಜೀವವನ್ನು ಕೊಂದು ತನ್ನ ದೇಹವನ್ನು ಪೋಷಿಸಲು ಮಾಂಸ ತಿನ್ನುವ ವ್ಯಕ್ತಿ ಹೇಗೆ ಕರುಣೆ ತೋರುವವನಾಗುತ್ತಾನೆ? ಎಂದು ತಿರುವಳ್ಳುವರು ಕೇಳುತ್ತಾರೆ. ತನ್ನ ಸ್ವಂತ ಜೀವನದಂತೆಯೇ ಇತರ ಜೀವಿಗಳ ಜೀವನವನ್ನು ಗೌರವಿಸುತ್ತೇವೆಯೇ? ಎಂದು ಆಹಾರ ಕ್ರಮದ ಬಗೆಗಿನ ಅಭಿಪ್ರಾಯವನ್ನು ಮೀರಿದ ಒಂದು ಮೂಲಭೂತ ನೈತಿಕ

ಪ್ರಶ್ನೆಯನ್ನೂ ಸಹ ಅವರು ಮುಂದಿಡುತ್ತಾರೆ.

அருளல்லது யாதெனின் கொல்லாமை கோறல்
பொருளல்லது அவ்வூன் தினல். (குறள் 254)

ಅರುಳಲ್ಲದು ಯಾದೆನಿನ್ ಕೊಲ್ಲಾಮೈ ಕೋಱಲ್
ಪೊರುಳಲ್ಲದು ಅವ್ವೂನ್ ತಿನಲ್.

ಅಧರ್ಮವೆಂಬರು ಜೀವ ಹತ್ಯೆಯ; ಕೊಲಲಿಲ್ಲವೆಂದು ಪೇಳಿ
ಭಕ್ಷಿಸಿಡೆ ಮಾಂಸವ ಮೇಲೂ ಅಧರ್ಮವಲ್ಲವೆ. (ಕುರಳ್ 254)

ತಿರುವಳ್ಳುವರು ಕೊಲ್ಲದಿರುವಿಕೆಯನ್ನೇ ಕರುಣೆಯ ಆಧಾರವಾಗಿ ಪ್ರತಿಪಾದಿಸುತ್ತಾರೆ.

**ಜೀವದ ಮೇಲಿನ ಕರುಣೆಯ ಪರಮಾವಧಿ**

ಇತರ ಜೀವಿಗಳಿಗೆ ಕೆಡುಕು ಮಾಡದೆ ಬದುಕುವವನೇ ಶ್ರೇಷ್ಠ ಮನುಷ್ಯ ಎಂಬ ಆಲೋಚನೆಯನ್ನು

கொல்லான் புலாலை மறுத்தானைக் கைகூப்பி
எல்லா உயிரும் தொழும். (குறள் 260)

ಕೊಲ್ಲಾನ್ ಪುಲಾಲೈ ಮಱುತ್ತಾನೈಕ ಕೈಕೂಪ್ಪಿ
ಎಲ್ಲಾ ಉಯಿರುಮ್ ತೊಟುಮ್.

ಕೊಲದವನ, ಮಾಂಸ ಒಲ್ಲೆ ಎಂಬವನ
ಕೈ ಮುಗಿದು ನಮಿಸುವವು ಸಕಲ ಜೀವಿತಗಳು. (ಕುರಳ್ 260)

ಈ ಕುರಳ್ ತಿಳಿಯಪಡಿಸುತ್ತದೆ. ಜೀವಗಳಿಗಾಗಿ ವಿಷಾದಿಸುವುದು ಮಾತ್ರ ಸಾಕಾಗುವುದಿಲ್ಲ ಎಂಬುದನ್ನು,

உண்ணாமை வேண்டும் புலாஅல் பிறிதொன்றன்
புண்அது உணர்வார்ப் பெறின். (குறள் 257)

ಉಣ್ಣಾಮೈ ವೇಣ್ಡುಮ್ ಪುಲಾಅಲ್ ಪಿಱಿದೊನ್ಱನ್
ಪುಣ್‌ಅದು ಉಣರ್ವಾರ್ಪ್ ಪೆಱಿನ್.

ಉಣಲು ಹೇಸುವ ಮಾಂಸವ ಬೇರೊಂದು ಜೀವದ
ಹುಣ್ಣೆಂದು ಅರಿತಿರಲು ಅದನು. (ಕುರಳ್ 257)

ಎಂಬ ಈ ಕುರಳ್ ಸ್ಪಷ್ಟಪಡಿಸಿ, ಆ ಜೀವಿಯ ದುಃಖವನ್ನು ಮನಸ್ಸಿನಿಂದ ತಿಳಿಯುವುದೇ ಜೀವಪರ ಸಹಾನುಭೂತಿ ಎಂದು ವಿವರಿಸುತ್ತದೆ. ದುಃಖವನ್ನು ಉಂಟುಮಾಡದ ಜೀವನ ಶೈಲಿಯನ್ನು ಆರಿಸಿಕೊಳ್ಳಬೇಕು ಎಂಬುದೇ ಈ ಅಧ್ಯಾಯವು ತಿಳಿಸುವ ಆಳವಾದ ಸಂದೇಶವಾಗಿದೆ.

ಇಂದಿನ ಸಂದರ್ಭದಲ್ಲಿ, ಈ ಚಿಂತನೆಯನ್ನು ಪ್ರಾಣಿ ಸಂರಕ್ಷಣೆ, ಜೀವವೈವಿಧ್ಯತೆ ಮತ್ತು ಪರಿಸರ ಸಂರಕ್ಷಣೆಯಂತಹ ಪರಿಕಲ್ಪನೆಗಳಿಗೆ ಅನ್ವಯಿಸಬಹುದು. ತಿರುವಳ್ಳುವರ ಜೀವಪರ ಸಹಾನುಭೂತಿಯು ಮನುಷ್ಯನು ಪ್ರಕೃತಿಯನ್ನು ಆಳುವವನಲ್ಲ; ಅವನು ಅದರ ಜೀವನ ಸರಪಳಿಯ ಒಂದು ಭಾಗ ಎಂಬ ತಿಳಿವಳಿಕೆಗೆ ಕಾರಣವಾಗುತ್ತದೆ.

ತಿರುಕ್ಕುರಳಿನಲ್ಲಿ ಜೀವಪರ ಸಹಾನುಭೂತಿಯೆಂಬುದು ಮನುಷ್ಯರ ಮೇಲೆ ತೋರಿಸಲ್ಪಡುವ ಪ್ರೀತಿಯ ವಿಸ್ತರಣೆಯಾಗಿದೆ. ತನ್ನ ಜೀವವನ್ನು ಸ್ತುತಿಸುವಂತೆಯೇ ಭೂಮಿಯ ಮೇಲಿನ ಜೀವರಾಶಿಗಳನ್ನು ಸ್ತುತಿಸುವುದು ಎಂಬುದು ಕುರಳ್ ಪ್ರತಿಪಾದಿಸುವ ಮಾರ್ಗ. ಮನುಷ್ಯನ ಶ್ರೇಷ್ಠತೆ ಅವನ ಬಲದಲ್ಲಿ ಅಡಗಿಲ್ಲ; ಅದು ತನಗಿಂತ ಕಡಿಮೆ ಬಲದ ಜೀವಿಗಳಿಗೆ

ಅವನು ತೋರಿಸುವ ಕರುಣೆಯಲ್ಲಿದೆ. ಈ ರೀತಿಯಾಗಿ ತಿರುಕ್ಕುರಳ್ ಎಲ್ಲಾ ಜೀವರಾಶಿಗಳನ್ನು ಒಳಗೊಳ್ಳುವ ವಿಶಾಲವಾದ ನೈತಿಕತೆಯನ್ನು ಪ್ರಸ್ತುತಪಡಿಸುತ್ತದೆ.

## 5.4 ತಿರುಕ್ಕುರಳಿನಲ್ಲಿ ಸನ್ಯಾಸತ್ವ

ತಿರುಕ್ಕುರಳಿನ ಧರ್ಮವಿಭಾಗದಲ್ಲಿ ಗೃಹಸ್ಥ ಧರ್ಮದ ನಂತರ ಸನ್ಯಾಸಕ್ಕೆ ಸಂಬಂಧಿಸಿದ ಸದ್ಗುಣದ ಹಾದಿಗಳು ಸ್ಥಾನಪಡೆಯುತ್ತವೆ. ತ್ಯಾಗವೆಂಬುದು ಪ್ರಪಂಚದಿಂದ ದೈಹಿಕವಾಗಿ ಹಿಂದೆ ಸರಿಯುವುದು ಮಾತ್ರವಲ್ಲ; ಆಸೆ, ಮೋಹ, ಕೋಪ ಮತ್ತು ದುರಹಂಕಾರದಂತಹ ಮಾನಸಿಕ ನಿಯಂತ್ರಣಗಳನ್ನು ಜಯಿಸುವ ಆಳವಾದ ಅರ್ಥವನ್ನು ಸಹ ತಿರುಕ್ಕುರಳಿನ ಅನೇಕ ಅಧ್ಯಾಯಗಳು ಅನಾವರಣಗೊಳಿಸುತ್ತವೆ. ಧರ್ಮ ಭಾಗದ ಅಧ್ಯಾಯಗಳನ್ನು ಗೃಹಸ್ಥ ಜೀವನ ಮತ್ತು ಸನ್ಯಾಸ ಎಂದು ವ್ಯಾಖ್ಯಾನಗಳಿಗನುಗುಣವಾಗಿ ವಿಂಗಡಿಸಲಾಗಿದೆ.

**ಆಸೆಯನ್ನು ತೊರೆಯುವಿಕೆ**

ಅತಿಯಾದ ಆಸೆಯೇ ಮನುಷ್ಯನ ಅನೇಕ ದುಃಖಗಳಿಗೆ ಕಾರಣ. ಅರ್ಥ(ಹಣ), ಕೀರ್ತಿ ಮತ್ತು ಅಧಿಕಾರಗಳು ಜೀವನಕ್ಕೆ ಸಾಧನಗಳಾಗಿರಬೇಕೇ ವಿನಃ ಮನುಷ್ಯನನ್ನು ಆಳುವ ಶಕ್ತಿಗಳಾಗಬಾರದು. ಇವುಗಳನ್ನು ತನ್ನ ಜೀವನದಲ್ಲಿ ಅನುಸರಿಸಲು, ದೇವರ ಕೃಪೆಯು ಬಹಳ ಆವಶ್ಯಕವಾಗಿದೆ; ಕೃಪೆಯನ್ನು ಪಡೆಯಲು ಒಬ್ಬರು ಇತರ ಆಸೆಗಳನ್ನು ತ್ಯಜಿಸಿ ಭಗವಂತನ ಪಾದಗಳಲ್ಲಿ ಶರಣಾಗಬೇಕು.

பற்றுக பற்றற்றான் பற்றினை அப்பற்றைப்
பற்றுக பற்று விடற்கு. (குறள் 350)

ಪಱ್ಱುಗ ಪಱ್ಱಱ್ಱಾನ್ ಪಱ್ಱಿನೈ ಅಪ್ಪಱ್ಱೈಪ್
ಪಱ್ಱುಗ ಪಱ್ಱು ವಿಡಱ್ಕು.

ಪಿಡಿಯವನ ಪಾದಕಮಲವ ಬಯಕೆ ತೊರೆದವನ
ಬಿಗಿಯಾಗಿ ಪಿಡಿದಿರು ಬೇಡಿ ಪಡೆಶಕ್ತಿಯ ಬಿಡಲು ಬಯಕೆಯ. (ಕುರಳ್ 350)

ನಿಜವಾದ ಸನ್ಯಾಸವು ಉಡುಗೆಯಲ್ಲೂ ತೋರಿಕೆಯಲ್ಲೂ ಇಲ್ಲ; ಅದು ಹೃದಯದಲ್ಲಿದೆ. ಆಸೆಗಳನ್ನು ನಿಯಂತ್ರಿಸದೆ ಹೊರಗೆ ಸನ್ಯಾಸಿಯಾಗಿ ಕಾಣಿಸಿಕೊಳ್ಳುವುದು ನಿಷ್ಪ್ರಯೋಜಕ. ಹಾಗಾಗಿ ತಿರುವಳ್ಳುವರ ಸನ್ಯಾಸ ಧರ್ಮವು ಸ್ವಯಂ ನಿಯಂತ್ರಣದ ಆಂತರಿಕ ಅಭ್ಯಾಸವಾಗಿದೆ.

**ಸನ್ಯಾಸ ಮತ್ತು ಕೃಪೆ**

ತಿರುಕ್ಕುರಳಿನ ಸನ್ಯಾಸತ್ವದ ಚಿಂತನೆಯು ಮನುಷ್ಯನನ್ನು ಸಮಾಜದಿಂದ ಬೇರ್ಪಡಿಸುವುದಿಲ್ಲ; ಬದಲಿಗೆ ಕೃಪೆ, ತಪಸ್ಸು, ಸತ್ಯ, ಕೋಪ ತಾಳದಿರುವುದು, ಕೇಡೆಣಿಸದಿರುವುದು ಮತ್ತು ಕೊಲ್ಲದಿರುವಿಕೆ-ಮುಂತಾದ ಗುಣಗಳ ಮೂಲಕ ಅವನನ್ನು ಹೆಚ್ಚು ಜವಾಬ್ದಾರಿಯುತನನ್ನಾಗಿ ಮಾಡುತ್ತದೆ.

ತನ್ನ ಆಸೆಗಳನ್ನು ಗೆದ್ದವನು ಇತರರ ಹಕ್ಕುಗಳನ್ನು ಕಸಿದುಕೊಳ್ಳುವುದಿಲ್ಲ; ಕೋಪವನ್ನು ಗೆದ್ದವನು ಇತರರಿಗೆ ಹಾನಿ ಮಾಡುವುದಿಲ್ಲ; ಅಹಂಕಾರವನ್ನು ಗೆದ್ದವನು ಇತರ ಜೀವಿಗಳನ್ನು ಕೀಳಾಗಿ ಪರಿಗಣಿಸುವುದಿಲ್ಲ. ಆದುದರಿಂದ ಸನ್ಯಾಸವೆಂಬುದು ಲೋಕ ದ್ವೇಷವಲ್ಲ; ಅದು ತನ್ನೊಳಗಿನ ಅಪರಿಮಿತ ಬಯಕೆಯನ್ನು ಗೆಲ್ಲುವುದು.

ಆಸ್ವಾದನೆ, ಸ್ಪರ್ಧೆ ಮತ್ತು ಲೋಭತನ-ಮೊದಲಾದವು ಹೆಚ್ಚಿರುವ ಇಂದಿನ ಜೀವನದಲ್ಲಿ ತಿರುಕ್ಕುರಳಿನ ಸನ್ಯಾಸ

ಧರ್ಮದ ಬಗೆಗಿನ ಚಿಂತನೆಯು ಹೊಸ ಅರ್ಥವನ್ನು ಪಡೆಯುತ್ತದೆ. ಅಗತ್ಯ ಮತ್ತು ಆಸೆಯ ನಡುವಿನ ವ್ಯತ್ಯಾಸವನ್ನು ಅರಿತುಕೊಳ್ಳುವುದು, ಮಿತವಾಗಿ ಬದುಕುವುದು, ಸ್ವಯಂ ನಿಯಂತ್ರಣ ಮತ್ತು ಸರಳತೆ-ಮೊದಲಾದವು ಆಧುನಿಕ ಜೀವನದಲ್ಲೂ ಅತ್ಯಗತ್ಯ.

ತಿರುಕ್ಕುರಳ್ ಅಭಿವ್ಯಕ್ತಿಸುವ ಸನ್ಯಾಸವು ಪ್ರಪಂಚದಿಂದ ಓಡಿಹೋಗುವುದರ ಬಗ್ಗೆ ಅಲ್ಲ; ಅದು ಜಗತ್ತಿನಲ್ಲಿ ವಾಸಿಸುತ್ತಿರುವಾಗಲೇ ಆತ್ಮವನ್ನು ಗೆಲ್ಲುವುದರ ಬಗ್ಗೆ. ಅರ್ಥವನ್ನು ತ್ಯಜಿಸುವ ಬದಲು ಆಸೆಯನ್ನು ತ್ಯಜಿಸುವುದು ಮತ್ತು ಇತರರನ್ನು ಗೆಲ್ಲುವ ಬದಲು ತನ್ನನ್ನು ತಾನು ಗೆಲ್ಲುವುದು ಅತ್ಯುನ್ನತ ತ್ಯಾಗವಾಗಿದೆ. ಈ ರೀತಿಯಾಗಿ ತಿರುವಳ್ಳುವರು ಸನ್ಯಾಸಧರ್ಮವನ್ನು ಮನುಷ್ಯನ ಆಂತರಿಕ ಶುದ್ಧತೆಗೂ ಮತ್ತು ವಿಮೋಚನೆಗೂ ಕಾರಣವಾಗುವ ಜೀವನ ವಿಧಾನವೆಂದು ತಿಳಿಸುತ್ತಾರೆ.

## 5.5 ತಿರುಕ್ಕುರಳಿನಲ್ಲಿ ವೈಯಕ್ತಿಕ ನಡತೆ

ಒಂದು ಒಳ್ಳೆಯ ಸಮಾಜದ ಅಡಿಪಾಯ ಒಳ್ಳೆಯ ಜನರು. ಕಾನೂನುಗಳಿಂದ ಮಾತ್ರ ಸಮಾಜವನ್ನು ಸುಧಾರಿಸಲು ಸಾಧ್ಯವಿಲ್ಲ; ಪ್ರತಿಯೊಬ್ಬ ವ್ಯಕ್ತಿಯಲ್ಲೂ ಸ್ವಯಂ ನಿಯಂತ್ರಣ, ಪ್ರಾಮಾಣಿಕತೆ, ಜವಾಬ್ದಾರಿ, ವಿನಯದಂತಹ ಗುಣಗಳು ನೆಲೆಸಬೇಕು. ತಿರುಕ್ಕುರಳ್ ಇದನ್ನು ವೈಯಕ್ತಿಕ ನಡತೆ ಎಂಬ ವಿಶಾಲ ಜೀವನ ದೃಷ್ಟಿಕೋನದಿಂದ ಸ್ಪಷ್ಟಪಡಿಸುತ್ತದೆ.

**ನಡತೆಯೇ ಶ್ರೇಷ್ಠತೆಗೆ ಕೀಲಿ**

ಒಬ್ಬ ವ್ಯಕ್ತಿಗೆ ಶ್ರೇಷ್ಠತೆಯನ್ನು ತಂದುಕೊಡುವುದು ಅವನ ಸಂಪತ್ತು ಅಥವಾ ಸ್ಥಾನಮಾನವಲ್ಲ; ಅದು ನಡತೆ. ಆದುದರಿಂದಲೇ ನಾವು ಪ್ರಾಣಕ್ಕಿಂತ ಹೆಚ್ಚಾಗಿ ನಡತೆಯನ್ನು ರಕ್ಷಿಸಬೇಕು ಎಂಬುದನ್ನು,

ஒழுக்கம் விழுப்பம் தரலான் ஒழுக்கம்
உயிரினும் ஓம்பப் படும். (குறள் 131)

ಒಟುಕ್ಕಮ್ ವಿಟುಪ್ಪಮ್ ತರಲಾನ್ ಒಟುಕ್ಕಮ್
ಉಯಿರಿನುಮ್ ಓಮ್ಬಪ್ ಪಡುಮ್.

ಸದಾಚಾರವು ತರುವುದು ಯಶವ
ಸದಾಚಾರವನು ಕಾಯ್ದಿಡು ಜೀವಿತಕೆ ಮಿಗಿಲೆಂದು. (ಕುರಳ್ 131)

ಈ ಕುರಳಿನಲ್ಲಿ ತಿರುವಳ್ಳುವರು ತಿಳಿಯಪಡಿಸುತ್ತಾರೆ. ಜ್ಞಾನ ಮತ್ತು ಕೌಶಲ್ಯವು ಒಬ್ಬ ವ್ಯಕ್ತಿಯನ್ನು ಪ್ರಗತಿಯತ್ತ ಕೊಂಡೊಯ್ಯಬಹುದು; ಆದರೆ ಆ ಪ್ರಗತಿಯನ್ನು ಮೌಲ್ಯಯುತವಾಗಿಸುವುದು ಸನ್ನಡತೆ. ಜ್ಞಾನವುಳ್ಳ ವ್ಯಕ್ತಿಯು ಅನೈತಿಕನಾಗಿದ್ದರೆ, ಅವನ ಜ್ಞಾನವೇ ಸಮಾಜಕ್ಕೆ ಮಾರಕವಾಗಬಹುದು.

**ಸ್ವಯಂ ಸಂಯಮ - ನೈತಿಕತೆಯ ರಕ್ಷಕ**

ತಿರುವಳ್ಳುವರು ಸ್ವಯಂ ಸಂಯಮವನ್ನು ವೈಯಕ್ತಿಕ ನೈತಿಕತೆಯ ಕೇಂದ್ರವೆಂದು ಪ್ರಸ್ತುತಪಡಿಸುತ್ತಾರೆ. ಚಿಂತನೆ, ನುಡಿ ಮತ್ತು ಕಾರ್ಯ-ಮೊದಲಾದವುಗಳನ್ನು ನಿಯಂತ್ರಿಸುವ ಸಾಮರ್ಥ್ಯವೇ ವಿನಮ್ರತೆ. ತಕ್ಷಣವೇ ಭಾವಪರವಶತೆಗೆ ಒಳಗಾಗದೆ, ಅದರ ಪರಿಣಾಮಗಳನ್ನು ಪರಿಗಣಿಸಿ ವರ್ತಿಸುವುದೇ ಪಕ್ವಗೊಂಡ ಮನಸ್ಸಿನ ಸಂಕೇತ ಎಂಬ ಅಭಿಪ್ರಾಯಗಳನ್ನು ತಿಳಿಸುವುದಾಗಿ,

அடக்கம் அமரருள் உய்க்கும் அடங்காமை
ஆரிருள் உய்த்து விடும். (குறள் 121)

ಅಡಕ್ಕಮ್ ಅಮರರುಳ್ ಉಯ್ಕ್ಕುಮ್ ಅಡಙ್ಗಾಮೈ

ಆರಿರುಳ್ ಉಯ್ತ್ತು ವಿಡುಮ್.

ಆತ್ಮ ಸಂಯಮವ ಪಡೆದಿರಲು ದೊರಕುವುದು ಸ್ವರ್ಗ
ಸಂಯಮ ಹೀನತೆ ನೂಕುವುದು ಘೋರಾಂಧಕರ ನರಕಕೆ. (ಕುರಳ್ 121)

ಎಂಬ ಕುರಳ್ ಸ್ಪಷ್ಟಪಡಿಸುತ್ತದೆ. ಅದೇ ರೀತಿ ಒಬ್ಬ ವ್ಯಕ್ತಿಯ ಮಾತುಗಳು ಅವನ ನೈತಿಕತೆಯ ಅಳತೆಕೋಲಾಗುತ್ತವೆ.

***தீயினால் சுட்டபுண் உள்ளாறும் ஆறாதே***
நாவினால் சுட்ட வடு. (குறள் 129)

ತೀಯಿನಾಲ್ ಸುಟ್ಟಪುಣ್ ಉಳ್ಳಾಱುಮ್ ಆಱಾದೇ
ನಾವಿನಾಲ್ ಸುಟ್ಟ ವಡು.

ಮಾಗುವುದು ತಾನೇ ಗಾಯವದು ಬೆಂಕಿ ಸುಡಲು;
ಮಾಗದೆಂದೂ ನಾಲಿಗೆಯಿಂ ಸುಟ್ಟ ಕಲೆ. (ಕುರಳ್ 129)

ಎಂಬ ಈ ಕುರಳಿನಲ್ಲಿ ಶರೀರದಲ್ಲಾದ ಗಾಯವು ವಾಸಿಯಾಗಬಹುದು; ಆದರೆ ಮಾತಿನಿಂದಾದ ಮಾನಸಿಕ ಗಾಯವು ದೀರ್ಘಕಾಲ ವಾಸಿಯಾಗದೆ ಉಳಿಯುತ್ತದೆ ಎಂಬ ಸತ್ಯವನ್ನು ತಿರುವಳ್ಳುವರು ವ್ಯಕ್ತಪಡಿಸುತ್ತಾರೆ. ಆದುದರಿಂದ, ವೈಯಕ್ತಿಕ ನಡೆತೆ ಕಾರ್ಯವನ್ನು ಮಾತ್ರ ನಿಯಂತ್ರಿಸುವುದಲ್ಲ; ಅದು ಆಲೋಚನೆ, ಮಾತು ಮತ್ತು ಭಾವನೆಗಳು-ಮುಂತಾದ ಎಲ್ಲವನ್ನೂ ಸುಧಾರಿಸುತ್ತದೆ.

**ವ್ಯಕ್ತಿ ಮತ್ತು ಸಮಾಜ**

ಸನ್ನಡತೆಯಿಂದ ಜೀವಿಸುವುದರ ಪ್ರಯೋಜನಗಳು ವ್ಯಕ್ತಿಗೆ ಮಾತ್ರ ಸಿಗುವುದಿಲ್ಲ. ಒಳ್ಳೆಯ ಕುಟುಂಬಗಳು ಪ್ರಾಮಾಣಿಕ ವ್ಯಕ್ತಿಗಳಿಂದ ಸೃಷ್ಟಿಯಾಗುತ್ತವೆ; ಒಳ್ಳೆಯ ಕುಟುಂಬಗಳು ಒಳ್ಳೆಯ ಸಮಾಜವನ್ನು ಸೃಷ್ಟಿಸುತ್ತವೆ; ಒಳ್ಳೆಯ ಸಮಾಜವು ಜವಾಬ್ದಾರಿಯುತ ರಾಷ್ಟ್ರವನ್ನು ಸೃಷ್ಟಿಸುತ್ತದೆ. ಆದ್ದರಿಂದ, ಸಾಮಾಜಿಕ ಬದಲಾವಣೆಯ ಆರಂಭವು ವ್ಯಕ್ತಿಯಲ್ಲಿಯೇ ಇರುತ್ತದೆ.

ಇಂದಿನ ಅಂತರ್ಜಾಲ ಮತ್ತು ಸಾಮಾಜಿಕ ಮಾಧ್ಯಮಗಳ ಯುಗದಲ್ಲಿ, ವೈಯಕ್ತಿಕ ನೈತಿಕತೆಯ ವ್ಯಾಪ್ತಿ ಮತ್ತಷ್ಟು ವಿಸ್ತರಿಸಿದೆ. ನೇರವಾಗಿ ಹೇಳಲು ಹಿಂಜರಿಯುವ ಒಂದನ್ನು ಅಂತರ್ಜಾಲದಲ್ಲಿ ಬರೆಯದಿರುವುದು, ಸುಳ್ಳು ಮಾಹಿತಿಯನ್ನು ಹರಡದಿರುವುದು ಮತ್ತು ಇತರರ ವೈಯಕ್ಕಿಕ ಹಕ್ಕನ್ನು ಗೌರವಿಸುವುದು ಸಹ ಆಧುನಿಕ ನೈತಿಕತೆಯ ರೂಪಗಳೆಂದು ಪರಿಗಣಿಸಬಹುದು.

ತಿರುಕ್ಕುರಳಿನಲ್ಲಿ ಅನಾವರಣಗೊಂಡಿರುವ ವೈಯಕ್ತಿಕ ನೈತಿಕತೆಯೆಂಬುದು ಬಾಹ್ಯ ನಿಯಂತ್ರಣವಲ್ಲ; ತನ್ನನ್ನು ತಾನೇ ಸರಿಪಡಿಸಿಕೊಳ್ಳುವ ಆಂತ್ರಿಕ ಕಟ್ಟುಪಾಡು. ನಮ್ರತೆ, ಸವಿ ಮಾತು, ಪ್ರಾಮಾಣಿಕತೆ, ತಾಳ್ಮೆ ಮತ್ತು ವಿಧೇಯತೆ-ಮೊದಲಾದ ಗುಣಗಳು ಮನುಷ್ಯನ ನಿಜವಾದ ಮೌಲ್ಯವನ್ನು ನಿರ್ಧರಿಸುತ್ತವೆ. ಒಬ್ಬ ವ್ಯಕ್ತಿಯು ಜಗತ್ತನ್ನು ಬದಲಾಯಿಸುವ ಮೊದಲು, ಅವನು ತನ್ನನ್ನು ತಾನು ಸುಧಾರಿಸಿಕೊಳ್ಳಬೇಕು ಎಂಬುದು ತಿರುವಳ್ಳುವರ ದೃಷ್ಟಿಕೋನ. ವೈಯಕ್ತಿಕ ನೈತಿಕತೆಯೇ ಸಾಮಾಜಿಕ ನೈತಿಕತೆಯ ಮೊದಲ ಬೀಜವಾಗಿರುವುದರಿಂದ ತಿರುಕ್ಕುರಳಿನ ಈ ಚಿಂತನೆಯು ಎಂದೆಂದಿಗೂ ಅನ್ವಯಿಸುತ್ತದೆ.

## 5.6 ತಿರುಕ್ಕುರಳಿನಲ್ಲಿ ಆತ್ಮವಿಶ್ವಾಸದ ಚಿಂತನೆಗಳು

ತಿರುವಳ್ಳುವರು 'ಆತ್ಮವಿಶ್ವಾಸ' ಎಂಬ ಪದವನ್ನು ನೇರವಾಗಿ ಬಳಸದಿದ್ದರೂ, ಸಾಮರ್ಥ್ಯ, ಮಾನಸಿಕ ದೃಢತೆ, ಪ್ರಯತ್ನ, ಕಾರ್ಯ ನಿರ್ಧಾರ ಮತ್ತು ಆಪತ್ತಿನಲ್ಲಿ ಸ್ಥೈರ್ಯ-ಮುಂತಾದ ಅಧ್ಯಾಯಗಳಲ್ಲಿ ಆತ್ಮವಿಶ್ವಾಸದ ಚಿಂತನೆಗಳು ಸ್ಥಾನಪಡೆದಿವೆ. ಮನುಷ್ಯನ ಏಳಿಗೆ ಮತ್ತು ಪತನವು ಹೆಚ್ಚಾಗಿ ಅವನ ಮನಸ್ಸಿನ ಶಕ್ತಿ ಮತ್ತು ಪ್ರಯತ್ನವನ್ನು ಅವಲಂಬಿಸಿರುತ್ತದೆ ಎಂಬುದು ತಿರುವಳ್ಳುವರ್ ಅವರ ದೃಷ್ಟಿಕೋನ. ಆದುದರಿಂದ, ವ್ಯಕ್ತಿಯ ಏಳಿಗೆ ಅವನ ಮನಸ್ಸಿನ ಮಟ್ಟವನ್ನು ಅವಲಂಬಿಸಿರುತ್ತದೆ ಎಂಬುದನ್ನು,

வெள்ளத் தனைய மலர்நீட்டம் மாந்தர்தம்
உள்ளத் தனையது உயர்வு. (குறள் 595)

ವೆಳ್ಳತ್ ತನೈಯ ಮಲರ್ನೀಟ್ಟಮ್ ಮಾನ್ದರ್ತಮ್
ಉಳ್ಳತ್ ತನೈಯದು ಉಯರ್ವು.

ತಾವರೆ ದಂಟಿನ ನೀಳವನಳೆದು ಕೊಳದ ಆಳವ ಅರಿಯುವಂತೆ
ಅವರವರ ಮಹತ್ವಕ್ಕೆ, ಮನದ ಉತ್ಸಾಹವೇ ಅಳತೆಗೋಲು. (ಕುರಳ್ 595)

ಈ ಕುರಳಿನಲ್ಲಿ ದಾಖಲಿಸಿದ್ದಾರೆ. ನೀರಿನ ಆಳಕ್ಕೆ ತಕ್ಕಂತೆ ತಾವರೆಯ ಕಾಂಡವು ಉದ್ದವಾಗುವಂತೆಯೇ ಮನುಷ್ಯನ ಉನ್ನತಿಯು ಅವನ ಮನದ ಉನ್ನತಿಯನ್ನು ಅವಲಂಬಿಸಿರುತ್ತದೆ. ಉನ್ನತ ಧ್ಯೇಯ ಮತ್ತು ನಂಬಿಕೆಗಳು ಮಾನವ ಪ್ರಗತಿಯ ಆರಂಭ ಎಂದು ಪ್ರಸ್ತುತ ಕುರಳ್ ತಿಳಿಸುತ್ತದೆ.

**ಮನಃಸ್ಥೈರ್ಯ ಮತ್ತು ಯಶಸ್ಸು**

ಒಬ್ಬ ವ್ಯಕ್ತಿಯು ಜೀವನದಲ್ಲಿ ಉದೇಶಗಳನ್ನು ಸಾಧಿಸಲು ಗುರಿಯನ್ನು ನಿಗದಿಪಡಿಸುವುದು ಮಾತ್ರ ಸಾಕಾಗುವುದಿಲ್ಲ; ಅದನ್ನು ಸಾಧಿಸುವ ಮನಃಸ್ಥೈರ್ಯ ಅಗತ್ಯ. ಆಲೋಚನೆ ಮತ್ತು ಕಾರ್ಯವು ಒಟ್ಟಿಗೆ ಸೇರಿದಾಗ ಯಶಸ್ಸು ರೂಪುಗೊಳ್ಳುತ್ತದೆ. ತಿರುವವಳ್ಳುವರು ಇದನ್ನು,

எண்ணிய எண்ணியாங்கு எய்துப எண்ணியார்
திண்ணியர் ஆகப் பெறின். (குறள் 666)

ಎಣ್ಣಿಯ ಎಣ್ಣಿಯಾಙ್ಗು ಎಯ್ದುಬ ಎಣ್ಣಿಯಾರ್
ತಿಣ್ಣಿಯರ್ ಆಗಪ್ ಪೆಱಿನ್.

ಸಂಕಲ್ಪಿಸಿದ ವಸ್ತುವೆಲ್ಲವನೂ ಸಂಕಲ್ಪಿಸಿದಂತೆ
ಸಂಕಲ್ಪಕನು ಪಡೆಯಲು ಅದುವೇ ದೃಢ ಸಂಕಲ್ಪ.(ಕುರಳ್ 666)

ಎಂಬ ಕುರಳ್ ಮೂಲಕ ವ್ಯಕ್ತಪಡಿಸುತ್ತಾರೆ. ಮಾತ್ರವಲ್ಲದೆ, ಅವರು ಸೋಲಿನಿಂದ ಎದೆಗುಂದದೆ ಕಾರ್ಯಗತರಾಗುವುದನ್ನು ಒತ್ತಿ ಹೇಳುತ್ತಾರೆ.

துன்பம் உறவரினும் செய்க துணிவாற்றி
இன்பம் பயக்கும் வினை. (குறள் 669)

ತುನ್ಬಮ್ ಉಱವರಿನುಮ್ ಸೆಯ್ಗ ತುಣಿವಾಱ್ಱಿ
ಇನ್ಬಮ್ ಪಯಕ್ಕುಮ್ ವಿನೈ.

ತೊಡಕು ಎದಿರಿಸಲು ಕಾರ್ಯದ ತೊಡಕದಲಿ
ತೊಡಕ ದಾಟಿ ಪೂರ್ಣಗೊಳಿಸಲು ಪಡೆಯುವೆ ಆನಂದವ. (ಕುರಳ್ 669)

ಮಾಡಲು ಬಯಸುವ ಕಾರ್ಯದಲ್ಲಿ ಯಾವುದೇ ಅಡೆತಡೆಗಳು ಬಂದರೂ, ಆ ಕಾರ್ಯವನ್ನು ಕೈಬಿಡದೆ ಮುಂದುವರಿಸಿ ಯಶಸ್ಸನ್ನು ಸಾಧಿಸಬೇಕು. ಆತ್ಮವಿಶ್ವಾಸ ಎಂಬುದು ಅಡೆತಡೆಗಳ ಬಗ್ಗೆ ಮಾತ್ರ ಯೋಚಿಸುವುದಲ್ಲ; ಅಡೆತಡೆಗಳಿದ್ದರೂ ಅವುಗಳನ್ನು ನಿವಾರಿಸಬಹುದು ಎಂಬ ಮನಸ್ಥಿತಿ.

ಪ್ರಯತ್ನದ ಮೌಲ್ಯ

ವಿಧಿಬಲದಿಂದ ಒಂದು ಕಾರ್ಯದಲ್ಲಿ ಯಶಸ್ವಿಯಾಗದಿದ್ದರೂ, ಪ್ರಯತ್ನಪಟ್ಟು ಅದನ್ನು ಮಾಡುವುದರ ಮೂಲಕ ಯಶಸ್ವಿಯಾಗಬಹುದು ಎಂಬುದನ್ನು

தெய்வத்தான் ஆகா தெனினும் முயற்சிதன்
மெய்வருத்தக் கூலி தரும். (குறள் 619)

ದೆಯ್ವತ್ತಾನ್ ಆಕಾ ದೆನಿನುಮ್ ಮುಯಜ್ಚಿತನ್
ಮೆಯ್ವರುತ್ತಕ್ ಕೂಲಿ ತರುಮ್.

ದೈವದಿಂದ ಆಗದು ಎಂದೇ ಇದ್ದರೂ
ಪರಿಶ್ರಮಕ್ಕೆ ತಕ್ಕ ಫಲ ದೊರೆಯುವುದು ಖಂಡಿತ. (ಕುರಳ್ 619)

ಪ್ರಸ್ತುತ ತಿರುಕ್ಕುರಳ್ ಪ್ರತಿಪಾದಿಸುತ್ತದೆ. ನಿರೀಕ್ಷಿತ ಪೂರ್ಣ ಯಶಸ್ಸು ಸಿಗದಿದ್ದರೂ, ನಿಜವಾದ ಪ್ರಯತ್ನ ವ್ಯರ್ಥವಾಗಲಾರದು ಎಂಬ ಚಿಂತನೆ ಈ ಕುರಳಿನಲ್ಲಿದೆ. ಹೀಗಾಗಿ, ಆತ್ಮವಿಶ್ವಾಸವೆಂಬುದು ಕೇವಲ ಸಕಾರಾತ್ಮಕ ಚಿಂತನೆಯಲ್ಲ; ಅದು ಪ್ರಯತ್ನದೊಂದಿಗೆ ಸೇರಿದ ಕ್ರಿಯಾಶೀಲ ನಂಬಿಕೆ.

ತಿರುಕ್ಕುರಳಿನ ದೃಷ್ಟಿಕೋನದಲ್ಲಿ, ಆತ್ಮವಿಶ್ವಾಸ ಎಂಬುದು ಅಹಂಕಾರವಲ್ಲ; ಅದು ತನ್ನ ಸಾಮರ್ಥ್ಯವನ್ನು ಅರ್ಥಮಾಡಿಕೊಂಡು, ಗುರಿಯನ್ನು ಸ್ಪಷ್ಟಪಡಿಸಿ, ಸತತ ಪ್ರಯತ್ನದಿಂದ ನಿರ್ವಹಿಸುವ ಮನಃಸ್ಥೈರ್ಯ. 'ನಾನು ಮಾಡಬಹುದು' ಎಂಬ ಆಲೋಚನೆಯು 'ನಾನು ಮಾಡುತ್ತೇನೆ' ಎಂಬ ಕ್ರಿಯೆಯೊಂದಿಗೆ ಸಂಯೋಜಿಸಲ್ಪಟ್ಟಾಗ ಮಾತ್ರ ವ್ಯಕ್ತಿಯ ಸಾಮರ್ಥ್ಯವು ಸಂಪೂರ್ಣತೆಯನ್ನು ಪಡೆಯುತ್ತದೆ.

## 5.7 ತಿರುಕ್ಕುರಳಿನಲ್ಲಿ ಶಿಕ್ಷಣ

ತಿರುವಳ್ಳುವರು ಶಿಕ್ಷಣವನ್ನು ಕೇವಲ ಜ್ಞಾನದ ಸಂಗ್ರಹಣೆಯಾಗಿ ನೋಡುವುದಿಲ್ಲ. ಅದು ಮನುಷ್ಯನ ದೃಷ್ಟಿಯನ್ನು ವಿಸ್ತರಿಸಿ, ನಡವಳಿಕೆಯನ್ನು ಸುಧಾರಿಸಿ ಜೀವನದುದ್ದಕ್ಕೂ ಬೆಂಬಲವಾಗಿ ನಿಲ್ಲುವ ಸಂಪತ್ತಾಗಬೇಕು ಎಂದು ಅವರು ಹೇಳುತ್ತಾರೆ.

கற்க கசடறக் கற்பவை கற்றபின்
நிற்க அதற்குத் தக. (குறள் 391)

ಕಜ್ಕ ಕಸಡಜಕ್ ಕಜ್ಪವೈ ಕಜ್ಜಪಿನ್
ನಿಜ್ಕ ಅದಜ್ಕುತ್ ತಗ.

ಕಲಿ ಪರಿಪೂರ್ಣವಾಗಿ ಕಲಿಯಲುಚಿತವ
ಕಲಿತು ನೆಲೆಸಿರು ಜೀವಿತವ ಅದರಂತೆ. (ಕುರಳ್ 391)

ಕಲಿಯಬೇಕಾದದ್ದನ್ನು ಕಲಿಯುವುದು, ಕಲಿತ ನಂತರ ಅದಕ್ಕೆ ತಕ್ಕಂತೆ ಜೀವನವನ್ನು ನಡೆಸುವುದು ಎಂಬದು ತಿರುವಳ್ಳುವರು ತಿಳಿಸುವ ಕಲಿಕೆ ನಿಯಮ. ಕಲಿಕೆ ಎಂಬುದು ಕೇವಲ ಮಾಹಿತಿಯನ್ನು ನೆನಪಿಟ್ಟುಕೊಳ್ಳುವುದಲ್ಲ, ದೋಷವಿಲ್ಲದೆ ಸ್ಪಷ್ಟವಾಗಿ ಕಲಿತು, ಕಲಿತದ್ದಕ್ಕೆ ಅನುಗುಣವಾಗಿ ಬದುಕುವುದೇ ನಿಜವಾದ ಶಿಕ್ಷಣ.

**ಶಿಕ್ಷಣ - ಮನುಷ್ಯನ ಕಣ್ಣುಗಳು**

ಶಿಕ್ಷಣವೆಂಬುದು ಒಬ್ಬರಿಗೆ ಕಣ್ಣಿನಂತೆ ಪ್ರಮುಖವಾದ್ದು. ಅಂತಹ ಶಿಕ್ಷಣವನ್ನು ಪಡೆಯುವುದೇ ಮಾನವ ಜೀವನದ ಗುರಿ ಎಂಬುದನ್ನು ತಿರುಕ್ಕುರಳ್ ಸೂಚಿಸುತ್ತದೆ.

எண்ணென்ப ஏனை எழுத்தென்ப இவ்விரண்டும்
கண்ணென்ப வாழும் உயிர்க்கு. (குறள் 392)

ಎಣ್ಣೆನ್ಪ ಏನೈ ಎಟುತ್ತೆನ್ಪ ಇವ್ವಿರಣ್ಡುಮ್
ಕಣ್ಣೆನ್ಪ ವಾಟುಮ್ ಉಯಿರ್ಕ್ಕು.

ಎಣಿಕೆ ಎಂಬುರು, ಅಕ್ಷರವೆಂಬುರು
ಇವ್ವೆರಡನೂ ಕಣ್ಣು ಎಂಬರು ಜಗದಿ ಜೀವಾತ್ಮನ. (ಕುರಳ್ 392)

ಗಣಿತ ಮತ್ತು ಅಕ್ಷರಗಳು ಇವೆರಡು(ಕಲೆಗಳು) ಮನುಷ್ಯನ ಬಾಳಿಗೆ ಕಣ್ಣುಗಳಿದ್ದಂತೆ ಎಂದು ಹೇಳಲಾಗುತ್ತದೆ. ಕಣ್ಣುಗಳು ಪ್ರಪಂಚದ ಸ್ವರೂಪವನ್ನು ತೋರಿಸುತ್ತವೆ; ಶಿಕ್ಷಣವು ಅದರ ಅರ್ಥವನ್ನು ಅರ್ಥಮಾಡಿಕೊಳ್ಳಲು ಸಹಾಯ ಮಾಡುತ್ತದೆ.

கண்ணுடையர் என்பவர் கற்றோர் முகத்திரண்டு
புண்ணுடையர் கல்லா தவர். (குறள் 393)

ಕಣ್ಣುಡೈಯರ್ ಎನ್ಪವರ್ ಕಱ್ಱೋರ್ ಮುಗತ್ತಿರಣ್ಡು
ಪುಣ್ಣುಡೈಯರ್ ಕಲ್ಲಾ ದವರ್.

ಕಣ್ಣುಳ್ಳವನೆಂಬರು ಕಲಿತವನ; ಮುಖದಲಿ ಎರಡು
ಹುಣ್ಣುಳ್ಳವರೆಂಬರು ಕಲಿಯದವರ. (ಕುರಳ್ 393)

ವಿದ್ಯೆಯನ್ನು ಕಲಿತವರೇ ಕಣ್ಣುಳ್ಳವರು. ಕಲಿಯದವರು ಕಣ್ಣಿದ್ದೂ ಹುಣ್ಣುಳ್ಳವರು ಎಂದು ಹೇಳುವ ತಿರುಕ್ಕುರಳ್, ಶಿಕ್ಷಣವು ಒಬ್ಬ ವ್ಯಕ್ತಿಗೆ ದೃಷ್ಟಿಯನ್ನು ಮಾತ್ರ ನೀಡುವುದಿಲ್ಲ; ಅದು ಅವನಿಗೆ ವಿವೇಚನಾಶೀಲ ದೃಷ್ಟಿಯನ್ನು ನೀಡುತ್ತದೆ.

ಶಾಶ್ವತ ಸಂಪತ್ತು

ಹಣದ ಸಿರಿಯು ನಾಶವಾಗಬಹುದು; ಶಿಕ್ಷಣವು ಒಬ್ಬರ ಚಿಂತನೆಗಳಲ್ಲೂ ವ್ಯಕ್ತಿತ್ವದಲ್ಲೂ ನೆಲೆಸಿರುತ್ತದೆ. ಆದುದರಿಂದ, ತಿರುವಳ್ಳುವರು ಶಿಕ್ಷಣವನ್ನು ಶಾಶ್ವತವಾದ ಸಂಪತ್ತು ಎಂದು ಪರಿಗಣಿಸುತ್ತಾರೆ. ಈ ಚಿಂತನೆಯನ್ನು,

கேடில் விழுச்செல்வம் கல்வி ஒருவற்கு
மாடுஅல்ல மற்றை யவை. (குறள் 400)

ಕೇಡಿಲ್ ವಿಟುಚ್ಚೆಲ್ವಮ್ ಕಲ್ವಿ ಒರುವಱ್ಕು
ಮಾಡುಅಲ್ಲ ಮಱ್ಱೈ ಯವೈ.

ಕಲಿತ ವಿದ್ಯೆ ಓರ್ವಗೆ ಕೂಡಿಟ್ಟ ಸಂಪತ್ತಿರುವಂತೆ
ಕೆಡದದು, ಉಳಿದೆಲ್ಲ ತುಚ್ಛವು ಅದರ ಮುಂದೆ. (ಕುರಳ್ 400)

ಎಂದು ಸ್ಪಷ್ಟಪಡಿಸುತ್ತಾರೆ.

ತಿರುಕ್ಕುರಳಿನಲ್ಲಿ ಶಿಕ್ಷಣವೆಂಬುದು ಜ್ಞಾನ, ನಡತೆ ಮತ್ತು ಅಭ್ಯಾಸಗಳ ಸಂಯೋಜನೆಯಾಗಿದೆ. ಕಲಿತವನು ಕೇವಲ ಜ್ಞಾನಿಯಾಗಿರದೆ, ತಾನು ಕಲಿತದ್ದಕ್ಕೆ ಅನುಗುಣವಾಗಿ ಬದುಕುವ ವ್ಯಕ್ತಿಯೂ ಆಗಿರಬೇಕು. ಶಿಕ್ಷಣದ ಪರಿಪೂರ್ಣತೆಯು ಜ್ಞಾನವನ್ನು ಜೀವನವಾಗಿ ಪರಿವರ್ತಿಸುವುದರಲ್ಲಿದೆ.

## 5.8 ತಿರುಕ್ಕುರಳಿನಲ್ಲಿ ನಾಯಕತ್ವದ ಲಕ್ಷಣಗಳು

ತಿರುಕ್ಕುರಳಿನ ಅರ್ಥಭಾಗದಲ್ಲಿ ರಾಜ, ಮಂತ್ರಿ, ಕೋಟೆ, ಸೈನ್ಯ, ನಾಗರಿಕರು, ಸಲಹೆ, ಸಮಯಪ್ರಜ್ಞೆ, ಬುದ್ಧಿವಂತಿಕೆಯಿಂದ ವರ್ತಿಸುವುದು-ಮುಂತಾದವುಗಳ ಬಗೆಗಿನ ಅಭಿಪ್ರಾಯಗಳು ಸ್ಥಾನಪಡೆದಿವೆ. ಈ ಅಭಿಪ್ರಾಯಗಳನ್ನು ನಾಯಕತ್ವದ ಗುಣಗಳಿಗೆ ಮೂಲ ತತ್ವಗಳಾಗಿಯೂ ಕಾಣಬಹುದು.

தூங்காமை கல்வி துணிவுடைமை இம்மூன்றும்
நீங்கா நிலனாள் பவற்கு. (குறள் 383)

ತೂಙ್ಗಾಮೈ ಕಲ್ವಿ ತುಣಿವುಡೈಮೈ ಇಮ್ಮೂನ್ರುಮ್
ನೀಙ್ಗಾ ನಿಲನಾಳ್ ಪವಱ್ಕು.

ಜಾಗೃತಿ, ವಿದ್ಯೆ, ವೀರತ್ವ, ಇವು ಮೂರನೂ
ತೊರೆಯದಿರಲಿ ನೆಲವಾಳ್ವ ಅರಸ. (ಕುರಳ್ 383)

ತಿರುವಳ್ಳುವರು ಜಾಗೃತಿ, ಅರಿವು, ಸಾಹಸ-ಇವು ಮೂರನ್ನೂ ಒಬ್ಬ ನಾಯಕನ ಮೂಲಭೂತ ಗುಣಗಳೆಂದು ಉಲ್ಲೇಖಿಸುತ್ತಾರೆ.

ನಾಯಕತ್ವ

ಕಾಣಲು ಸುಲಭನಾಗಿಯೂ, ಎಲ್ಲರನ್ನೂ ಪ್ರೀತಿಸುವವನಾಗಿಯೂ ಇರುವ ನಾಯಕನ ನಾಯಕತ್ವವನ್ನು ಎಲ್ಲಾ ಜನರೂ ಬಯಸುತ್ತಾರೆ ಎಂಬುದನ್ನು,

காட்சிக்கு எளியன் கடுஞ்சொல்லன் அல்லனேல்
மீக்கூறும் மன்னன் நிலம். (குறள் 386)

ಕಾಟ್ಚಿಕ್ಕು ಎಳಿಯನ್ ಕಡುಞ್ಚೊಲ್ಲನ್ ಅಲ್ಲನೇಲ್
ಮೀಕ್ಕೂಱುಮ್ ಮನ್ನನ್ ನಿಲಮ್.

ಕಾಣಲು ಸರಳನಾಗಿ, ನುಡಿಯದಿರಲು ಕಟು ಪದಗಳ
ಪೊಗಳ್ವರು, ಅರಸನ ಆ ರಾಜ್ಯದೊಳು. (ಕುರಳ್ 386)

ಎಂದು ತಿರುಕ್ಕುರಳ್ ಪ್ರತಿಪಾದಿಸುತ್ತದೆ. ಮಾತ್ರವಲ್ಲದೆ, ಧೈರ್ಯ, ದಾನ, ಜ್ಞಾನ ಮತ್ತು ಪ್ರಯತ್ನ-ಈ ನಾಲ್ಕನ್ನೂ ನಾಯಕನ ಗುಣಗಳೆಂದು ವ್ಯಾಖ್ಯಾನಿಸುತ್ತದೆ.

**ನಾಯಕತ್ವದ ತತ್ವ**

முறைசெய்து காப்பாற்றும் மன்னவன் மக்கட்கு
இறையென்று வைக்கப் படும். (குறள் 388)

ಮುಱೈಸೆಯ್ದು ಕಾಪ್ಪಾಱ್ಱುಮ್ ಮನ್ನವನ್ ಮಕ್ಕಟ್ಕು
ಇಱೈಯೆನ್ರು ವೈಕ್ಕಪ್ ಪಡುಮ್.

ನೃಪನವನ ಕರ್ತವ್ಯವ ಪಾಲಿಸಿ ಅನವರತ ಪ್ರಜೆಗಳ ಸಂರಕ್ಷಿಸೆ ಜನತೆ ಆ
ನೃಪನ ದೇವನೆಂದು ವಂದಿಪರು. (ಕುರಳ್ 388)

ನಾಯಕನಾದವನು ತನ್ನನ್ನು ನಂಬಿಕೊಂಡಿರುವ ಜನರಿಗೆ ಅಗತ್ಯವಾದದ್ದನ್ನು ಮಾಡಿ ಅವರನ್ನು ಸಂರಕ್ಷಿಸುವಂಥವನಾಗಿರಬೇಕು ಎಂಬುದೇ ತಿರುಕ್ಕುರಳ್ ಪ್ರತಿಪಾದಿಸುವ ನಾಯಕತ್ವದ ತತ್ವವಾಗಿದೆ. ನಾಯಕತ್ವ ಎಂಬುದು ಅಧಿಕಾರದ ಹಕ್ಕಲ್ಲ; ಅದು ಜವಾಬ್ದಾರಿಯ ಕರ್ತವ್ಯ ಎಂಬುದು ಸ್ಪಷ್ಟವಾಗುತ್ತದೆ. ಒಬ್ಬ ಉತ್ತಮ ನಾಯಕನು ಸಲಹೆಗಳನ್ನು ಆಲಿಸಬೇಕು ಮತ್ತು ನ್ಯೂನತೆಗಳನ್ನು ಎತ್ತಿ ತೋರಿಸುವವರನ್ನು ಸ್ವೀಕರಿಸಬೇಕು.

ತಿರುಕ್ಕುರಳಿನ ನಾಯಕತ್ವದ ಚಿಂತನೆಯಲ್ಲಿ ಜ್ಞಾನ, ಧೈರ್ಯ, ನೀತಿ, ಸಲಹೆ, ಜವಾಬ್ದಾರಿ, ಸಾರ್ವಜನಿಕ ಕಲ್ಯಾಣ- ಮುಂತಾದವು ಒಗ್ಗೂಡುತ್ತವೆ. ನಿಜವಾದ ನಾಯಕ ಎಂದರೆ ಕೇವಲ ಮುಂದೆ ನಡೆಯುವವನಲ್ಲ; ಅವನು ಎಲ್ಲರನ್ನೂ ಮುನ್ನಡೆಸುವವನು.

## 5.9 ತಿರುಕ್ಕುರಳಿನಲ್ಲಿ ಆರೋಗ್ಯಪರ ಚಿಂತನೆ

ತಿರುಕ್ಕುರಳಿನ 'ಔಷಧ ಸೇವನೆ' ಅಧ್ಯಾಯವು ವ್ಯಾಧಿ ತಗುಳಿದ ನಂತರ ಚಿಕಿತ್ಸೆ ಪಡೆಯುವುದು ಮಾತ್ರವಲ್ಲದೆ, ವ್ಯಾಧಿ ತಗುಳದಂತೆ ತಡೆಗಟ್ಟುವ ಜೀವನಶೈಲಿಯನ್ನೂ ವಿವರಿಸುತ್ತದೆ. ವಿಶೇಷವಾಗಿ ಆಹಾರ ಪದ್ಧತಿಯ ಬಗ್ಗೆ ತಿರುವಳ್ಳುವರು ನೀಡುವ ಮಹತ್ವವು ವಿಶೇಷವಾಗಿ ಗಮನಾರ್ಹವಾಗಿದೆ.

மருந்தென வேண்டாவாம் யாக்கைக்கு அருந்தியது
அற்றது போற்றி உணின். (குறள் 942)

ಮರುನ್ದೆನ ವೇಣ್ಡಾವಾಮ್ ಯಾಕ್ಕೈಕ್ಕು ಅರುನ್ದಿಯದು
ಅಱ್ಱದು ಪೋಱ್ಱಿ ಉಣಿನ್.

ಹಿಂದೆ ಉಂಡದ್ದು ಜೀರ್ಣಿಸಿದ ಮೇಲೆ
ಅಳತೆಯಲಿ ಉಣಲು, ಔಷಧಿಯ ಚಟಬೇಡ. (ಕುರಳ್ 942)

ಈಗಾಗಲೇ ತಿಂದ ಆಹಾರವನ್ನು ಜೀರ್ಣಿಸಿಕೊಂಡ ನಂತರ ಮಿತವಾಗಿ ಸೇವಿಸಿದರೆ, ದೇಹಕ್ಕೆ ಔಷಧಿಯ ಅಗತ್ಯವಿಲ್ಲದ ನೆಲೆಯುಂಟಾಗುತ್ತದೆ ಎಂಬ ತಡೆಗಟ್ಟುವ ಆರೋಗ್ಯ ಚಿಂತನೆಯು ಇದರಿಂದ ತಿಳಿಯುತ್ತದೆ.
ಮಿತಿಯನ್ನರಿತು ಸೇವಿಸುವ ಆಹಾರ

அற்றால் அளவறிந்து உண்க அஃதுஉடம்பு
பெற்றான் நெடிதுய்க்கும் ஆறு. (குறள் 943)

ಅಱ್ಱಾಲ್ ಅಳವಱಿನ್ದು ಉಣ್ಕ ಅಃದುಉಡಮ್ಬು
ಪೆಱ್ಱಾನ್ ನೆಡಿದುಯ್ಕ್ಕುಮ್ ಆಱು.

ಉಂಡದ್ದು ಮುಂಚೆ, ಜೀರ್ಣವಾಯಿತೆಂದರಿತು, ಮಿತವಾಗಿ
ಉಣಲು ದೀರ್ಘಾಯುವು ಖಂಡಿತ. (ಕುರಳ್ 943)

ಆಹಾರದ ಗುಣಮಟ್ಟ ಮಾತ್ರವಲ್ಲ, ಅದರ ಪ್ರಮಾಣವೂ ಮುಖ್ಯ. ದೇಹಕ್ಕೆ ಅಗತ್ಯವಿರುವ ಪ್ರಮಾಣಕ್ಕೆ ಅನುಗುಣವಾಗಿ ತಿನ್ನುವುದು ಆರೋಗ್ಯಕರ ಜೀವನಶೈಲಿಯ ಆಧಾರವಾಗಿದೆ.

மாறுபாடு இல்லாத உண்டி மறுத்துண்ணின்
ஊறுபாடு இல்லை உயிர்க்கு. (குறள் 945)

ಮಾಱುಪಾಡು ಇಲ್ಲಾದ ಉಣ್ಡಿ ಮಱುತ್ತುಣ್ಣಿನ್
ಊಱುಪಾಡು ಇಲ್ಲೈ ಉಯಿರ್ಕ್ಕು.

ಶರೀರವ ಕಾಯಲು ತಕ್ಕ ಭೋಜನವ ಸೇವಿಸೆ
ಸಂಕಟ ತರುವ ರೋಗವೂ ಅಂಟದು. (ಕುರಳ್ 945)

ದೇಹಕ್ಕೆ ಸೂಕ್ತವಲ್ಲದ ಆಹಾರವನ್ನು ತಪ್ಪಿಸಿ, ಹೊಂದುವಂಥ ಆಹಾರವನ್ನು ಅನುಸರಿಸಬೇಕೆಂಬ ಚಿಂತನೆಯೂ ಇದರಲ್ಲಿ ಕಂಡುಬರುತ್ತಿದೆ.

ತಿರುಕ್ಕುರಳಿನ ಆರೋಗ್ಯಪರ ಚಿಂತನೆಯು ವ್ಯಾಧಿ ತಗುಳಿದ ನಂತರ ಔಷಧಿ ಸೇವನೆ ಎನ್ನುವುದಕ್ಕಿಂತ, ವ್ಯಾಧಿ ತಗುಳುವ ಮೊದಲು ಆರೋಗ್ಯಕರ ಜೀವನಶೈಲಿಗೆ ಆದ್ಯತೆ ನೀಡುತ್ತದೆ. ಆಹಾರ, ಪ್ರಮಾಣ, ಜೀರ್ಣಕ್ರಿಯೆ ಮತ್ತು ದೇಹದ ಸಹಜತೆ- ಇವುಗಳನ್ನರಿತು ಬದುಕುವುದೇ ಆರೋಗ್ಯಕರ ಜೀವನಶೈಲಿಯ ಆಧಾರ.

## 5.10 ತಿರುಕ್ಕುರಳಿನಲ್ಲಿ ವೈದ್ಯಕೀಯ ನೀತಿ

ತಿರುಕ್ಕುರಳಿನ 'ಔಷಧ ಸೇವನೆ' ಎಂಬ ಅಧ್ಯಾಯವು ಔಷಧ ಮತ್ತು ವೈದ್ಯರ ಬಗೆಗಿನ ಅಭಿಪ್ರಾಯಗಳನ್ನು ದಾಖಲಿಸುತ್ತದೆ. ವೈದ್ಯರು ರೋಗ, ರೋಗದ ಕಾರಣ, ರೋಗವನ್ನು ಗುಣಪಡಿಸುವ ವಿಧಾನ ಮತ್ತು ರೋಗಿಯ ಸ್ವಭಾವವನ್ನು ತಿಳಿದುಕೊಂಡು ಕಾರ್ಯನಿರ್ವಹಿಸಬೇಕು ಎಂದು ಇದರಲ್ಲಿ ಒತ್ತಿ ಹೇಳಲಾಗಿದೆ.

நோய்நாடி நோய்முதல் நாடி அதுதணிக்கும்
வாய்நாடி வாய்ப்பச் செயல். (குறள் 948)

ನೋಯ್ನಾಡಿ ನೋಯ್ಮುದಲ್ ನಾಡಿ ಅದುತಣಿಕ್ಕುಮ್
ವಾಯ್ನಾಡಿ ವಾಯ್ಪ್ಪಚ್ ಸೆಯಲ್.

ರೋಗವನರಿತು, ರೋಗದ ಮೂಲವರಿತು, ಅದ ತಣಿಪ
ಮದ್ದು ಸೇವಿಸಲು ಒಳಿತು. (ಕುರಳ್ 948)

ಮೊದಲು ರೋಗವನ್ನು ಗುರುತಿಸಬೇಕು; ನಂತರ ಅದರ ಕಾರಣವನ್ನು ಗುರುತಿಸಬೇಕು; ನಂತರ ಪರಿಹಾರವನ್ನು ಅನ್ವೇಷಿಸಿ ಸೂಕ್ತ ಚಿಕಿತ್ಸೆಯನ್ನು ಕೈಗೊಳ್ಳಬೇಕು. ಇದುವೇ ವ್ಯವಸ್ಥಿತವಾದ ವೈದ್ಯಕೀಯ ವಿಧಾನದ ಸ್ಪಷ್ಟ ರೂಪವೆಂಬ ಚಿಂತನೆಯನ್ನು ತಿರುಕ್ಕುರಳ್ ನಮ್ಮ ಮುಂದಿಡುತ್ತದೆ.

**ರೋಗಿ ಕೇಂದ್ರಿತ ಚಿಕಿತ್ಸೆ**

உற்றான் அளவும் பிணியளவும் காலமும்
கற்றான் கருதிச் செயல். (குறள் 949)

ಉಱ್ಱಾನ್ ಅಳವುಮ್ ಪಿಣಿಯಳವುಮ್ ಕಾಲಮುಮ್
ಕಱ್ಱಾನ್ ಕರುದಿಚ್ ಸೆಯಲ್.

ರೋಗಿಯ ಶರೀರದ ಪ್ರಕೃತಿ, ರೋಗದ ಪ್ರಕೋಪ, ಎಲ್ಲವ
ಕಂಡರಿತು ಮದ್ದು ಕೊಡುವ ಕುಶಲ ವೈದ್ಯ. (ಕುರಳ್ 949)

ಒಂದೇ ರೋಗಕ್ಕೆ ಎಲ್ಲರಿಗೂ ಒಂದೇ ವಿಧಾನವು ಹೊಂದಲಾರದು. ರೋಗಿಯ ಸ್ಥಿತಿ, ರೋಗದ ಪ್ರಮಾಣ ಮತ್ತು ರೋಗದ ಅವಧಿಯನ್ನು ಪರಿಗಣಿಸಿ ವೈದ್ಯರು ಕಾರ್ಯನಿರ್ವಹಿಸಬೇಕು ಎಂದು ಪ್ರಸ್ತುತ ಕುರಳ್ ವಿವರಿಸುತ್ತದೆ.

உற்றவன் தீர்ப்பான் மருந்துழைச் செல்வான்என்று
அப்பால்நாற் கூற்றே மருந்து. (குறள் 950)

ಉಱ್ಱವನ್ ತೀರ್ಪ್ಪಾನ್ ಮರುನ್ದುೞೈಚ್ ಸೆಲ್ವಾನ್ಎನ್ಱು
ಅಪ್ಪಾಲ್ನಾಱ್ ಕೂಱ್ಱೇ ಮರುನ್ದು.

ರೋಗಿ, ವೈದ್ಯ, ಮದ್ದು, ಉಪಚರಿಪ ದಾದಿ ಈ ನಾಲ್ಕು
ವೈದ್ಯಕೀಯ ಅವಿಚ್ಛಿನ್ನ ಅಂಗಗಳು. (ಕುರಳ್ 950)

ತಿರುವಳ್ಳುವರು ರೋಗಿ, ವೈದ್ಯರು, ಔಷಧ ಮತ್ತು ಚಿಕಿತ್ಸೆ ಎಂಬ ವೈದ್ಯಕೀಯ ಪ್ರಕ್ರಿಯೆಯ ಹಲವು ಅಂಶಗಳನ್ನು

ಸಂಯೋಜಿಸಿ ನೋಡುತ್ತಾರೆ.

ತಿರುಕ್ಕುರಳಿನಲ್ಲಿ ವೈದ್ಯಕೀಯ ನೀತಿ ಎಂಬುದು ಕೇವಲ ರೋಗವನ್ನು ಗುಣಪಡಿಸುವುದಲ್ಲ; ಇದು ರೋಗಿಯನ್ನು ಅರ್ಥಮಾಡಿಕೊಂಡು, ಜ್ಞಾನ, ಸಂಶೋಧನೆ ಮತ್ತು ಜವಾಬ್ದಾರಿಯೊಂದಿಗೆ ಕಾರ್ಯಪ್ರವೃತವಾಗುವಂಥದ್ದು. ಇದರ ವಿಶೇಷತೆಯು ರೋಗವನ್ನಲ್ಲ, ರೋಗಿಯನ್ನು ಪರಿಗಣಿಸುವ ವೈದ್ಯಕೀಯ ದೃಷ್ಟಿಕೋನವಾಗಿದೆ.

## 5.11 ತಿರುಕ್ಕುರಳಿನಲ್ಲಿ ಮಾನಸಿಕ ಆರೋಗ್ಯದ ಚಿಂತನೆ

'ಮಾನಸಿಕ ಆರೋಗ್ಯ' ಎಂಬ ಅಧ್ಯಾಯವನ್ನು ತಿರುಕ್ಕುರಳಿನಲ್ಲಿ ನೇರವಾಗಿ ಕಾಣಲು ಸಾಧ್ಯವಿಲ್ಲ. ಆದಾಗ್ಯೂ, ಆತಂಕ, ಕೋಪ, ಅಸೂಯೆ, ದುರಾಸೆ, ದುಃಖ, ಮನಃಸ್ಥೈರ್ಯ, ಸ್ನೇಹ, ಪ್ರೀತಿ ಮತ್ತು ನಮ್ರತೆ-ಮುಂತಾದವುಗಳ ಕುರಿತಾದ ಕುರಳ್‌ಗಳು ಮನಸ್ಸಿನ ನೆಮ್ಮದಿಗೆ ಸಹಾಯ ಮಾಡುವ ಜೀವನ ವಿಧಾನದ ಅಂಶಗಳನ್ನು ಒದಗಿಸುತ್ತವೆ.

> அழுக்காறு அவாவெகுளி இன்னாச்சொல் நான்கும்
> இழுக்கா இயன்றது அறம். (குறள் 35)
>
> ಅಟುಕ್ಕಾಱು ಅವಾವೆಗುಳಿ ಇನ್ನಾಚ್ಚೊಲ್ ನಾನ್ಕುಮ್
> ಇಟುಕ್ಕಾ ಇಯನ್ಱದು ಅಱಮ್.
>
> ಈರ್ಷ್ಯೆ, ಲೋಭ, ಕ್ರೋಧ, ಕಟುನುಡಿ, ಈ ನಾಲ್ಕನು ಬಿಟ್ಟು
> ನಡೆವುದೇ ಧರ್ಮ ಪರಿಪಾಲನೆಯು. (ಕುರಳ್ 35)

ಅಸೂಯೆ, ಅತಿಯಾಸೆ, ಕೋಪ ಮತ್ತು ನೋಯಿಸುವ ಮಾತು-ಮುಂತಾದವುಗಳಿಂದ ದೂರವಿರುವುದು ಧರ್ಮವೆಂದು ಹೇಳಲಾಗುತ್ತದೆ. ಇವು ವೈಯಕ್ತಿಕ ಸಂಬಂಧಗಳ ಮೇಲೆ ಮಾತ್ರವಲ್ಲದೆ ಮನಸ್ಸಿನ ನೆಮ್ಮದಿಯ ಮೇಲೂ ಪರಿಣಾಮ ಬೀರುವ ಅಂಶಗಳಾಗಿವೆ.

**ದುಃಖವನ್ನು ಎದುರಿಸುವ ಮನಃಸ್ಥೈರ್ಯ**

ದುಃಖದಿಂದ ಬಾಡುವುದೇ ಮಾನವ ಸ್ವಭಾವ. ಇದು ಮಾನಸಿಕ ನೆಮ್ಮದಿಯಿಲ್ಲದಿರುವಿಕೆಗೂ ಕಾರಣವಾಗುತ್ತದೆ. ಆ ಸಂದರ್ಭದಲ್ಲಿ, ಮಾನಸಿಕ ಆರೋಗ್ಯವು ಹದಗೆಡುತ್ತದೆ. ಅಂತಹ ಪರಿಸ್ಥಿತಿಯಿಂದ ಒಬ್ಬನು ತನ್ನನ್ನು ತಾನು ರಕ್ಷಿಸಿಕೊಳ್ಳಲು ತಿರುವಳ್ಳುವರು ಒಂದು ಪರಿಹಾರವನ್ನು ಸೂಚಿಸುತ್ತಾರೆ. ಅಂದರೆ, ದುಃಖ ಬಂದಾಗ ಒಬ್ಬ ವ್ಯಕ್ತಿಯು ಅದನ್ನು ಸಂತೋಷದಿಂದ ಸ್ವೀಕರಿಸಿದರೆ, ಅವನ ದುಃಖವು ಮನಸ್ಸಿನ ಮೇಲೆ ಪರಿಣಾಮ ಬೀರುವುದಿಲ್ಲ. ಈ ಅಭಿಪ್ರಾಯವನ್ನು,

> இடுக்கண் வருங்கால் நகுக அதனை
> அடுத்தூர்வது அஃதொப்பது இல். (குறள் 621)
>
> ಇಡುಕ್ಕಣ್ ವರುಙ್ಗಾಲ್ ನಗುಗ ಅದನೈ
> ಅಡುತ್ತೂರ್ವದು ಅಃದೊಪ್ಪದು ಇಲ್.
>
> ಎಡರು ಬರಲು ನಗಾಡು ಅದ
> ಅಂಟಿ ಬರುವ ಸಂಕಟವ ದಾಟಲು ಮಾರ್ಗ ಬೇರಿಲ್ಲ. (ಕುರಳ್ 621)

ಎಂಬ ಕುರಳ್ ಮುಂದಿಡುತ್ತದೆ. ಈ ಕುರಳಿನ ಅರ್ಥ ನಾವು ದುಃಖವನ್ನು ನಿರಾಕರಿಸಬೇಕು ಎಂದಲ್ಲ, ಬದಲಿಗೆ ದುಃಖದಿಂದ ಸಂಪೂರ್ಣವಾಗಿ ಕುಸಿಯದೆ ಎದುರಿಸುವ ಮನಃಸ್ಥೈರ್ಯವನ್ನು ಹೊಂದಬೇಕೆಂದು ಅರ್ಥೈಯಿಸಿಕೊಳ್ಳಬಹುದು.

ಮಾನಸಿಕ ಆರೋಗ್ಯಕ್ಕೆ ಉತ್ತಮ ಮಾನವ ಸಂಬಂಧಗಳು ಸಹ ಅತ್ಯಗತ್ಯ. ಪ್ರೀತಿ, ಸ್ನೇಹ, ಸವಿ ಮಾತುಗಳು, ಕೃತಜ್ಞತೆ-

ಇತ್ಯಾದಿಗಳಿಗೆ ತಿರುವಳ್ಳುವರು ನೀಡುವ ಮಹತ್ವವು ಮನುಷ್ಯನ ಮಾನಸಿಕ ಆರೋಗ್ಯ ಮತ್ತು ಸಾಮಾಜಿಕ ಸಂಬಂಧಗಳಿಗೆ ಸಂಬಂಧಿಸಿದೆ.

**ಮಾನಸಿಕ ಆರೋಗ್ಯವನ್ನು ಕಾಪಾಡಿಕೊಳ್ಳುವ ಮಾರ್ಗಗಳು**

ಇತರರ ಬೆಳವಣಿಗೆಯನ್ನು ಕಂಡು ಅಸೂಯೆ ಪಡುವುದು ಮಾನಸಿಕ ಆರೋಗ್ಯಕ್ಕೆ ಹಾನಿಕಾರಕ. ಇತರರ ಬೆಳವಣಿಗೆಯನ್ನು ಕಂಡು ಅಸೂಯೆ ಪಡದೆ, ಪ್ರಶಂಸಿಸಿ ಸಂತಸಗೊಂಡು, ನಾವೂ ಸಹ ಇಂತಹುದೇ ಬೆಳವಣಿಗೆಯನ್ನು ಪಡೆಯೋಣ; ಪಡೆಯಬಹುದು ಎಂಬ ನಂಬಿಕೆಯೊಂದಿಗೆ ಕಾರ್ಯಪ್ರವೃತವಾಗುವುದು ಮಾನಸಿಕ ಆರೋಗ್ಯವನ್ನು ಕಾಪಾಡಿಕೊಳ್ಳಲು ಸಹಾಯಕವಾಗುತ್ತದೆ. ಈ ಅಭಿಪ್ರಾಯವನ್ನು,

அறனாக்கம் வேண்டாதான் என்பான் பிறனாக்கம்
பேணாது அழுக்கறுப் பான். (குறள் 163)

ಅಱನಾಕ್ಕಮ್ ವೇಣ್ಡಾದಾನ್ ಎನ್ಬಾನ್ ಪಿಱನಾಕ್ಕಮ್
ಪೇಣಾದು ಅೞುಕ್ಕಱುಪ್ ಪಾನ್.

ಮತ್ತೊಬ್ಬನ ಧನ ವೈಭವವ ಕಂಡು ಈರ್ಷೆ  ಪಡುವವನಿಗೆ,
ಧರ್ಮ, ಶ್ರೇಯಸ್ಸು ದೊರೆಯುವುದಿಲ್ಲ. (ಕುರಳ್  163)

ಎಂದು ಪ್ರಸ್ತುತ ಕುರಳ್(ದ್ವಿಪದಿ) ಅಭಿವ್ಯಕ್ತಿಸುತ್ತದೆ.

ತಿರುಕ್ಕುರಳ್ ಮನಸ್ಸಿನ ನೆಮ್ಮದಿಯನ್ನು ಹೊರಗೆ ಹುಡುಕುವ ಮೊದಲು ನಮ್ಮ ಮನಸ್ಸನ್ನು ಶುದ್ಧೀಕರಿಸಲು ಹೇಳುತ್ತದೆ. ನಮ್ಮ ಭಾವನೆಗಳನ್ನು ಅರಿತುಕೊಳ್ಳುವುದು, ಅವುಗಳನ್ನು ನಿಯಂತ್ರಿಸುವುದು, ದುಃಖದಿಂದ ಸಡಿಲಗೊಳ್ಳದಿರುವುದು, ಪ್ರೀತಿಯ ಸಂಬಂಧಗಳನ್ನು ಬೆಳೆಸುವುದು-ಮುಂತಾದವು ಜೀವನ ವಿಧಾನದ ಸಂದೇಶಗಳಾಗಿವೆ.

## 5.12 ತಿರುಕ್ಕುರಳಿನಲ್ಲಿ ಮಾನವೀಯತೆ

ಮನುಷ್ಯರನ್ನು ಮನುಷ್ಯರಂತೆ ಗೌರವಿಸುವುದು, ಇತರರ ದುಃಖವನ್ನು ಗುರುತಿಸುವುದು, ಸಹಾಯ ಮಾಡುವುದು, ಇತರರಿಗೆ ಕೆಡುಕು ಮಾಡದಿರುವುದು, ಹಸಿವನ್ನು ನೀಗಿಸುವುದು ಮತ್ತು ಅವರನ್ನು ಪ್ರೀತಿಯಿಂದ ನಡೆಸಿಕೊಳ್ಳುವುದು ಮಾನವೀಯತೆಯ ಅಡಿಪಾಯಗಳಾಗಿವೆ. ಈ ಚಿಂತನೆಯು ತಿರುಕ್ಕುರಳ್ ಪೂರ್ತಿ ವಿವಿಧ ರೂಪಗಳಲ್ಲಿ ಹರಡಿದೆ.

அன்பிலார் எல்லாம் தமக்குரியர் அன்புடையார்
என்பும் உரியர் பிறர்க்கு. (குறள் 72)

ಅನ್ಬಿಲಾರ್ ಎಲ್ಲಾಮ್ ತಮಕ್ಕುರಿಯರ್ ಅನ್ಬುಡೈಯಾರ್
ಎನ್ಬುಮ್ ಉರಿಯರ್ ಪಿಱರ್ಕ್ಕು.

ಪ್ರೇಮರಹಿತರು ಎಲ್ಲವನೂ ತಮದೆಂಬರು
ಪ್ರೇಮವುಳ್ಳವರು ತನ್ನೆಲುಬನೂ ಅರ್ಪಿಸುವರು ಪರರಿಗೆ.(ಕುರಳ್ 72)

ಸ್ವಾರ್ಥವನ್ನು ಮೀರಿ ಇತರರೆಡೆಗೆ ವಿಸ್ತರಿಸುವ ಮನಸ್ಸೇ ಮಾನವೀಯತೆಯ ಆರಂಭ.

**ಇತರರ ದುಃಖವನ್ನು ತನ್ನ ದುಃಖವೆಂದು ಗ್ರಹಿಸುವುದು**

அறிவினான் ஆகுவது உண்டோ பிறிதின்நோய்
தம்நோய்போல் போற்றாக் கடை. (குறள் 315)

ಅಱಿವಿನಾನ್ ಆಗುವದು ಉಣ್ಡೋ ಪಿಱಿದಿನ್ನೋಯ್
ತಮ್ನೋಯ್ಪೋಲ್ ಪೋಱ್ಱಾಕ ಕಡೈ.

ಅರಿವಿನಿಂದಾಗುವುದು ಏನುಂಟು ಪರರ ನೋವನು
ಅರಿಯದಿರಲು ತನ್ನ ನೋವೆಂದು. (ಕುರಳ್ 315)

ಇತರರ ನೋವನ್ನು ತನ್ನ ನೋವೆಂದು ಅನುಭವಿಸದ ಜ್ಞಾನದಿಂದ ಏನು ಪ್ರಯೋಜನ ಎಂಬ ಪ್ರಶ್ನೆಯು ಮಾನವೀಯತೆಯ ಶ್ರೇಷ್ಠತೆಯನ್ನು ಮುಟ್ಟುತ್ತದೆ. ಜ್ಞಾನದ ಶ್ರೇಷ್ಠತೆಯು ಅದರ ಪ್ರಮಾಣದಲ್ಲಿಲ್ಲ; ಅದು ಇತರರಿಗೆ ಪ್ರಯೋಜನವಾಗುವ ರೀತಿಯಲ್ಲಿದೆ.

**ದಾನ ಮತ್ತು ಮಾನವೀಯತೆ**

ನಿಜವಾಗಿ ಅಗತ್ಯವಿರುವವರಿಗೆ ಸಹಾಯ ಮಾಡಿದಾಗ ಮಾತ್ರ ಅದು ದಾನವಾಗುತ್ತದೆ. ಅದನ್ನು,

வறியார்க்கொன்று ஈவதே ஈகைமற் றெல்லாம்
குறியெதிர்ப்பை நீர துடைத்து. (குறள் 221)

ವಱಿಯಾರ್ಕ್ಕೊನ್ಱು ಈವದೇ ಈಗೈಮಱ್ ಱೆಲ್ಲಾಮ್
ಕುಱಿಯೆದಿರ್ಪ್ಪೈ ನೀರ ತುಡೈತ್ತು.

ಬಡವರಿಗಿತ್ತುದೇ ಉತ್ತಮ ದಾನವೆಂಬರು ಬೇರೆಲ್ಲ
ದಾನ ಪ್ರತ್ಯುಪಕಾರದ ಅಪೇಕ್ಷೆಯಲಿ ಎಸಗಿದ ದೆಂಬರು. (ಕುರಳ್ 221)

ಎಂಬ ಕುರಳು(ದ್ವಿಪದಿ) ವಿವರಿಸುತ್ತದೆ. ಯಾವುದೇ ನಿರೀಕ್ಷೆಯಿಲ್ಲದೆ ಮಾಡುವ ಸಹಾಯವು ಮಾನವೀಯತೆಯ ಅತ್ಯುನ್ನತ ರೂಪವಾಗುತ್ತದೆ.

ತಿರುಕ್ಕುರಳಿನಲ್ಲಿ ಮಾನವೀಯತೆಯು 'ನಾನು' ಎಂಬುದರಿಂದ 'ನಾವು' ಎಂಬುದಕ್ಕೆ ಸಾಗುವ ಒಂದು ಮಾನಸಿಕ ಪ್ರಯಾಣವಾಗಿದೆ. ನಾವು ಇತರರ ದುಃಖವನ್ನು ಅರ್ಥಮಾಡಿಕೊಂಡು, ಅವರ ಒಳಿತಿಗಾಗಿ ಕಾರ್ಯಪ್ರವೃತ್ತರಾದಾಗ ಮಾತ್ರ ಅರಿವು ಮತ್ತು ಸಂಪತ್ತು ಮಾನವೀಯ ಮೌಲ್ಯವನ್ನೂ ಪಡೆಯುತ್ತವೆ.

## 5.13 ತಿರುಕ್ಕುರಳಿನಲ್ಲಿ ಸಾಮಾಜಿಕ ಸಾಮರಸ್ಯ

ಒಂದು ಸಮಾಜವು ಕೇವಲ ಕಾನೂನುಗಳಿಂದ ಮಾತ್ರ ನೆಲೆಸಿರದು. ಪರಸ್ಪರ ಒಬ್ಬರನ್ನೊಬ್ಬರು ಗೌರವಿಸುವುದು, ಪ್ರೀತಿ, ನೀತಿ, ತಾಳ್ಮೆ, ಸವಿ ಮಾತುಗಳು ಮತ್ತು ಬಿಟ್ಟುಕೊಡುವಿಕೆ-ಮುಂತಾದ ಗುಣಗಳೇ ಸಾಮಾಜಿಕ ಸಾಮರಸ್ಯದ ಅಡಿಪಾಯಗಳಾಗಿವೆ.

இனிய உளவாக இன்னாத கூறல்
கனியிருப்பக் காய்கவர்ந் தற்று. (குறள் 100)

ಇನಿಯ ಉಳವಾಗ ಇನ್ನಾದ ಕೂಱಲ್
ಕನಿಯಿರುಪ್ಪಕ ಕಾಯ್ಕವರ್ನ್ ದಱ್ಱು.

ಇಂಪಾದ ಸೊಲ್ಲಿರಲು ನುಡಿಯದೆ ಕಠಿಣ ವಾರ್ತೆಗಳಾಡುವುದು ಮಾಗಿದ
ಹಣ್ಣಿರಲು ಕಾಯ ಸವಿದಂತೆ. (ಕುರಳ್ 100)

ಸವಿಯಾದ ಮಾತುಗಳನ್ನಾಡುವ ಬದಲು ಕಟು ಮಾತುಗಳನ್ನು ಆಡುವುದು ಪಕ್ವವಾದ ಹಣ್ಣಿರಲು ಅಪಕ್ವವಾದ

ಕಾಯನ್ನು ತಿನ್ನುವುದಕ್ಕೆ ಸಮ. ಸಂಬಂಧಗಳನ್ನು ಕಾಪಾಡಿಕೊಳ್ಳುವಲ್ಲಿ ಮಾತುಗಳು ಪ್ರಮುಖ ಪಾತ್ರ ವಹಿಸುತ್ತವೆ. ಆದುದರಿಂದ, ಈ ದ್ವಿಪದಿಯು ಸಾಮಾಜಿಕ ಸಂಬಂಧಗಳಲ್ಲಿ ಭಾಷೆಯ ಜವಾಬ್ದಾರಿಯನ್ನು ತಿಳಿಸುತ್ತದೆ.

**ಕೆಡುಕಿಗೆ ಬದಲು ಒಳಿತು**

ಪ್ರತೀಕಾರಕ್ಕೆ ಪ್ರತೀಕಾರದ ಚಕ್ರವನ್ನು ಮುಂದುವರಿಸುವ ಬದಲು, ಕೆಡುಕಿಗೆ ಒಳಿತಿನಿಂದ ಪ್ರತಿಕ್ರಿಯಿಸುವುದೇ ಅತ್ಯುನ್ನತ ಸದ್ಗುಣ ಎಂದು ತಿರುವಳ್ಳುವರು ಹೇಳುತ್ತಾರೆ. ಇದು ಸಾಮಾಜಿಕ ಸಾಮರಸ್ಯಕ್ಕೆ ಆಳವಾದ ನೈತಿಕ ವಿಧಾನವಾಗಿದೆ. ಇದನ್ನು ವಿವರಿಸಲು,

இன்னாசெய் தாரை ஒறுத்தல் அவர்நாண
நன்னயம் செய்து விடல். (குறள் 314)

ಇನ್ನಾಸೆಯ್ ದಾರೈ ಒಱುತ್ತಲ್ ಅವರ್ನಾಣ
ನನ್ನಯಮ್ ಸೆಯ್ದು ವಿಡಲ್.

ತನಗೆ ಕೇಡು ಮಾಡಿದವನನ್ನು ಶಿಕ್ಷಿಸುವ ಅತ್ಯುತ್ತಮ ಮಾರ್ಗವೆಂದರೆ, ಅವನು ನಾಚಿಕೆ
ಪಡುವಂತೆ ಅವನಿಗೆ ಒಳ್ಳೆಯದನ್ನು ಮಾಡಿ ಅದನ್ನು ಮರೆತುಬಿಡುವುದು. (ಕುರಳ್ 314)

ಎಂದು ತಿರುಕ್ಕುರಳ್ ಪ್ರತಿಪಾದಿಸುತ್ತದೆ.

**ಮಧ್ಯಮ ನೆಲೆ**

ಸಾಮಾಜಿಕ ಸಾಮರಸ್ಯಕ್ಕೆ ನ್ಯಾಯವು ಅತ್ಯುನ್ನತವಾಗಿದೆ. ಪಕ್ಷಪಾತವಿಲ್ಲದೆ ಎಲ್ಲರನ್ನು ಸಮಾನವಾಗಿ ಪರಿಗಣಿಸುವ ಮಧ್ಯಮ ನೆಲೆಯಿಲ್ಲದೆ, ಶಾಶ್ವತ ಏಕತೆಯನ್ನು ಸಾಧಿಸಲು ಸಾಧ್ಯವಿಲ್ಲ. ಆದುದರಿಂದ, ತಿರುಕ್ಕುರಳಿನ ಸಾಮರಸ್ಯವು ವೈವಿಧ್ಯತೆಗಳನ್ನು ನಾಶಮಾಡುವುದಲ್ಲ; ಇದು ವೈವಿಧ್ಯತೆಗಳ ನಡುವೆಯೂ ಮಾನವ ಸಾಮರಸ್ಯವನ್ನು ಕಾಪಾಡುವಂಥದ್ದು.

ಪ್ರೀತಿ, ಸವಿಮಾತು, ತಾಳ್ಮೆ, ನೀತಿ ಮತ್ತು ಕ್ಷಮೆ-ಮುಂತಾದವು ತಿರುಕ್ಕುರಳ್ ಅಭಿವ್ಯಕ್ತಿಸುವ ಸಾಮಾಜಿಕ ಸಾಮರಸ್ಯದ ಆಧಾರಸ್ತಂಭಗಳಾಗಿವೆ. ಏಕತೆ ಎಂಬುದು ಎಲ್ಲರೂ ಒಂದೇ ರೀತಿ ಇರುವುದು ಎಂದರ್ಥವಲ್ಲ; ಬೇರೆ ಬೇರೆಯವರೂ ಸಹ ಗೌರವದಿಂದ ಒಟ್ಟಿಗೆ ಬದುಕುವುದು ಎಂದರ್ಥ.

## 5.14 ತಿರುಕ್ಕುರಳಿನಲ್ಲಿ ಸ್ನೇಹ

ತಿರುಕ್ಕುರಳಿನಲ್ಲಿ ಸ್ನೇಹವನ್ನು ಕೇವಲ ಮನರಂಜನಾ ಸಂಬಂಧವೆಂದು ಪರಿಗಣಿಸಲಾಗಿಲ್ಲ. ಒಳ್ಳೆಯ ಸ್ನೇಹಿತನನ್ನು ಆರಿಸುವುದು, ಸ್ನೇಹವನ್ನು ಪರೀಕ್ಷಿಸುವುದು, ನಿಜವಾದ ಸ್ನೇಹವನ್ನು ಕಾಪಾಡಿಕೊಳ್ಳುವುದು ಮತ್ತು ಕೆಟ್ಟ ಸ್ನೇಹವನ್ನು ತಪ್ಪಿಸುವುದು-ಮುಂತಾದ ಸ್ನೇಹದ ಹಲವು ಆಯಾಮಗಳನ್ನು ತಿರುವಳ್ಳುವರು ಅನ್ವೇಷಿಸುತ್ತಾರೆ.

முகநக நட்பது நட்பன்று நெஞ்சத்து
அகநக நட்பது நட்பு. (குறள் 786)

ಮುಗನಗ ನಟ್ಪದು ನಟ್ಪನ್ಱು ನೆಞ್ಚತ್ತು
ಅಗನಗ ನಟ್ಪದು ನಟ್ಪು.

ಹುಸಿ ನಗೆಯ ತೋರಿ ಸ್ನೇಹವ ತೋರುವುದಕ್ಕಿಂತ
ಹೃದಯ ಸೌಹಾರ್ದದಿ ಕಾಣ್ಬುದೇ ಮಿತ್ರುತ್ವ. (ಕುರಳ್ 786)

ಮುಖಾಮುಖಿ ಕಂಡಾಗ ಮಾತ್ರ ತುಟಿಯಲ್ಲಿ ನಗೆಯನ್ನು ತೋರಿಸಿ ಸ್ನೇಹ ಮಾಡುವುದು ಸ್ನೇಹದ ಲಕ್ಷಣವಲ್ಲ; ಅದು

ಹೃದಯದಿಂದ ಅರಳುವ ನಿಜವಾದ ಪ್ರೀತಿಯೇ ಸ್ನೇಹ.

**ತಪ್ಪನ್ನು ಸರಿಪಡಿಸುವ ಸ್ನೇಹಿತ**

ಸ್ನೇಹಿತನು ಸಂತೋಷದಲ್ಲಿ ಜೊತೆ ಇರುವವನು ಮಾತ್ರವಲ್ಲ; ತಪ್ಪು ಮಾರ್ಗದಿಂದ ಬಿಡಿಸಿ ಮಾರ್ಗದರ್ಶನ ಮಾಡಿ ಕಷ್ಟದ ಸಮಯದಲ್ಲಿ ಬೆಂಬಲವಾಗಿ ನಿಲ್ಲುವವನೇ ನಿಜವಾದ ಸ್ನೇಹಿತ ಎಂದು ಸ್ನೇಹಕ್ಕೆ ತಿರುವಳ್ಳುವರು ವ್ಯಾಖ್ಯಾನಿಸುತ್ತಾರೆ.

அழிவின் அவைநீக்கி ஆறுஉய்த்து அழிவின்கண்
அல்லல் உழப்பதாம் நட்பு. (குறள் 787)

ಅೞಿವಿನ್ ಅವೈನೀಕ್ಕಿ ಆಱುಉಯ್ತ್ತು ಅೞಿವಿನ್ಕಣ್
ಅಲ್ಲಲ್ ಉೞಪ್ಪದಾಮ್ ನಟ್ಪು.

ಪತನ ಮಾರ್ಗದೊಳು ಪದವಿಡೆ ತಡೆಹಿಡಿದು
ಸಫಲ ಮಾರ್ಗದೊಳು ಕೊಂಡೊಯ್ಯುವುದೇ ಮಿತ್ರತ್ವ. (ಕುರಳ್ 787)

ಎಂಬ ಕುರಳ್ ಸ್ನೇಹದ ಕರ್ತವ್ಯವನ್ನು ಒತ್ತಾಯಿಸುತ್ತದೆ. ಸಂಕಷ್ಟದಲ್ಲಿರುವ ಸ್ನೇಹಿತನನ್ನು ಕಾಪಾಡುವ ಕಾರ್ಯವನ್ನು ವಿವರಿಸಲು ತಿರುವಳ್ಳುವರು ಒಂದು ಭವ್ಯವಾದ ದೃಷ್ಟಾಂತವನ್ನು ಬಳಸಿದ್ದಾರೆ.

உடுக்கை இழந்தவன் கைபோல ஆங்கே
இடுக்கண் களைவதாம் நட்பு. (குறள் 788)

ಉಡುಕ್ಕೈ ಇೞನ್ದವನ್ ಕೈಪೋಲ ಆಙ್ಗೇ
ಇಡುಕ್ಕಣ್ ಕಳೈವದಾಮ್ ನಟ್ಪು.

ಉಟ್ಟಿದ್ದು ಕಳೆಯಲು ಕೈ ತಾನೇ ತಡೆಯುವಂತೆ
ವಿಪತ್ತು ಕಾಡಲು ಕರೆಯದೆ ಬಂದು ಕಾಯುವುದೇ ಮಿತ್ರತ್ವ. (ಕುರಳ್ 788)

ಬಟ್ಟೆ ಜಾರಿದಾಗ ಕೈ ಸ್ವಯಂಪ್ರೇರಿತವಾಗಿ ಸಹಾಯ ಮಾಡುವಂತೆಯೇ, ಸಂಕಷ್ಟದಲ್ಲಿರುವ ಸ್ನೇಹಿತನಿಗೆ ಕರೆಗಾಗಿ ಕಾಯದೆ ಸಹಾಯ ಮಾಡುವುದು ನಿಜವಾದ ಸ್ನೇಹ ಎಂದು ಅವರು ಹೇಳುತ್ತಾರೆ.

ಸಂತಸವನ್ನು ಹಂಚಿಕೊಳ್ಳುವ ಬದಲು, ತಪ್ಪುಗಳನ್ನು ಸರಿಪಡಿಸುವುದು, ಸಂಕಷ್ಟದ ಸಮಯದಲ್ಲಿ ಬೆಂಬಲವಾಗಿರುವುದು, ಪ್ರಾಮಾಣಿಕತೆಯಿಂದಿರುವುದು-ಮುಂತಾದವುಗಳಿಂದಲೇ ಸ್ನೇಹದ ಮೌಲ್ಯವು ಅಸ್ತಿತ್ವದಲ್ಲಿದೆ.

## 5.15 ತಿರುಕ್ಕುರಳಿನಲ್ಲಿ ರಾಜನೀತಿ

ತಿರುಕ್ಕುರಳಿನ ಅರ್ಥಭಾಗದಲ್ಲಿ, ರಾಜ, ಆಡಳಿತಗಾರರು, ಮಂತ್ರಿ, ಕೋಟೆ, ಸೈನ್ಯ, ನಾಗರಿಕರು, ನ್ಯಾಯ, ಆರ್ಥಿಕತೆ ಮತ್ತು ರಾಯಭಾರದಂತಹ ರಾಜನೀತಿಯ ಅಂಶಗಳನ್ನು ವಿವರವಾಗಿ ಚರ್ಚಿಸಲಾಗಿದೆ. ತಿರುವಳ್ಳುವರ್ ಅವರ ರಾಜನೀತಿಯ ಚಿಂತನೆಯಲ್ಲಿ ಜನರ ಕಲ್ಯಾಣ ಮತ್ತು ನ್ಯಾಯವು ಮುಂಚೂಣಿಯಲ್ಲಿವೆ.

படைகுடி கூழ்அமைச்சு நட்புஅரண் ஆறும்
உடையான் அரசருள் ஏறு. (குறள் 381)

ಪಡೈಕುಡಿ ಕೂೞ್ಅಮೈಚ್ಚು ನಟ್ಪುಅರಣ್ ಆಱುಮ್
ಉಡೈಯಾನ್ ಅರಸರುಳ್ ಏಱು.

ಪಡೆ, ಕುಡಿ, ಕೂಳ್, ಅಮಾತ್ಯ, ಮಿತ್ರ, ದುರ್ಗ, ಇವ್ವಾರನು
ಪಡೆದಿರುವ ಅರಸನ ರಾಜಸಿಂಹನೆಂಬರು ಅರಸರೊಳು. (ಕುರಳ್ 381)

ಸೈನ್ಯ, ಪ್ರಜೆ, ಆರ್ಥಿಕ ಸಂಪನ್ಮೂಲಗಳು, ಸಚಿವಾಲಯ, ಸ್ನೇಹ ಮತ್ತು ಕೋಟೆ-ಈ ಆರು ಅಂಶಗಳನ್ನು ತಿರುವಳ್ಳುವರು ರಾಜ್ಯದ ಪ್ರಮುಖ ಅಂಗಗಳಾಗಿ ಉಲ್ಲೇಖಿಸುತ್ತಾರೆ:

**ನ್ಯಾಯಾಡಳಿತ**

வான்நோக்கி வாழும் உலகெல்லாம் மன்னவன்
கோல்நோக்கி வாழும் குடி. (குறள் 542)

ವಾನ್ನೋಕ್ಕಿ ವಾಟುಮ್ ಉಲಕೆಲ್ಲಾಮ್ ಮನ್ನವನ್
ಕೋಲ್ನೋಕ್ಕಿ ವಾಟುಮ್ ಕುಡಿ.

ಅಪೇಕ್ಷಿಸಿ ಮಳೆಯ, ನೋಡುವರು ಆಕಾಶವ ಜಗದಿ
ಅಪೇಕ್ಷಿಸಿ ಸುಶಾಸನವ ನೋಡುವನು ಅರಸನೊಳು ಪ್ರಜೆ. (ಕುರಳ್ 542)

ಮಳೆಗಾಗಿ ಕಾಯುತ್ತಿರುವ ಜಗತ್ತು ಹೇಗೋ ಹಾಗೆಯೇ ಪ್ರಜೆಗಳ ಜೀವನವೂ ರಾಜನ ರಾಜದಂಡವನ್ನು ಅವಲಂಬಿಸಿದೆ ಎಂಬ ಅಭಿಪ್ರಾಯ ಇಲ್ಲಿ ವ್ಯಕ್ತವಾಗುತ್ತದೆ. ರಾಜನೀತಿಯೆಂಬುದು ವೈಯಕ್ತಿಕ ಹೆಮ್ಮೆಯ ಸಾಧನವಲ್ಲ; ಜನರ ಸುರಕ್ಷತೆ ಮತ್ತು ಯೋಗಕ್ಷೇಮದ ಜವಾಬ್ದಾರಿಯಾಗಿದೆ ಎಂಬುದು ತಿರುಕ್ಕುರಳಿನ ತಳಹದಿ. ತಿರುಕ್ಕುರಳಿನ ರಾಜನೀತಿಯ ಸಿದ್ಧಾಂತದಲ್ಲಿ ಅಧಿಕಾರಕ್ಕಿಂತ ನ್ಯಾಯ, ಆಡಳಿತಗಾರನಿಗಿಂತ ಪ್ರಜೆಗಳ ಕಲ್ಯಾಣ, ಬಲಕ್ಕಿಂತ ಜವಾಬ್ದಾರಿ-ಇವು ಬಹಳ ಪ್ರಾಮುಖ್ಯತೆಯನ್ನು ಪಡೆಯುತ್ತವೆ.

## 5.16 ತಿರುಕ್ಕುರಳಿನಲ್ಲಿ ಆಡಳಿತಾತ್ಮಕ ಸಾಮರ್ಥ್ಯ

ಆಡಳಿತ ಎಂಬುದು ಕೇವಲ ನಿರ್ಧಾರಗಳನ್ನು ತೆಗೆದುಕೊಳ್ಳುವುದಲ್ಲ; ಸರಿಯಾದ ಸಮಯದಲ್ಲಿ ಸರಿಯಾದ ವ್ಯಕ್ತಿಗೆ ಸರಿಯಾದ ಕಾರ್ಯವನ್ನು ವಹಿಸಿ, ಫಲಿತಾಂಶಗಳನ್ನು ಮೌಲ್ಯಮಾಪನ ಮಾಡುವುದು ಮತ್ತು ಅದನ್ನು ಕಾರ್ಯಗತಗೊಳಿಸುವುದು. ಇಂತಹ ಆಡಳಿತಾತ್ಮಕ ಅಂಶಗಳು ತಿರುಕ್ಕುರಳಿನ ಹಲವು ಅಧ್ಯಾಯಗಳಲ್ಲಿ ಕಂಡುಬರುತ್ತವೆ.

இதனை இதனால் இவன்முடிக்கும் என்றாய்ந்து
அதனை அவன்கண் விடல். (குறள் 517)

ಇದನೈ ಇದನಾಲ್ ಇವನ್ಮುಡಿಕ್ಕುಮ್ ಎನ್ರಾಯ್ನ್ದು
ಅದನೈ ಅವನ್ಕಣ್ ವಿಡಲ್.

ಇದನು ಇದರಿಂದ ಇವನು ಸಂಪೂರ್ಣಗೊಳಿಸುವ ಕ್ಷಮತೆಯುಳ್ಳವನೆಂದರಿತು
ಅದನು ಅವನ ನಿರ್ವಾಹಕೆ ಒಪ್ಪಿಸು. (ಕುರಳ್ 517)

ಒಂದು ಕೆಲಸವನ್ನು ಪರಿಣಾಮಕಾರಿಯಾಗಿ ಮತ್ತು ಯಾವ ರೀತಿಯಲ್ಲಿ ಪೂರ್ಣಗೊಳಿಸಬಲ್ಲ ಎಂಬುದನ್ನು ಪರಿಶೀಲಿಸಿ ಆ ವ್ಯಕ್ತಿಗೆ ವಹಿಸಬೇಕು. ಇದು ಆಡಳಿತದಲ್ಲಿ ಹೇಳಲಾಗುವ 'ಸರಿಯಾದ ಕೆಲಸಕ್ಕೆ ಸರಿಯಾದ ವ್ಯಕ್ತಿ' ಎಂಬ ಅಭಿಪ್ರಾಯಕ್ಕೆ ತಕ್ಕುದ್ದಾಗಿದೆ.

**ಯೋಜನೆ ಮತ್ತು ಅನುಷ್ಠಾನ**

எண்ணித் துணிக கருமம் துணிந்தபின்

எண்ணுவம் என்பது இழுக்கு. (குறள் 467)

ಎಣ್ಣಿತ್ ತುಣಿಗ ಕರುಮಮ್ ತುಣಿನ್ದಪಿನ್
ಎಣ್ಣುವಮ್ ಎನ್ಪದು ಇಟುಕ್ಕು.

ಯೋಚಿಸಿ ಧೈರ್ಯಗೆಡದೆ ಎಸಗು ಕರ್ಮವ; ಧೈರ್ಯದಿ ತೊಡಗಿ
ಚಿಂತಿಸುವೆನೆಂಬುದು ಇಳಿಪು. (ಕುರಳ್ 467)

ಒಂದು ಕಾರ್ಯದಲ್ಲಿ ತೊಡಗುವುದಕ್ಕೆ ಮೊದಲು ಆಲೋಚಿಸಬೇಕು; ಆ ಕಾರ್ಯದಲ್ಲಿ ತೊಡಗಿದ ನಂತರ ಅನಗತ್ಯ ಹಿಂಜರಿಕೆ ಇರಕೂಡದು. ಯೋಜನೆ ಮತ್ತು ಅನುಷ್ಠಾನದ ನಡುವಿನ ಸಮತೋಲನವನ್ನು ತಿರುವಳ್ಳುವರು ಒತ್ತಿಹೇಳುತ್ತಾರೆ.

ಸಂಪನ್ಮೂಲಗಳು, ಸಮಯ, ಪ್ರಕ್ರಿಯೆ ಮತ್ತು ಕಠಿಣವಾದ ಕೆಲಸಗಳನ್ನು ಸಾಧಿಸುವ ಸಾಮರ್ಥ್ಯ-ಮೊದಲಾದವುಗಳನ್ನು ಅರಿತಿರುವುದು ಉತ್ತಮ ಆಡಳಿತದ ಲಕ್ಷಣವಾಗಿದೆ. ಇದನ್ನು,

கருவியும் காலமும் செய்கையும் செய்யும்
அருவினையும் மாண்டது அமைச்சு. (குறள் 631)

ಕರುವಿಯುಮ್ ಕಾಲಮುಮ್ ಸೆಯ್ಕೈಯುಮ್ ಸೆಯ್ಯುಮ್
ಅರುವಿನೈಯುಮ್ ಮಾಣ್ಡದು ಅಮೈಚ್ಚು.

ಅಮೂಲ್ಯ ಸಲಹೆಯ ತಕ್ಕ ತರುಣದೊಳು ಕೊಟ್ಟು
ಕಾಲವರಿತು ಕೈಂಕರ್ಯವೆಸಗುವವನೇ ಅಮಾತ್ಯನು. (ಕುರಳ್ 631)

ಎಂಬ ಈ ಕುರಳ್(ದ್ವಿಪದಿ) ತಿಳಿಯಪಡಿಸುತ್ತದೆ. ಈ ಕುರಳ್ ಸೂಚಿಸುವ ಆಡಳಿತಾತ್ಮಕ ಚಿಂತನೆ ಎಂಬುದು ಯೋಜನೆ, ಮಾನವ ಸಂಪನ್ಮೂಲದ ಆಯ್ಕೆ, ಸಮಯ ನಿರ್ವಹಣೆ, ಹೊಣೆಗಾರಿಕೆ ಮತ್ತು ಕಾರ್ಯದಕ್ಷತೆಗಳ ಸಂಯೋಜನೆಯಾಗಿದೆ. ಒಬ್ಬ ಉತ್ತಮ ಆಡಳಿತಗಾರ ಎಂದರೆ ಎಲ್ಲವನ್ನೂ ಸ್ವತಃ ಮಾಡುವವನಲ್ಲ; ಅವನು ಸಾಧ್ಯವಾಗಿಸುವವನು.

## 5.17 ತಿರುಕ್ಕುರಳಿನಲ್ಲಿ ಆರ್ಥಿಕ ಚಿಂತನೆಗಳು

ಸನ್ಮಾರ್ಗದಲ್ಲಿ ಸಂಪತ್ತಿನ ಸಂಪಾದನೆ, ಸಂರಕ್ಷಣೆ, ಸರಿಯಾದ ಬಳಕೆ ಮತ್ತು ಇತರರಿಗೂ ಪ್ರಯೋಜನವಾಗುವಂತೆ ಬಳಕೆ-ಮೊದಲಾದವುಗಳಿಗೆ ತಿರುಕ್ಕುರಳ್ ಒತ್ತುನೀಡುತ್ತದೆ. ಹೀಗಾಗಿ, ಆರ್ಥಿಕತೆಯು ಮಾನವ ಕಲ್ಯಾಣಕ್ಕೆ ಸಂಬಂಧಿಸಿದೆ.

இயற்றலும் ஈட்டலும் காத்தலும் காத்த
வகுத்தலும் வல்லது அரசு. (குறள் 385)

ಇಯಱ್ಱಲುಮ್ ಈಟ್ಟಲುಮ್ ಕಾತ್ತಲುಮ್ ಕಾತ್ತ
ವಗುತ್ತಲುಮ್ ವಲ್ಲದು ಅರಸು.

ವೃದ್ಧಿಸಿ ಆಯವ, ಅದ ಕಾದು, ಸಂರಕ್ಷಿಸಿ ವ್ಯಯ ಮಾಡಲು
ಕಲ್ಯಾಣ ಕಾರ್ಯದಲಿ, ಕರೆವರು ಧರ್ಮಾತ್ಮನೆಂದು ಆ ಅರಸನ.(ಕುರಳ್ 385)

ಆದಾಯ ಬರುವ ಮಾರ್ಗಗಳನ್ನು ಕಂಡರಿತು ಹೆಚ್ಚಿಸುವುದು, ಹಾಗೆ ಬಂದ ಆದಾಯವನ್ನು ಸಂಗ್ರಹಿಸುವುದು, ಸಂಗ್ರಹಿಸಿದ್ದನ್ನು ವ್ಯರ್ಥವಾಗದೆ ಕಾಪಾಡುವುದು, ಕಾಪಾಡಿದ ಸಂಪತ್ತನ್ನು ಕ್ರಮಬದ್ಧವಾಗಿ ಬುದ್ಧಿವಂತಿಕೆಯಿಂದ ವಿತರಿಸುವುದು. ಇವು ಉತ್ತಮ ಆರ್ಥಿಕ ನಿರ್ವಹಣೆಯ ಅಂಶಗಳಾಗಿವೆ.

**ನಿಧಿ ಸಾಮಾಜಿಕ ಉಪಯುಕ್ತತೆ**

ಒಂದು ದೇಶವು ಆರ್ಥಿಕವಾಗಿ ಸ್ವಾವಲಂಬಿಯಾದಾಗ, ಅದು ಶತೃತ್ವವನ್ನು ನಿವಾರಿಸುತ್ತದೆ. ಒಂದು ದೇಶವು ಅಂತಹ ಆರ್ಥಿಕ ಪ್ರಗತಿಯನ್ನು ಹೊಂದಿರಬೇಕು ಎಂಬ ಅಭಿಪ್ರಾಯವನ್ನು ತಿರುಕ್ಕುರಳ್ ಪ್ರಸ್ತುತಪಡಿಸುತ್ತದೆ. ಆ ಚಿಂತನೆಯನ್ನು,

> செய்க பொருளைச் செறுநர் செருக்கறுக்கும்
> எஃகுஅதனிற் கூரியது இல். (குறள் 759)
>
> ಸೆಯ್ಗ ಪೊರುಳೈಚ್ ಸೆಱುನರ್ ಸೆರುಕ್ಕಱುಕ್ಕುಮ್
> ಎಃಗುಅದನಿಱ್ ಕೂರಿಯದು ಇಲ್.
>
> ಧನ ಸಂಪತ್ತು ಅರ್ಜಿಸು; ಶತೃವಿನ ಅಹಂಕಾರವ ಕಳೆಯಲು
> ಧನಕ್ಕಿಂತ ಮಿಗಿಲಾದ ಬೇರೆ ಆಯುಧವಿಲ್ಲ. (ಕುರಳ್ 759)

ಎಂದು ತಿರುಕ್ಕುರಳ್ ಪ್ರತಿಧ್ವನಿಸುತ್ತದೆ. ಆರ್ಥಿಕ ಶಕ್ತಿಯು ವ್ಯಕ್ತಿ ಮತ್ತು ರಾಜ್ಯಕ್ಕಾಗಿ ಕಾರ್ಯನಿರ್ವಹಿಸುವ ಸಾಮರ್ಥ್ಯವನ್ನು ಒದಗಿಸುತ್ತದೆ. ಆದರೆ ಅದು ಧರ್ಮಮಾರ್ಗದ ನಿಯಂತ್ರಣದಲ್ಲಿರಬೇಕು ಎಂಬುದು ತಿರುಕ್ಕುರಳಿನ ವಿಶಾಲ ಚಿಂತನೆಯಾಗಿದೆ. ದಾನ, ಸಾಮರಸ್ಯ ಮತ್ತು ಆತಿಥ್ಯಗಳಂತಹ ಅಧ್ಯಾಯಗಳು ಸಂಪತ್ತಿನ ಸಾಮಾಜಿಕ ಜವಾಬ್ದಾರಿಯನ್ನು ಸಹ ವಿವರಿಸುತ್ತವೆ. ಹೀಗಾಗಿ, ಹಣ ಗಳಿಕೆಯ ಅಂತಿಮ ಉದ್ದೇಶ ಸಂಗ್ರಹಣೆ ಮಾತ್ರವಲ್ಲ; ಅದನ್ನು ಉಪಯುಕ್ತವಾಗಿಸುವುದು ಸಹ ಆಗಿದೆ.

ತಿರುಕ್ಕುರಳಿನ ಆರ್ಥಿಕ ಚಿಂತನೆಯು ಉತ್ಪಾದನೆ - ಗಳಿಕೆ - ಕಾಪಾಡುವಿಕೆ - ಹಂಚಿಕೆ ಎಂಬ ಅಂಶಗಳನ್ನು ಒಳಗೊಂಡಿದೆ. ಹಣವು ಮನುಷ್ಯನನ್ನು ಆಳಬಾರದು; ಅದು ಮಾನವ ಕಲ್ಯಾಣಕ್ಕೆ ಉಪಯುಕ್ತವಾಗಬೇಕು. ಧರ್ಮಮಾರ್ಗದೊಂದಿಗೆ ಸಂಯೋಜಿತವಾದ ಆರ್ಥಿಕತೆಯೇ ಸುಸ್ಥಿರ ಸಂಪತ್ತು ಎಂಬುದು ತಿರುವಳ್ಳುವರ ಮೂಲ ಸಂದೇಶವಾಗಿದೆ.

## 5.18 ತಿರುಕ್ಕುರಳಿನಲ್ಲಿ ಕೃಷಿ

ತಿರುವಳ್ಳುವರು ಕೃಷಿಯನ್ನು ಕೇವಲ ಒಂದು ವೃತ್ತಿಯಾಗಿ ಪರಿಗಣಿಸುವುದಿಲ್ಲ, ಬದಲಾಗಿ ಸಾಮಾಜಿಕ ಜೀವನದ ಬೆನ್ನೆಲುಬಾಗಿ ಪರಿಗಣಿಸುತ್ತಾರೆ. ಆಹಾರ ಉತ್ಪಾದನೆಯಿಲ್ಲದೆ ಜಗತ್ತು ಕಾರ್ಯನಿರ್ವಹಿಸಲು ಸಾಧ್ಯವಿಲ್ಲ. ಹಾಗಾಗಿ, ತಿರುವಳ್ಳುವರು ಕೃಷಿಗೆ ಉನ್ನತ ಸ್ಥಾನವನ್ನು ನೀಡುತ್ತಾರೆ.

> சுழன்றும்ஏர்ப் பின்னது உலகம் அதனால்
> உழந்தும் உழவே தலை. (குறள் 1031)
>
> ಸುೞನ್ಱುಮ್ಏರ್ಪ್ ಪಿನ್ನದು ಉಲಗಮ್ ಅದನಾಲ್
> ಉೞನ್ದುಮ್ ಉೞವೇ ತಲೈ.
>
> ಹಲಪಿಡಿದು ಉಳುಮೆಗೆಯ್ವುದು ಶ್ರಮವೇ ಆದರೂ
> ಜಗದೊಳು ಕೃಷಿಯೇ ಪ್ರಧಾನ ಮತ್ತೆಲ್ಲಕ್ಕೂ ಅದುವೇ ಆಧಾರ. (ಕುರಳ್ 1031)

ಜಗತ್ತು ಅನೇಕ ಕೈಗಾರಿಕೆಗಳಲ್ಲಿ ತೊಡಗಿಸಿಕೊಂಡಿದ್ದರೂ, ಅಂತಿಮವಾಗಿ ಆಹಾರಕ್ಕಾಗಿ ಕೃಷಿಯನ್ನೇ ಅವಲಂಬಿಸಿದೆ.

**ಸಮಾಜದ ಬೆನ್ನೆಲುಬು**

ಕೃಷಿಯೇ ಜಗತ್ತಿನ ಜೀವಿಗಳ ಹಸಿವಿನ ನೋವನ್ನು ನಿವಾರಿಸಿ, ಮಾನಸಿಕ ಸಂತೋಷವನ್ನೂ, ಅಂತಃಕರಣದ ಸ್ಪಷ್ಟತೆಯನ್ನೂ ನೀಡುತ್ತದೆ. ಹಸಿವಿನ ನೋವನ್ನು ನಿವಾರಿಸುವ ವೈದ್ಯರಾದ ರೈತರನ್ನು ಪ್ರಶಂಸಿಸುವ ಬಗೆಯಲ್ಲಿ,

உழுதுண்டு வாழ்வாரே வாழ்வார்மற் றெல்லாம்
தொழுதுண்டு பின்செல் பவர். (குறள் 1033)

ಉಟುದುಣ್ಡು ವಾಟ್ವಾರೇ ವಾಟ್ವಾರ್ಮಱ್ ಱೆಲ್ಲಾಮ್
ತೊಟುದುಣ್ಡು ಪಿನ್ಚೆಲ್ ಬವರ್.

ಉಳುಮೆ ಗೆಯ್ದು ಉಂಡು ಜೀವಿಪರೇ ಜೀವಿಸುವರು ಮತ್ತೆಲ್ಲರೂ
ತೊಳಲ್ದು ಉಂಡು ಹಿಂಬಾಲಿಪರು. (ಕುರಳ್ 1033)

ತಿರುವಳ್ಳುವರು ಈ ಕುರಳನ್ನು ನೀಡಿದ್ದಾರೆ. ದುಡಿಮೆಯ ಮೂಲಕ ಆಹಾರವನ್ನು ಉತ್ಪಾದಿಸುವವರ ಸ್ವಾವಲಂಬನೆ ಮತ್ತು ಸಾಮಾಜಿಕ ಕೊಡುಗೆಯನ್ನು ಈ ಕುರಳ್(ದ್ವಿಪದಿ) ಉತ್ತೇಜಿಸುತ್ತದೆ.

உழவினார் கைம்மடங்கின் இல்லை விழைவதூஉம்
விட்டேமென் பார்க்கு நிலை. (குறள் 1036)

ಉಟವಿನಾರ್ ಕೈಮ್ಮಡಙ್ಗಿ ನ್ ಇಲ್ಲೈ ವಿಟೈವದೂಉಮ್
ವಿಟ್ಟೇಮೆನ್ ಪಾರ್ಕ್ಕು ನಿಲೈ.

ಉಳುಮೆ ಗೆಯ್ಯುವರು ಬಿಡಲು, ಕೈ ಕಟ್ಟಿ ಕೃಷಿ ಜೀವನವ
ತೊಳಲುವರು; ತೊರೆದವರೂ, ಅಪ್ಪುವರು ಅಸ್ಥಿರತೆಯ. (ಕುರಳ್ 1036)

ರೈತರ ಕೈಗಳು ವಿಫಲವಾದರೆ, ಇತರ ವಲಯಗಳ ಮೇಲೂ ಪರಿಣಾಮ ಬೀರುತ್ತದೆ ಎಂಬ ಸಾಮಾಜಿಕ-ಆರ್ಥಿಕ ಸತ್ಯವನ್ನು ತಿರುವಳ್ಳುವರು ತಿಳಿಸುತ್ತಾರೆ. ತಿರುಕ್ಕುರಳಿನಲ್ಲಿ ಅಭಿವ್ಯಕ್ತಗೊಂಡಿರುವ ಬೇಸಾಯವು ಕೇವಲ ಆಹಾರ ಉತ್ಪಾದನೆಯ ಬಗ್ಗೆ ಅಲ್ಲ; ಅದು ಮಾನವ ಸಮಾಜದ ಜೀವನಾಡಿಯಾಗಿದೆ. ರೈತರನ್ನು ಗೌರವಿಸುವುದು ಎಂದರೆ ಒಂದು ವೃತ್ತಿಯನ್ನು ಗೌರವಿಸುವುದು ಎಂದಲ್ಲ; ಅದು ಮಾನವ ಜೀವನವನ್ನು ಉಳಿಸಿಕೊಳ್ಳುವ ಮೂಲಭೂತ ಶ್ರಮವನ್ನು ಗೌರವಿಸುವಂಥದ್ದು.

## 5.19 ತಿರುಕ್ಕುರಳಿನಲ್ಲಿ ಪರಿಸರ

ತಿರುಕ್ಕುರಳಿನಲ್ಲಿ 'ಪರಿಸರ'ದ ಬಗೆಗಿನ ಅಭಿಪ್ರಾಯಗಳು ನೇರವಾಗಿ ಉಲ್ಲೇಖವಾಗದಿದ್ದರೂ, ಮಳೆ, ನೀರು, ಬೇಸಾಯ, ಜೀವನ ಪ್ರೀತಿ, ಕೊಲ್ಲದಿರುವುದು ಮತ್ತು ಮಿತವಾದ ಸೇವನೆಯಂತಹ ಚಿಂತನೆಗಳ ಮೂಲಕ ಪ್ರಕೃತಿ ಮತ್ತು ಮಾನವ ಜೀವನದ ನಡುವಿನ ಸಂಬಂಧವನ್ನು ತಿರುಕ್ಕುರಳ್ ದಾಖಲಿಸಿದೆ.

**ನೀರಿನ ಪ್ರಾಮುಖ್ಯತೆ**

ಪ್ರಪಂಚದಲ್ಲಿ ನಿರಂತರ ಜೀವನ ಚಕ್ರಕ್ಕೆ ಜಲ ಸಂಪನ್ಮೂಲಗಳು ಅತ್ಯಗತ್ಯ. ಹಾಗಾಗಿ ತಿರುವಳ್ಳುವರು ಜಲ ಸಂಪನ್ಮೂಲಗಳ ಮಹತ್ವವನ್ನು,

நீர்இன்று அமையாது உலகெனின் யார்யார்க்கும்
வான்இன்று அமையாது ஒழுக்கு. (குறள் 20)

ನೀರ್ಇನ್ಱು ಅಮೈಯಾದು ಉಲಕೆನಿನ್ ಯಾರ್ಯಾರ್ಕ್ಕುಮ್
ವಾನ್ಇನ್ಱು ಅಮೈಯಾದು ಒಟುಕ್ಕು.

ನೀರಿಲ್ಲದೆ ಜಗತ್ತಿನಲ್ಲಿ ಜೀವಿಸಲು ಸಾಧ್ಯವಿಲ್ಲ ಎಂದಾದರೆ
ಮಳೆಯಿಲ್ಲದೆ ಆಚಾರ ನೆಲೆನಿಲ್ಲುವುದಿಲ್ಲ. (ಕುರಳ್ 20)

ಎಂಬ ದ್ವಿಪದಿಯಲ್ಲಿ ದಾಖಲಿಸಿದ್ದಾರೆ. ನೀರಿಲ್ಲದೆ ಲೋಕದಲ್ಲಿ ಜೀವನ ಅಸ್ತಿತ್ವದಲ್ಲಿರಲು ಸಾಧ್ಯವಿಲ್ಲ. ಆದುದರಿಂದ, ನೀರಿನ ಮೂಲಾಧಾರವಾದ ಮಳೆಯ ಮಹತ್ವವನ್ನು ತಿರುವಳ್ಳುವರು ಒತ್ತಾಯಿಸುತ್ತಾರೆ.

> விசும்பின் துளிவீழின் அல்லால்மற் றாங்கே
> பசும்புல் தலைகாண்பு அரிது. (குறள் 16)
>
> ವಿಸುಮ್ಬಿನ್ ತುಳಿವೀೞಿನ್ ಅಲ್ಲಾಲ್ಮಱ್ ಱಾಙ್ಗೇ
> ಪಸುಮ್ಬುಲ್ ತಲೈಕಾಣ್ಬು ಅರಿದು.
>
> ಆಕಾಶದಿಂದ ಮಳೆಹನಿ ಕೆಳಗೆ ಬೀಳದಿದ್ದರೆ ಜಗತ್ತಿನಲ್ಲಿ ಹಸಿರು ಹುಲ್ಲಿನ
> ತುದಿಯನ್ನು ನೋಡುವುದು ಅಪರೂಪ. (ಕುರಳ್ 16)

ಎಂಬ ಈ ಕುರಳಿನಲ್ಲಿ, ಒಂದು ಸಣ್ಣ ಹಸಿರು ಹುಲ್ಲಿನ ಕಡ್ಡಿಗೂ ಸಹ ಮಳೆ ಬೇಕು. ಮನುಷ್ಯ, ಸಸ್ಯ, ನೀರು ಮತ್ತು ಮಳೆ- ಇವು ಬೇರೆ ಬೇರೆಯಾದವಲ್ಲ; ಅವು ಪರಸ್ಪರ ಒಂದಕ್ಕೊಂದು ಸಂಬಂಧವಿರುವ ನೈಸರ್ಗಿಕ ಸರಪಳಿ ಎಂಬುದನ್ನು ತಿರುವಳ್ಳುವರು ವಿವರಿಸುತ್ತಾರೆ.

**ಜೀವಪ್ರೇಮ ಮತ್ತು ಪರಿಸರ**

ನೀರಿಲ್ಲದೆ ಒಂದು ದೇಶವು ಬಡತನದ ನೆಲೆಯನ್ನು ಹೊಂದುತ್ತದೆ. ಹೀಗಾಗಿ ವ್ಯಾಧಿ, ಹಸಿವು ಮತ್ತು ಶತ್ರುತ್ವಗಳು ಹೆಚ್ಚಿ ದೇಶದ ಪ್ರಕೃತಿಯನ್ನು ನಾಶಪಡಿಸುತ್ತವೆ. ಆದುದರಿಂದ, ಇವುಗಳನ್ನು ತೊಡೆದುಹಾಕಲು ಜಲ ಸಂಪನ್ಮೂಲಗಳು ಅತ್ಯುತ್ತಮ ಮೂಲವಾಗಿದೆ. ಒಂದು ದೇಶವು ನೈಸರ್ಗಿಕ ಸಂಪನ್ಮೂಲಗಳಿಂದ ಕೂಡಿದಾಗ ಹಸಿವು ಮಾಯವಾಗುತ್ತದೆ. ಎಲ್ಲರಿಗೂ ಆಹಾರ ಲಭ್ಯವಾಗುವುದರಿಂದ, ಅವರ ಮಾನಸಿಕ ಮತ್ತು ದೈಹಿಕ ಆರೋಗ್ಯ ಸುಧಾರಿಸುತ್ತದೆ; ಮಾತ್ರವಲ್ಲದೆ, ಎಲ್ಲರಿಗೂ ಎಲ್ಲವೂ ದೊರೆಯುವುದರಿಂದ ಹಗೆತನ ಇರುವುದಿಲ್ಲ. ದಾನ ಮತ್ತು ತಪಸ್ಸು ಸಹ ಕೈಗೂಡುತ್ತದೆ. ಆದ್ದರಿಂದ ಪ್ರಕೃತಿಯನ್ನು ರಕ್ಷಿಸುವುದು ನಮ್ಮ ಆದ್ಯ ಕರ್ತವ್ಯ ಎಂಬುದನ್ನು,

> தானம் தவமிரண்டும் தங்கா வியனுலகம்
> வானம் வழங்காது எனின். (குறள் 19)
>
> ದಾನಮ್ ದವಮಿರಣ್ಡುಮ್ ತಙ್ಗಾ ವಿಯನುಲಗಮ್
> ವಾನಮ್ ವೞಙ್ಗಾದು ಎನಿನ್.
>
> ದಾನ ಧರ್ಮವೆರಡೂ ತಂಗದು ಲೋಕದಲಿ
> ಮುಗಿಲು ಮೋಡ ಮಳೆಗರೆಯದಿರೆ. (ಕುರಳ್ 19)

ಎಂಬ ಕುರಳಿನ ಮೂಲಕ ಅವರು ಒತ್ತಾಯಿಸುತ್ತಾರೆ. ತಿರುಕ್ಕುರಳಿನಲ್ಲಿ ಅನಾವರಣಗೊಂಡಿರುವ ಪರಿಸರದ ಬಗೆಗಿನ ಚಿಂತನೆಗಳು ಮನುಷ್ಯನು ಪ್ರಕೃತಿಯಿಂದ ಪ್ರತ್ಯೇಕವಾಗಿ ಬದುಕಲು ಸಾಧ್ಯವಿಲ್ಲ ಎಂಬುದನ್ನು ತಿಳಿಸುತ್ತವೆ. ಪ್ರಕೃತಿಯನ್ನು ರಕ್ಷಿಸುವುದು ಕೇವಲ ಬಾಹ್ಯ ಪ್ರಪಂಚವನ್ನು ರಕ್ಷಿಸುವುದಲ್ಲ; ಅದು ಮಾನವ ಜೀವನದ ಅಡಿಪಾಯವನ್ನೇ ರಕ್ಷಿಸುವುದು ಎಂಬುದೇ ತಿರುವಳ್ಳುವರ ಅಭಿಮತವಾಗಿದೆ.

## 5.20 ತಿರುಕ್ಕುರಳಿನಲ್ಲಿ ಕೌಟುಂಬಿಕ ಮೌಲ್ಯಗಳು

ತಿರುಕ್ಕುರಳಿನಲ್ಲಿ ಕುಟುಂಬವನ್ನು ಕೇವಲ ವೈಯಕ್ತಿಕ ವಾಸಸ್ಥಳವೆಂದು ಪರಿಗಣಿಲ್ಲ; ಇದು ಸದ್ಗುಣದ ಮೌಲ್ಯಗಳನ್ನು ಬೆಳೆಸುವ ಮೊದಲ ಸಾಮಾಜಿಕ ಸಂಸ್ಥೆ ಎಂದು ಪರಿಗಣಿಸಲಾಗಿದೆ. ಪ್ರೀತಿ, ಜವಾಬ್ದಾರಿ, ಅತಿಥಿ ಸತ್ಕಾರ, ಮಕ್ಕಳನ್ನು ಪಡೆಯುವಿಕೆ ಮತ್ತು ಒಳ್ಳೆಯ ಸಂಬಂಧಗಳು ಗೃಹಸ್ಥಧರ್ಮದ ಅಂಶಗಳಾಗಿವೆ.

அன்பும் அறனும் உடைத்தாயின் இல்வாழ்க்கை
பண்பும் பயனும் அது. (குறள் 45)

ಅನ್ಬುಮ್ ಅಱನುಮ್ ಉಡೈತ್ತಾಯಿನ್ ಇಲ್ವಾೞ್ಕ್ಕೈ
ಪಣ್ಬುಮ್ ಪಯನುಮ್ ಅದು.

ಪ್ರೇಮ ಮಯ ಧರ್ಮ ಮಾರ್ಗದಲಿ ಸ್ಥಿತ
ಗೃಹಸ್ಥಂಗೆ ಕೇಳದೆ ದೊರಕುವುದು ಸುಫಲ ಪ್ರಾಪ್ತಿ. (ಕುರಳ್ 45)

ಒಂದು ಕುಟುಂಬದ ಹಿರಿಮೆ ಸಂಪತ್ತಿನಲ್ಲಿಲ್ಲ; ಅದು ಪ್ರೇಮ ಮತ್ತು ಸದ್ಗುಣಗಳಿಂದ ತುಂಬಿದ ಸಂಬಂಧದಲ್ಲಿದೆ.

**ಕುಟುಂಬ ಮತ್ತು ಸಾಮಾಜಿಕ ಜವಾಬ್ದಾರಿ**

ವೈಯಕ್ತಿಕ ಜೀವನವೇ ತನ್ನ ಕುಟುಂಬ ಎಂಬಂತೆ ಬದುಕುವುದಲ್ಲ. ಪ್ರತಿಯೊಬ್ಬ ವ್ಯಕ್ತಿಯು ತನ್ನನ್ನು ಸೃಷ್ಟಿಸಿ ರಕ್ಷಿಸುವ ಜಗತ್ತಿಗೆ ತನ್ನದೇ ಆದ ಸಣ್ಣ ಕರ್ತವ್ಯವನ್ನು ಮಾಡಬೇಕು. ದೊಡ್ಡ ಪ್ರಮಾಣದಲ್ಲಿ ಸಾಮಾಜಿಕ ಕಾರ್ಯಗಳನ್ನು ಮಾಡಲು ಸಾಧ್ಯವಾಗದಿದ್ದರೂ ಸಹ, ತನ್ನ ಸುತ್ತಲಿನ ಸಂಬಂಧಗಳನ್ನೂ ಜೀವಗಳನ್ನೂ ಸಾಧ್ಯವಾದಷ್ಟು ಮಟ್ಟಿಗೆ ರಕ್ಷಿಸುವುದು ಪ್ರತಿಯೊಬ್ಬ ವ್ಯಕ್ತಿಯ ಕರ್ತವ್ಯವಾಗಿದೆ. ಇದನ್ನು ಗಮನದಲ್ಲಿಟ್ಟುಕೊಂಡು, ಗೃಹಜೀವನದಲ್ಲಿ ಜೀವಿಸುತ್ತಿರುವವರು ಕೈಕೊಳ್ಳಬೇಕಾದ ಕಾರ್ಯಗಳನ್ನು ತಿರುವಳ್ಳುವರು ಸ್ಪಷ್ಟವಾಗಿ ವ್ಯಾಖ್ಯಾನಿಸುತ್ತಾರೆ. ಸನ್ಯಾಸಿಗಳಿಗೂ, ಬಡವರಿಗೂ, ತನಗೆ ಸಂಬಂಧಿಸಿದ ಸತ್ತವರಿಗೂ ಗೃಹಜೀವನದ ಧರ್ಮ ಬೆಂಬಲವಾಗಿ ನಿಲ್ಲುತ್ತದೆ. ಕುಟುಂಬ ವ್ಯವಸ್ಥೆಯಲ್ಲಿ ಕೈಗೊಳ್ಳಬೇಕಾದ ಮಾರ್ಗವನ್ನು,

இல்வாழ்வான் என்பான் இயல்புடைய மூவர்க்கும்
நல்லாற்றின் நின்ற துணை. (குறள் 41)

ಇಲ್ವಾೞ್ವಾನ್ ಎನ್ಪಾನ್ ಇಯಲ್ಪುಡೈಯ ಮೂವರ್ಕ್ಕುಮ್
ನಲ್ಲಾಱ್ಱಿನ್ ನಿನ್ಱ ತುಣೈ.

ಗೃಹಸ್ಥನೆಂಬುವವನು ಧರ್ಮಗುಣವುಳ್ಳ ಮೂರು
ಆಶ್ರಮಗಳ ಜನರಿಗೂ ಸನ್ಮಾರ್ಗದಲ್ಲಿ ಸ್ಥಿರವಾದ ನೆರವಾಗಿದ್ದಾನೆ. (ಕುರಳ್ 41)

ಎಂದು ಸೂಚಿಸುತ್ತದೆ. ಗೃಹಜೀವನವು ತನಗಾಗಿ ಮಾತ್ರ ಬದುಕುವ ವ್ಯವಸ್ಥೆಯಲ್ಲ; ಇತರರಿಗೂ ಬೆಂಬಲ ನೀಡುವ ಸಾಮಾಜಿಕ ಜವಾಬ್ದಾರಿಯನ್ನು ಇದು ಹೊಂದಿದೆ. ಇಂತಹ ಸಾಮಾಜಿಕ ಜವಾಬ್ದಾರಿಗೆ ತಳಹದಿಯೆಂದರೆ ಉತ್ತಮ ಕುಟುಂಬ ವ್ಯವಸ್ಥೆ. ಆದುದರಿಂದ ತಿರುವಳ್ಳುವರು, ಕುಟುಂಬದ ಮೇಲ್ಮೆಗೆ ಸದ್ಗುಣಶೀಲ ಪತ್ನಿ, ಅದರ ಅಭಿವೃದ್ಧಿಯನ್ನು ಮುಂದಿನ ಹಂತಕ್ಕೆ ಕೊಂಡೊಯ್ಯುವ ಒಳ್ಳೆಯ ಮಕ್ಕಳು ಅತ್ಯಗತ್ಯ ಎಂಬುದನ್ನು

மங்கலம் என்ப மனைமாட்சி மற்றதன்
நன்கலம் நன்மக்கட் பேறு. (குறள் 60)

ಮಙ್ಗಲಮ್ ಎನ್ಪ ಮನೈಮಾಟ್ಚಿ ಮಱ್ಱದನ್
ನನ್ಕಲಮ್ ನನ್ಮಕ್ಕಟ್ ಪೇಱು.

ಹೆಂಡತಿಯ ಸದ್ಗುಣವೇ ಸಂಸಾರಕ್ಕೆ ಮಂಗಲ, ಒಳ್ಳೆಯ ಮಕ್ಕಳನ್ನು
ಪಡಯುವುದೇ ಸಂಸಾರಕ್ಕೆ ಶ್ರೇಷ್ಠ ಆಭರಣ. (ಕುರಳ್ 60)

ಎಂಬ ಕುರಳಿನ ಮೂಲಕ ಸ್ಪಷ್ಟಪಡಿಸಿದ್ದಾರೆ. ಕುಟುಂಬದ ಶ್ರೇಷ್ಠತೆಯು ಉತ್ತಮ ಕೌಟುಂಬಿಕ ಮೌಲ್ಯಗಳಲ್ಲಿ ಮತ್ತು ಮುಂದಿನ ಪೀಳಿಗೆಯನ್ನು ಸನ್ಮಾರ್ಗದಲ್ಲಿ ಬೆಳೆಸುವಲ್ಲಿ ಅಡಗಿದೆ.

ತಿರುಕ್ಕುರಳಿನ ಕೌಟುಂಬಿಕ ಮೌಲ್ಯವು ಪ್ರೀತಿ, ಜವಾಬ್ದಾರಿ, ಹಂಚಿಕೆ ಮತ್ತು ಉತ್ತಮ ಪೀಳಿಗೆಯ ಸೃಷ್ಟಿ-ಮುಂತಾದವುಗಳ ಸಂಯೋಜನೆಯಾಗಿದೆ. ಒಳ್ಳೆಯ ಸಮಾಜ ರೂಪುಗೊಳ್ಳಬೇಕಾದರೆ, ಅದರ ಮೊದಲ ಪಾಠ ಶಾಲೆಯಾದ ಕುಟುಂಬವು ಸದ್ಧರ್ಮದಿಂದ ಸ್ಥಾಪಿಸಲ್ಪಡಬೇಕು.

## 5.21 ತಿರುಕ್ಕುರಳಿನಲ್ಲಿ ಮಹಿಳೆಯರು

ತಿರುಕ್ಕುರಳಿನಲ್ಲಿ ಮಹಿಳೆಯರ ಬಗೆಗಿನ ವಿಚಾರಗಳನ್ನು ಆ ಕಾಲದ ಸಮಾಜಿಕ ಹಿನ್ನೆಲೆಯೊಂದಿಗೆ ಓದುವುದು ಮುಖ್ಯ. 'ಗೃಹಜೀವನ', 'ಬಾಳ ಸಂಗಾತಿ', 'ಮಕ್ಕಳನ್ನು ಪಡೆಯುವಿಕೆ' ಮತ್ತು 'ಕಾಮಭಾಗ'-ಮುಂತಾದ ಶೀರ್ಷಿಕೆಗಳಲ್ಲಿ ಮಹಿಳೆಯರ ಸ್ಥಾನಮಾನ ವಿವಿಧ ಕೋನಗಳಿಂದ ಪ್ರಕಟವಾಗುತ್ತದೆ. ಅವುಗಳಲ್ಲಿ, ಬಾಳ ಸಂಗಾತಿಯ ಸದ್ಗುಣ, ಕುಟುಂಬ ನಿರ್ವಹಣೆ ಮತ್ತು ಸಂಬಂಧದ ಆಳ-ಮೊದಲಾದ ಅಂಶಗಳು ಪ್ರಮುಖವಾದವು.

**ಗೃಹಜೀವನದಲ್ಲಿ ಮಹಿಳೆಯರು**

ಜೀವನ ಸಂಗಾತಿ ಕುಟುಂಬವನ್ನು ಅದರ ಸಂಪನ್ಮೂಲಗಳಿಗೆ ತಕ್ಕಂತೆ ಉತ್ತಮವಾಗಿ ನಿರ್ವಹಿಸುವ ಗೌರವಾನ್ವಿತ ವ್ಯಕ್ತಿಯಾಗಿ ತಿರುಕ್ಕುರಳಿನಲ್ಲಿ ಚಿತ್ರಿಸಲಾಗಿದೆ.

மனைத்தக்க மாண்புடையள் ஆகித்தற் கொண்டான்
வளத்தக்காள் வாழ்க்கைத் துணை. (குறள் 51)

ಮನೈತ್ತಕ್ಕ ಮಾಣ್ಪುಡೈಯಳ್ ಆಗಿತ್ತಱ್ ಕೊಣ್ಡಾನ್
ವಳತ್ತಕ್ಕಾಳ್ ವಾಟ್ಕೈತ್ ತುಣೈ.

ಪತಿಯ ಆದಾಯದನುರೂಪದಲಿ ಮನೆಯಾಡಳಿತ ನಡೆಸುವ
ಉತ್ತಮ ಗುಣ ಸಂಪನ್ನ ಗೃಹಿಣಿಯ ಉತ್ತಮ ಸಹಧರ್ಮಿಣಿ ಎಂಬರು. (ಕುರಳ್ 51)

ಎಂಬ ಕುರಳಿನ ಮೂಲಕ ಕೌಟುಂಬಿಕ ವ್ಯವಸ್ಥೆಯಲ್ಲಿನ ಜವಾಬ್ದಾರಿ ಮತ್ತು ಮಹತ್ವವನ್ನು ತಿರುವಳ್ಳುವರು ವ್ಯಕ್ತಪಡಿಸಿದ್ದಾರೆ. ಒಳ್ಳೆಯ ಕುಟುಂಬ ಮುಖ್ಯಸ್ಥೆಯನ್ನು ಪಡೆಯದಿದ್ದರೆ ಮನೆ ಸಮೃದ್ಧಿಯಾಗುವುದಿಲ್ಲ ಎಂಬುದನ್ನು,

மனைமாட்சி இல்லாள்கண் இல்லாயின் வாழ்க்கை
எனைமாட்சித் தாயினும் இல். (குறள் 52)

ಮನೈಮಾಟ್ಚಿ ಇಲ್ಲಾಳ್ಕಣ್ ಇಲ್ಲಾಯಿನ್ ವಾಟ್ಕೈ
ಎನೈಮಾಟ್ಚಿತ್ ತಾಯಿನುಮ್ ಇಲ್.

ಗೃಹಸ್ಥ ಧರ್ಮದ ಸಂಸ್ಕಾರ ಗೃಹಿಣಿಯೊಳು ಇಲ್ಲದಿರೆ
ಗೃಹಸ್ಥನ ಜೀವನ ಸಂಪನ್ನವಾದರೂ ವ್ಯರ್ಥವೇ ಸರಿ. (ಕುರಳ್ 52)

ಪ್ರಸ್ತುತ ಕುರಳಿನಲ್ಲಿ ತಿರುವಳ್ಳುವರು ದಾಖಲಿಸುತ್ತಾರೆ. ಬಾಹ್ಯ ಸಂಪನ್ಮೂಲಗಳು ಎಷ್ಟೇ ಇದ್ದರೂ, ಕುಟುಂಬ ಜೀವನದ ಆಂತರಿಕ ಘನತೆ ಇಲ್ಲದಿದ್ದರೆ, ಅದರ ಮೌಲ್ಯ ಕಡಿಮೆಯಾಗುತ್ತದೆ ಎಂಬ ಅಭಿಪ್ರಾಯವನ್ನು ಸ್ಪಷ್ಟಪಡಿಸಲಾಗಿದೆ.

**ಪ್ರೇಮದಲ್ಲಿ ಮಹಿಳೆಯ ಭಾವನಾತ್ಮಕ ಧ್ವನಿ**

ಕಾಮವಿಭಾಗದಲ್ಲಿ ನಾಯಕಿಯ ಪ್ರೀತಿ, ಅಗಲಿಕೆ, ಹಂಬಲ ಮತ್ತು ಪ್ರಣಯ ಕಲಹಗಳಂತಹ ಭಾವನೆಗಳು ವಿಶಿಷ್ಟ ಧ್ವನಿಯೊಂದಿಗೆ ವ್ಯಕ್ತವಾಗುತ್ತವೆ. ಆದುದರಿಂದ, ತಿರುಕ್ಕುರಳಿನಲ್ಲಿ ಮಹಿಳೆ ಕುಟುಂಬದ ಜವಾಬ್ದಾರಿಯನ್ನು ಹೊತ್ತವಳಾಗಿ ಮಾತ್ರವಲ್ಲದೆ ಆಳವಾದ ಭಾವನೆಗಳನ್ನೂ ಬಯಕೆಗಳನ್ನೂ ಸಹ ಹೊಂದಿದವಳೆಂಬ ದಾಖಲೆಯೂ ಕಂಡು ಬರುತ್ತಿದೆ. ಈ ವಿಭಾಗವು ಜೀವನ ಸಂಗಾತಿಯ ಹಿರಿಮೆ, ಕುಟುಂಬದಲ್ಲಿ ಅವಳ ಪ್ರಮುಖ ಪಾತ್ರ ಮತ್ತು ಪ್ರೇಮ ಜೀವನದಲ್ಲಿ ಅವಳ ಭಾವನಾತ್ಮಕ ಧ್ವನಿ-ಮುಂತಾದವುಗಳನ್ನು ಸ್ಪಷ್ಟವಾಗಿ ಪ್ರಕಟಪಡಿಸುತ್ತದೆ.

## 5.22 ತಿರುಕ್ಕುರಳಿನಲ್ಲಿ ನಿರ್ವಹಣೆ

'ನಿರ್ವಹಣೆ' ಎಂಬ ಪದವು ತಿರುಕ್ಕುರಳಿನಲ್ಲಿ ಸ್ಥಾನ ಪಡೆಯದಿದ್ದರೂ, ಯೋಜನೆ, ಜನರ ಆಯ್ಕೆ, ಕಾಲ ಪರಿಜ್ಞಾನ, ಸ್ಥಳ ಪರಿಜ್ಞಾನ, ಜವಾಬ್ದಾರಿ ಹಂಚಿಕೆ, ನಿರ್ಧಾರ ತೆಗೆದುಕೊಳ್ಳುವಿಕೆ ಮತ್ತು ಮೇಲ್ವಿಚಾರಣೆಯಂತಹ ನಿರ್ವಹಣಾ ಅಂಶಗಳನ್ನು ಅರ್ಥಭಾಗದಲ್ಲಿ ವ್ಯಾಪಕವಾಗಿ ಕಾಣಬಹುದು. ಯಾವುದೇ ಕಾರ್ಯವನ್ನು ಮಾಡುವುದಕ್ಕೆ ಮೊದಲು ಯೋಜನೆ ಅಗತ್ಯ. ಆದರೆ ನಿರ್ಧಾರ ತೆಗೆದುಕೊಂಡ ನಂತರ ಹಿಂಜರಿಕೆಯು ಕಾರ್ಯದಕ್ಷತೆಯ ಮೇಲೆ ಪರಿಣಾಮ ಬೀರುತ್ತದೆ. ಈ ಚಿಂತನೆಯನ್ನು,

எண்ணித் துணிக கருமம் துணிந்தபின்
எண்ணுவம் என்பது இழுக்கு. (குறள் 467)

ಎಣ್ಣಿತ್ ತುಣಿಗ ಕರುಮಮ್ ತುಣಿನ್ದಪಿನ್
ಎಣ್ಣುವಮ್ ಎನ್ಬದು ಇಟುಕ್ಕು.

ಯೋಚಿಸಿ ಧೈರ್ಯಗೆಡದೆ ಎಸಗು ಕರ್ಮವ; ಧೈರ್ಯದಿ ತೊಡಗಿ
ಚಿಂತಿಸುವೆನೆಂಬುದು ಇಳಿಪು. (ಕುರಳ್ 467)

ಎಂಬ ಕುರಳ್ ದಾಖಲಿಸುತ್ತದೆ.

**ಮಾನವ ಸಂಪನ್ಮೂಲ ನಿರ್ವಹಣೆ**

ಸರಿಯಾದ ವ್ಯಕ್ತಿಯನ್ನು ಆಯ್ಕೆ ಮಾಡಿ, ಅವರ ಬಳಿ ಕೆಲಸವನ್ನು ವಹಿಸಿಕೊಟ್ಟು, ನಿಗದಿತ ಸಮಯದೊಳಗೆ ಆ ಕೆಲಸವನ್ನು ಪೂರ್ಣಗೊಳಿಸಬೇಕು ಎಂಬುದರಲ್ಲಿ ಮಾನವ ಸಂಪನ್ಮೂಲವು ಮಹತ್ತರವಾದ ಪಾತ್ರವಹಿಸುತ್ತದೆ. ಆ ಸಂಪನ್ಮೂಲವನ್ನು ಸಮರ್ಥವಾಗಿ ಬಳಸುವುದು ಯಶಸ್ಸಿಗೆ ಉತ್ತಮ ಮಾರ್ಗವಾಗುತ್ತದೆ. ಇಂತಹ ಚಿಂತನೆಯನ್ನು ನಿರ್ವಹಣೆಯಲ್ಲಿ ಶ್ರೇಷ್ಠದ್ದಾಗಿ ನೋಡಲಾಗುತ್ತದೆ. ಇದೇ ರೀತಿಯ ಚಿಂತನೆಗಳನ್ನು ತಿರುಕ್ಕುರಳ್ ಅಲ್ಲಲ್ಲಿ ದಾಖಲಿಸುತ್ತದೆ. ಅವುಗಳಲ್ಲಿ ಒಂದು ಕುರಳನ್ನು ಗಮನಿಸಬಹುದು:

இதனை இதனால் இவன்முடிக்கும் என்றாய்ந்து
அதனை அவன்கண் விடல். (குறள் 517)

ಇದನ್ನೈ ಇದನಾಲ್ ಇವನ್ಮುಡಿಕ್ಕುಮ್ ಎನ್ರಾಯ್ನ್ದು
ಅದನ್ನೈ ಅವನ್ಕಣ್ ವಿಡಲ್.

ಇದನು ಇದರಿಂದ ಇವನು ಸಂಪೂರ್ಣಗೊಳಿಸುವ ಕ್ಷಮತೆಯುಳ್ಳವನೆಂದರಿತು
ಅದನು ಅವನ ನಿರ್ವಾಹಕೆ ಒಪ್ಪಿಸು. (ಕುರಳ್ 517)

ಕೆಲಸದ ಸ್ವರೂಪ, ಅದನ್ನು ನಿರ್ವಹಿಸಬೇಕಾದ ಮಾರ್ಗ, ಅದನ್ನು ನಿರ್ವಹಿಸುವ ವ್ಯಕ್ತಿಯ ಸಾಮರ್ಥ್ಯ-ಮುಂತಾದವುಗಳನ್ನು ಪರಿಶೀಲಿಸಿ ನಿರ್ಣಯಿಸಿದ ನಂತರವೇ ಜವಾಬ್ದಾರಿಯನ್ನು ನಿಯೋಜಿಸಬೇಕು. ಇದು ಸಾಮರ್ಥ್ಯ ಆಧಾರಿತ ಕಾರ್ಯ ಹಂಚಿಕೆಯ ಅತ್ಯುತ್ತಮ ತತ್ವವಾಗಿದೆ.

**ಸಮಯ ಮತ್ತು ಅನುಷ್ಠಾನ**

ಒಂದು ಕಾರ್ಯದ ಯಶಸ್ಸಿನಲ್ಲಿ ಸಮಯ ಮತ್ತು ಸ್ಥಳವು ಪ್ರಮುಖ ಪಾತ್ರ ವಹಿಸುತ್ತದೆ. ಆದುದರಿಂದ ಕಾರ್ಯವನ್ನು ಕೈಗೊಳ್ಳುವಾಗ ಈ ಅಂಶಗಳನ್ನು ಗಣನೆಗೆ ತೆಗೆದುಕೊಳ್ಳಬೇಕು ಎಂಬುದನ್ನು,

ஞாலம் கருதினும் கைகூடும் காலம்
கருதி இடத்தாற் செயின். (குறள் 484)

ಞಾಲಮ್ ಕರುದಿನುಮ್ ಕೈಕೂಡುಮ್ ಕಾಲಮ್
ಕರುದಿ ಇಡತ್ತಾಱ್ ಸೆಯಿನ್.

ಜಗವ ಜಯಿಸಲೂಬಹುದು ಕಾಲವರಿತು
ಉಪಯುಕ್ತ ತರುಣದೊಳು ಕಾರ್ಯಗೈದರೆ. (ಕುರಳ್ 484)

ಎಂಬ ಕುರಳ್ ಸ್ಪಷ್ಟಪಡಿಸುತ್ತದೆ. ಸರಿಯಾದ ಸಮಯ ಮತ್ತು ಪರಿಸರವನ್ನು ತಿಳಿದುಕೊಂಡು ಕಾರ್ಯಪ್ರವೃತರಾದರೆ ದೊಡ್ಡ ಗುರಿಗಳನ್ನೂ ಸಹ ಸಾಧಿಸಬಹುದು. ಆದುದರಿಂದ, ನಿರ್ವಹಣೆಯಲ್ಲಿ ಸಂಪನ್ಮೂಲಗಳು ಮಾತ್ರವಲ್ಲ; ಸಮಯ ಮತ್ತು ಪರಿಸರವೂ ಸಂಪನ್ಮೂಲಗಳೇ. ತಿರುಕ್ಕುರಳಿನ ನಿರ್ವಹಣಾ ಚಿಂತನೆಯೆಂಬುದು ಯೋಜನೆ - ಅನ್ವೇಷನೆ - ಸರಿಯಾದ ವ್ಯಕ್ತಿಯನ್ನು ಆಯ್ಕೆ ಮಾಡುವುದು - ಸಮಯಕ್ಕೆ ಸರಿಯಾಗಿ ಕಾರ್ಯನಿರ್ವಹಿಸುವುದು - ಅದನ್ನು ದೃಢನಿಶ್ಚಯದಿಂದ ಪೂರೈಸುವುದು. ಉತ್ತಮ ನಿರ್ವಹಣೆ ಎಂಬುದು ಹೆಚ್ಚಿನ ಕೆಲಸಗಳನ್ನು ಮಾಡುವುದರ ಬಗ್ಗೆ ಅಲ್ಲ; ಸರಿಯಾದ ರೀತಿಯಲ್ಲಿ ಮತ್ತು ಸರಿಯಾದ ಸಮಯದಲ್ಲಿ ಸರಿಯಾದ ಕೆಲಸವನ್ನು ಪೂರ್ಣಗೊಳಿಸುವುದರ ಬಗ್ಗೆ.

## 5.23 ವಿಶ್ವ ಭಾಷೆಗಳಲ್ಲಿ ತಿರುಕ್ಕುರಳ್

ತಿರುಕ್ಕುರಳ್ ತಮಿಳಿನಲ್ಲಿ ರಚನೆಯಾಗಿದ್ದರೂ, ಅದರ ಕೇಂದ್ರ ವಿಚಾರಗಳು ಮಾನವ ಜೀವನದ ಸಾಮಾನ್ಯ ಪ್ರಶ್ನೆಗಳನ್ನು ಸ್ಪರ್ಶಿಸುತ್ತವೆ. ಧರ್ಮ, ಪ್ರೀತಿ, ನ್ಯಾಯ, ಸ್ನೇಹ, ಆಡಳಿತ, ಶಿಕ್ಷಣ, ದುಡಿಮೆ, ಕುಟುಂಬ, ಪ್ರೇಮ- ಇತ್ಯಾದಿಗಳು ಪ್ರಪಂಚದ ಎಲ್ಲಾ ಜನರಿಗೆ ಸಾಮಾನ್ಯವಾಗಿವೆ. ಆದುದರಿಂದ ತಿರುಕ್ಕುರಳನ್ನು ಸಾರ್ವತ್ರಿಕ ವೇದವೆಂದು ಹೊಗಳಲಾಗುತ್ತದೆ. ತಿರುಕ್ಕುರಳನ್ನು ವಿವಿಧ ಭಾಷೆಗಳಿಗೆ ಅನುವಾದಿಸಲು ಮೂಲ ಕಾರಣವೆಂದರೆ ಅದು ಸಾಮಾನ್ಯ ವಿಚಾರಗಳನ್ನು ಒಳಗೊಂಡಿದೆ.

ಶಿಕ್ಷಣವು ವ್ಯಕ್ತಿಯನ್ನು ದೇಶ ಮತ್ತು ಊರುಗಳಂತಹ ಗಡಿಗಳನ್ನು ದಾಟಿ ಸಾಗಲು ಅನುವು ಮಾಡಿಕೊಡುತ್ತದೆ. ಅದೇ ರೀತಿ, ತಿರುಕ್ಕುರಳ್ ಸಹ ತನ್ನ ಮೂಲ ಭಾಷೆಯನ್ನು ದಾಟಿ ಅನುವಾದಗಳ ಮೂಲಕ ವಿವಿಧ ದೇಶಗಳ ಜನರನ್ನು ತಲುಪಿದೆ.

ತಿರುಕ್ಕುರಳನ್ನು ಅನುವಾದಿಸುವುದು ಕೇವಲ ಪದಗಳನ್ನು ಬದಲಾಯಿಸುವುದಲ್ಲ. ಎರಡು ಅಡಿಗಳಲ್ಲಿ ರಚನೆಗೊಂಡ ಕುರಳಿನ ತಿರುಳು, ಉಪಮೆ, ವ್ಯಾಕರಣ ರಚನೆ ಮತ್ತು ಸಾಂಸ್ಕೃತಿಕ ಸೂಕ್ಷ್ಮತೆಗಳನ್ನು ಇನ್ನೊಂದು ಭಾಷೆಗೆ ಕೊಂಡೊಯ್ಯುವುದು ದೊಡ್ಡ ಸವಾಲಾಗಿದೆ. ಆದುದರಿಂದ, ಪ್ರತಿಯೊಂದು ಅನುವಾದವು ಮೂಲ ಮತ್ತು ಉದ್ದಿಷ್ಟ ಭಾಷೆಗಳ ನಡುವೆ ನಿರ್ಮಿಸಲಾದ ಸಾಂಸ್ಕೃತಿಕ ಸೇತುವೆಯಾಗಿದೆ.

ತಿರುಕ್ಕುರಳಿನ ಸಾರ್ವತ್ರಿಕ ಪ್ರಸ್ತುತತೆಯನ್ನು ಅದರ ಅನುವಾದಗಳ ಸಂಖ್ಯೆಯಿಂದ ಮಾತ್ರ ನಿರ್ಧರಿಸಲಾಗುವುದಿಲ್ಲ. ಅದರ ವ್ಯಾಪಕ ಓದುಗರ ಸಂಖ್ಯೆಗೆ ಮುಖ್ಯ ಕಾರಣವೆಂದರೆ ಮಾನವ ಜೀವನದ ಮೂಲಭೂತ ಪ್ರಶ್ನೆಗಳನ್ನು ಸಂಕ್ಷಿಪ್ತವಾಗಿ ಪರಿಹರಿಸುವ ಸಾಮರ್ಥ್ಯ.

"ಒಳ್ಳೆಯ ಮನುಷ್ಯನಾಗಿ ಬದುಕುವುದು ಹೇಗೆ?", "ಅಧಿಕಾರವನ್ನು ಹೇಗೆ ಬಳಸುವುದು?", "ಸಂಪತ್ತಿನ ಉಪಯೋಗವೇನು?", "ಯಾವ ರೀತಿಯ ಸ್ನೇಹವಿರಬೇಕು?", "ಇತರರಿಗೆ ಹಾನಿಯುಂಟು ಮಾಡದಂತೆ ಬದುಕುವುದು ಹೇಗೆ?"

ಈ ರೀತಿಯ ಪ್ರಶ್ನೆಗಳು ಕಾಲ ಮತ್ತು ಭಾಷೆಯನ್ನು ಮೀರಿದ ಜಗತ್ತಿನ ಎಲ್ಲಾ ಜನರಿಗೆ ಸಾಮಾನ್ಯವಾಗಿ ನಿಲ್ಲುವಂಥವು.

ತಿರುಕ್ಕುರಳನ್ನು ಭಾರತೀಯ ಭಾಷೆಗಳು, ಯುರೋಪಿಯನ್ ಭಾಷೆಗಳು ಮತ್ತು ಆಗ್ನೇಯ ಏಷ್ಯಾದ ಭಾಷೆಗಳು ಸೇರಿದಂತೆ ವಿವಿಧ ಭಾಷೆಗಳಿಗೆ ಅನುವಾದಿಸಲಾಗಿದೆ. 'ತಿರುಕ್ಕುರಳ್' ಜಾಗತಿಕ ಸಾರ್ವತ್ರಿಕ ವೇದ ಎಂಬುದಕ್ಕೆ ನಿದರ್ಶನ. ಹೀಗಾಗಿ, ತಿರುಕ್ಕುರಳ್ ಅನುವಾದಗಳು ತಮಿಳು ಮತ್ತು ಇತರ ಭಾಷಾ ಸಂಸ್ಕೃತಿಗಳ ನಡುವಿನ ಜ್ಞಾನ ಮತ್ತು ಸಾಂಸ್ಕೃತಿಕ ವಿನಿಮಯದ ಮೂಲವಾಗಿದೆ.

ತಿರುಕ್ಕುರಳ್ ತಮಿಳು ಸಾಹಿತ್ಯದ ಒಂದು ನಿಧಿಯಾಗಿ ರಚನೆಗೊಂಡು, ಅನುವಾದಗಳ ಮೂಲಕ ವಿಶಾಲ ಮಾನವ ಸಮುದಾಯದೊಂದಿಗೆ ಮಾತನಾಡುವ ಕೃತಿಯಾಗಿ ಬೆಳೆದಿದೆ. ಅದರ ಜಾಗತಿಕ ಪ್ರಯಾಣದ ಬಲವು ಅದರ ಕಿರಿದಾದ ರೂಪದಲ್ಲಿಲ್ಲ; ಅದು ಆ ಕಿರಿದಾದ ರೂಪದಲ್ಲಿ ಅಡಗಿರುವ ವಿಶಾಲ ಮಾನವ ಚಿಂತನೆಯಲ್ಲಿದೆ. ಭಾಷೆಗಳು ಬದಲಾದರೂ, ಪ್ರೀತಿ, ನೈತಿಕತೆ, ನ್ಯಾಯ ಮತ್ತು ಮಾನವೀಯತೆಗಳ ಅಗತ್ಯವು ಬದಲಾಗುವುದಿಲ್ಲ. ತಿರುಕ್ಕುರಳ್ ಭಾಷಾ ಗಡಿಗಳನ್ನು ಮೀರಿ ಪ್ರಯಾಣಿಸುವುದನ್ನು ಮುಂದುವರಿಸುವಂತೆ ಮಾಡುವುದು ಆ ಸಾರ್ವತ್ರಿಕ ಮಾನವೀಯತೆಯಾಗಿದೆ.

'ದಿವ್ಯಗ್ರಂಥ ತಿರುಕ್ಕುರಳ್' ಎಂಬ ಈ ಅಧ್ಯಾಯದಲ್ಲಿ, ಸಾರ್ವತ್ರಿಕ ವೇದ ಗ್ರಂಥ ತಿರುಕ್ಕುರಳ್ ಮಾತನಾಡುವ ಪ್ರಮುಖ ವಿಷಯಗಳ ಬಗ್ಗೆ ಅರಿತೆವು. ಮುಂದಿನ ಭಾಗದಲ್ಲಿ, 'ಕುರಳ್ ಮಣಿಮಾಲೆ'ಯ ಮೂಲಕ ತಿರುಕ್ಕುರಳನ್ನು ಕಲಿಯೋಣ.

## ಅಧ್ಯಾಯ - 6 ಕುರಳ್ ಮಣಿಮಾಲೆ

ತಿರುಕ್ಕುರಳಿನ ಧರ್ಮ ಮತ್ತು ಅರ್ಥಭಾಗಗಳ ಪ್ರತಿ ಅಧ್ಯಾಯದಿಂದ ಒಂದು ಕುರಳನ್ನು ಸಂಗ್ರಹಿಸಿ ಪ್ರಸ್ತುತ ಕುರಳ್ ಮಣಿಮಾಲೆಯನ್ನು ಸಂಕಲಿಸಲಾಗಿದೆ. ದಿನಕ್ಕೆ ಒಂದು ಕುರಳನ್ನು ಅಧ್ಯಯನ ಮಾಡಿದರೆ, ಮೂರು ವಿಭಾಗಗಳನ್ನು ಸಂಪೂರ್ಣವಾಗಿ ಕಲಿಯಬಹುದು.

### 1.அறத்துப்பால்
### ಅಱತ್ತುಪ್ಪಾಲ್
### ಧರ್ಮಭಾಗ

**1. கடவுள் வாழ்த்து**

**ಕಡವುಳ್ ವಾೞ್ತ್ತು - ದೈವ ನಮನ**

அகர முதல எழுத்தெல்லாம் ஆதி
பகவன் முதற்றே உலகு. (குறள் 1)

ಅಗರ ಮುದಲ ಎೞುತ್ತೆಲ್ಲಾಮ್ ಆದಿ
ಬಗವನ್ ಮುದಱ್ಱೇ ಉಲಗು.

ಅಕ್ಷರಗಳಿಗೆ ಅಕಾರವೇ ಮೊದಲಿನಂತೆ ಆದಿ ಭಗವಂತನೆ
ಮೊದಲಾಗಿದ್ದಾನೆ ಧರಣಿಯೊಳು. (ಕುರಳ್ 1)

ಅಕಾರವು ಅಕ್ಷರಗಳಿಗೆಲ್ಲಾ ಆಧಾರವಾಗಿರುವುದು; ಅದರಂತೆ ಆದಿ ಭಗವಂತನು ಈ ವಿಶ್ವಕ್ಕೆ ಆಧಾರವಾಗಿರುವನು.

**2. வான்சிறப்பு**

**ವಾನ್ಚಿಱಪ್ಪು - ಮಳೆಯ ಮಹಿಮೆ**

வான்நின்று உலகம் வழங்கி வருதலால்
தான்அமிழ்தம் என்றுணரல் பாற்று. (குறள் 11)

ವಾನ್ನಿನ್ಱು ಉಲಗಮ್ ವೞಙ್ಗಿ ವರುದಲಾಲ್
ತಾನ್ಅಮಿೞ್ದಮ್ ಎನ್ಱುಣರಲ್ ಪಾಱ್ಱು.

ನಿಯಮಿತ ವೃಷ್ಟಿಯೇ ಜಗತ್ ಸಮೃದ್ಧಿಗೆ ಕಾರಣ
ಅದನ್ನು ಅಮೃತವೆಂದೇ ಗ್ರಹಿಸುವುದೇ ಸರಿ. (ಕುರಳ್ 11)

ಮಳೆಯಿಂದಲೇ ಈ ವಿಶ್ವಜೀವನ ಸಾಗುತ್ತಿರುವುದು. ಆದ್ದರಿಂದ ಈ ಮಳೆಯನ್ನು ಅಮೃತವೆಂದು ಈ ಲೋಕವು ಭಾವಿಸುವುದು.

**3. நீத்தார் பெருமை**

**ನೀತ್ತಾರ್ ಪೆರುಮೈ – ಸನ್ಯಾಸಿಯ ಮಹಿಮೆ**

அந்தணர் என்போர் அறவோர்மற் றெவ்வுயிர்க்கும்
செந்தண்மை பூண்டுஒழுக லான். (குறள் 30)

ಅನ್ದಣರ್ ಎನ್ಬೋರ್ ಅಱವೋರ್ಮಱ್ ಱೆವ್ವುಯಿರ್ಕ್ಕುಮ್
ಸೆನ್ದಣ್ಮೈ ಪೂಣ್ಡೊಟುಗ ಲಾನ್.

ಹೃದಯದೊಳು ಸದಾ ದಯವಿರುವವನ ಬ್ರಾಹ್ಮಣನೆಂಬೋಣ
ಇವ ಕಾಣುವನು ಸಕಲ ಜೀವರಾಶಿಗಳ ದಯೆಯಿಂದ. (ಕುರಳ್ 30)

ಧರ್ಮಮಾರ್ಗದಲ್ಲಿ ನಡೆಯುವರೇ ಬ್ರಾಹ್ಮನರು; ಏಕೆಂದರೆ ಅವರು ಮತ್ತೆಲ್ಲ ಪ್ರಾಣಿಗಳನ್ನು ಸಹಜ ಪ್ರೀತಿಯಿಂದ ಕಾಣಲು ಪ್ರತಿಜ್ಞೆ ಮಾಡುತ್ತಾರೆ.

### 4. அறன் வலியுறுத்தல்
### ಅಱನ್ ವಲಿಯುಱುತ್ತಲ್ - ಧರ್ಮ ಬೋಧನೆ

அன்றறிவாம் என்னாது அறம்செய்க மற்றது
பொன்றுங்கால் பொன்றாத் துணை. (குறள் 36)

ಅನ್ಱಱಿವಾಮ್ ಎನ್ನಾದು ಅಱಮ್ಸೆಯ್ಗ ಮಱ್ಱದು
ಪೊನ್ಱುಙ್ಗಾಲ್ ಪೊನ್ಱಾತ್ ತುಣೈ.

ಧರ್ಮವ ಪರಿಪಾಲಿಸು ಅನವರತ ಆ
ಧರ್ಮವೇ ಮರಣಾಂತ್ಯದಲಿ ಬರುವುದು ಜತೆಗೆ. (ಕುರಳ್ 36)

ಮುಂದೆ ವಯಸ್ಸಾದ ಮೇಲೆ ಮಾಡಿಕೊಳ್ಳೋಣವೆಂದು ಕಾಲವನ್ನು ಮುಂದೂಡದೆ ಧರ್ಮಕಾರ್ಯವನ್ನು ಇಂದೇ ಮಾಡಬೇಕು. ಸಾಯುವ ಕಾಲದಲ್ಲಿ ಅದೇ ಶಾಶ್ವತವಾದ ಸಂಗಾತಿಯಾಗುವುದು.

### 5. இல்வாழ்க்கை
### ಇಲ್ವಾಟ್ಕೈ - ಗೃಹಸ್ಥ ಜೀವನ

வையத்துள் வாழ்வாங்கு வாழ்பவன் வான்உறையும்
தெய்வத்துள் வைக்கப் படும். (குறள் 50)

ವೈಯತ್ತುಳ್ ವಾಟ್ವಾಙ್ಗು ವಾಟ್ಪವನ್ ವಾನ್ಉಱೈಯುಮ್
ದೆಯ್ವತ್ತುಳ್ ವೈಕ್ಕಪ್ ಪಡುಮ್.

ಭುವಿಯಲಿ ಬಾಳುತ ಸ್ವಧರ್ಮವೇ ಆದರ್ಶವೆನಲು ಸ್ವರ್ಗಲೋಕದ
ದೈವವೆಂಬರು ಅವನ ಅವನಿಯಲಿ. (ಕುರಳ್ 50)

ಈ ಲೋಕದಲ್ಲಿಯೇ ಗೃಹಧರ್ಮಕ್ಕೆ ತಕ್ಕಂತೆ ಬಾಳುತ್ತಿರುವವನು, ಸ್ವರ್ಗಲೋಕದ ದೇವತೆಗಳಲ್ಲಿ ಒಬ್ಬನಂತೆ ಗೌರವಿಸಲ್ಪಡುವನು.

### 6. வாழ்க்கைத் துணைநலம்
### ವಾಟ್ಕೈತ್ ತುಣೈನಲಮ್ - ಸಹ ಧರ್ಮಿಣಿಯ ಗುಣ

மங்கலம் என்ப மனைமாட்சி மற்றதன்
நன்கலம் நன்மக்கட் பேறு. (குறள் 60)

ಮಙ್ಗಲಮ್ ಎನ್ಪ ಮನೈಮಾಟ್ಚಿ ಮಱ್ಱದನ್
ನನ್ಕಲಮ್ ನನ್ಮಕ್ಕಟ್ ಪೇಱು.

ಹೆಂಡತಿಯ ಸದ್ಗುಣವೇ ಸಂಸಾರಕ್ಕೆ ಮಂಗಲ, ಒಳ್ಳೆಯ ಮಕ್ಕಳನ್ನು
ಪಡಯುವುದೇ ಸಂಸಾರಕ್ಕೆ ಶ್ರೇಷ್ಠ ಆಭರಣ. (ಕುರಳ್ 60)

ಸತಿಯ ಶ್ರೇಷ್ಠಗುಣವೇ ಮನೆಗೆ ಮಂಗಳಕರವಾದದ್ದೆಂದು ಬಲ್ಲವರು ನುಡಿಯುವರು; ಮತ್ತು ಒಳ್ಳೆಯ ಮಕ್ಕಳನ್ನು ಪಡೆಯುವುದು ಅದಕ್ಕೆ ಮತ್ತೊಂದು ಅಲಂಕಾರ.

## 7. மக்கட்பேறு

### ಮಕ್ಕಟ್ಪೇಱು – ಪುತ್ರಭಾಗ್ಯ

குழலினிது யாழினிது என்பதம் மக்கள்
மழலைச்சொல் கேளா தவர். (குறள் 66)

ಕುೞಲಿನಿದು ಯಾೞಿನಿದು ಎನ್ಪದಮ್ ಮಕ್ಕಳ್
ಮೞಲೈಚ್ಚೊಲ್ ಕೇಳಾ ದವರ್.

ಕೊಳಲಿಂಪು ತಂಬೂರಿಯ ನಾದವಿಂಪೆಂಬರು ತಮ್ಮ ಮಕ್ಕಳ
ತೊಳಲ್ನುಡಿಯ ಕೇಳದವರು. (ಕುರಳ್ 66)

ತಮ್ಮ ಮಕ್ಕಳ ತೊದಲು ಮಾತನ್ನು ಕಿವಿಯಾರೆ ಕೇಳಿ ಆನಂದ ಪಡದವರು, ಕೊಳಲ ಧ್ವನಿ ಇಂಪೆಂದೂ, ವೀಣೆಯ ನಾದ ಇಂಪೆಂದು ಹೇಳುವರು

## 8. அன்புடைமை

### ಅನ್ಬುಡೈಮೈ - ಪ್ರೇಮಭಾವ

அன்பிலார் எல்லாம் தமக்குரியர் அன்புடையார்
என்பும் உரியர் பிறர்க்கு. (குறள் 72)

ಅನ್ಬಿಲಾರ್ ಎಲ್ಲಾಮ್ ತಮಕ್ಕುರಿಯರ್ ಅನ್ಬುಡೈಯಾರ್
ಎನ್ಬುಮ್ ಉರಿಯರ್ ಪಿಱರ್ಕ್ಕು.

ಪ್ರೇಮರಹಿತರು ಎಲ್ಲವನೂ ತಮದೆಂಬರು
ಪ್ರೇಮವುಳ್ಳವರು ತನ್ನೆಲುಬನೂ ಅರ್ಪಿಸುವರು ಪರರಿಗೆ. (ಕುರಳ್ 72)

ಪ್ರೀತಿಯಿಲ್ಲದವರು ಎಲ್ಲಾ ಪದಾರ್ಥಗಳನ್ನು ತಮ್ಮದೆಂದೇ ಹೇಳುವರು; ಪ್ರೀತಿಯುಳ್ಳವರು ತಮ್ಮ ಪದಾರ್ಥಗಳೊಂದಿಗೆ ಶರೀರವನ್ನೂ ಅನ್ಯರಿಗೆ ಅರ್ಪಿಸುವರು.

## 9.விருந்தோம்பல்

### ವಿರುನ್ದೋಮ್ಬಲ್ - ಅತಿಥಿ ಸತ್ಕಾರ

மோப்பக் குழையும் அனிச்சம் முகம்திரிந்து
நோக்கக் குழையும் விருந்து. (குறள் 90)

ಮೋಪ್ಪಕ ಕುಳೈಯುಮ್ ಅನಿಚ್ಚಮ್ ಮುಗಮ್ತಿರಿನ್ದು
ನೋಕ್ಕಕ ಕುಳೈಯುಮ್ ವಿರುನ್ದು.

ಮೂಸಿದೊಡೆ ಮುದಡುವುದು ಅನಿಚ್ಛ ಪುಷ್ಪ
ವಿಮುಖಿನ ನೋಡಲು ಸೊರಗುವನು ಅತಿಥಿ. (ಕುರಳ್ 90)

ಅನಿಚ್ಚ ಎಂಬ ಹೂವು ಮೂಸಿದ ಕೂಡಲೇ ಬಾಡಿಹೋಗುತ್ತದೆ; ಅದರಂತೆ ವಕ್ರ ಮುಖದಿಂದ ಅತಿಥಿಯನ್ನು ನೋಡಿದ ಕೂಡಲೇ ಅವನ ಮುಖ ಬಾಡಿ ಹೋಗುತ್ತದೆ.

## 10. இனியவை கூறல்

### ಇನಿಯವೈ ಕೂಱಲ್ – ವಚನದಲಿ ಮಾಧುರ್ಯ

இனிய உளவாக இன்னாத கூறல்
கனியிருப்பக் காய்கவர்ந் தற்று. (குறள் 100)

ಇನಿಯ ಉಳವಾಗ ಇನ್ನಾದ ಕೂಱಲ್
ಕನಿಯಿರುಪ್ಪಕ ಕಾಯ್ಕವರ್ನ್ ದಱ್ಱು.
ಇಂಪಾದ ಸೊಲ್ಲಿರಲು ನುಡಿಯದೆ ಕಠಿಣ ವಾರ್ತೆಗಳಾಡುವುದು ಮಾಗಿದ
ಹಣ್ಣಿರಲು ಕಾಯ ಸವಿದಂತೆ. (ಕುರಳ್ 100)

ಸವಿನುಡಿಗಳಿರುವಾಗ ಅವುಗಳನ್ನು ಬಿಟ್ಟು ಕಟು ನುಡಿಗಳನ್ನಾಡುವುದು, ಪಕ್ವವಾದ ಹಣ್ಣಿರಲು ಅಪಕ್ವವಾದ ಕಾಯನನು ತಿನ್ನುವುದಕ್ಕೆ ಸಮ

## 11. செய்ந்நன்றி அறிதல்

### ಸೆಯ್ನನ್ಱಿ ಅಱಿದಲ್ - ಕೃತಜ್ಞತೆ

செய்யாமல் செய்த உதவிக்கு வையகமும்
வானகமும் ஆற்றல் அரிது. (குறள் 101)

ಸೆಯ್ಯಾಮಲ್ ಸೆಯ್ದ ಉದವಿಕ್ಕು ವೈಯಗಮುಮ್
ವಾನಗಮುಮ್ ಆಱ್ಱಲ್ ಅರಿದು.

ಪ್ರತ್ಯುಪಕಾರದ ಪರಿವೆಯಿಲ್ಲದೆ ಮಾಡಿದ ಉಪಕಾರವ
ಭೂಲೋಕ, ಸ್ವರ್ಗಲೋಕದೊಳು ತೀರಿಸಲಾಗದು. (ಕುರಳ್ 101)

ಈ ಹಿಂದೆ ಒಬ್ಬನು ತನ್ನಿಂದ ಯಾವ ಉಪಕಾರವನ್ನು ಪಡೆಯದೆ, ಇಂದು ತನಗೆ ಉಪಕಾರವನ್ನು ಮಾಡಿದರೆ, ಅದಕ್ಕೆ ಪ್ರತಿಯಾಗಿ ಅವನಿಗೆ ತಾನೂ ಭೂಲೋಕ ಸ್ವರ್ಗ ಲೋಕಗಳೆರಡನ್ನು ಕೊಟ್ಟರೂ ಸಮವಾಗವು.

## 12. நடுவுநிலைமை

### ನಡುವುನಿಲೈಮೈ - ನಿಷ್ಪಕ್ಷತೆ

வாணிகம் செய்வார்க்கு வாணிகம் பேணிப்
பிறவும் தமபோல் செயின். (குறள் 120)

ವಾಣಿಗಮ್ ಸೆಯ್ವಾರ್ಕ್ಕು ವಾಣಿಗಮ್ ಪೇಣಿಪ್
ಪಿಱವುಮ್ ತಮಪೋಲ್ ಸೆಯಿನ್.

ಪೊಗಳ್ವರು ವಣಿಜರವರ ಪರರೊಡಮೆಯ
ತನದೆಂಬಂತೆ ವಾಣಿಜ್ಯವೆಸಗಿಡೆ. (ಕುರಳ್ 120)

ಅನ್ಯರ ಪದಾರ್ಥಗಳನ್ನು ತಮ್ಮ ಪದಾರ್ಥಗಳಂತೆ ಭಾವಿಸಿ ರಕ್ಷಿಸಿದರೆ, ಅದೇ ವ್ಯಾಪಾರಸ್ಥರಿಗೆ ನ್ಯಾಯಸಮ್ಮತವಾದ ವ್ಯಾಪಾರ ಎನಿಸಿಕೊಳ್ಳುತ್ತದೆ.

## 13. அடக்கமுடைமை

**ಅಡಕ್ಕಮುಡೈಮೈ – ಸಂಯಮ ಶೀಲತೆ**

தீயினால் சுட்டபுண் உள்ளாறும் ஆறாதே
நாவினால் சுட்ட வடு. (குறள் 129)

ತೀಯಿನಾಲ್ ಸುಟ್ಟಪುಣ್ ಉಳ್ಳಾಱುಮ್ ಆಱಾದೇ
ನಾವಿನಾಲ್ ಸುಟ್ಟ ವಡು.

ಮಾಗುವುದು ತಾನೇ ಗಾಯವದು ಬೆಂಕಿ ಸುಡಲು;
ಮಾಗದೆಂದೂ ನಾಲಿಗೆಯಿಂ ಸುಟ್ಟ ಕಲೆ. (ಕುರಳ್ 129)

ಬೆಂಕಿಯಿಂದ ಸುಟ್ಟುಕೊಂಡ ಗಾಯದ ಗುರುತು ದೇಹದ ಒಳಗೆ ವಾಸಿಯಾಗುತ್ತದೆ; ಆದರೆ ನಾಲಗೆಯಿಂದ ಹೊರಬರುವ ಕೆಟ್ಟ ನುಡಿಗಳಿಂದಾದ ಗಾಯ ಎಂದಿಗೂ ವಾಸಿಯಾಗುವುದಿಲ್ಲ.

## 14. ஒழுக்கமுடைமை

**ಒಟುಕ್ಕಮುಡೈಮೈ – ಸದಾಚಾರಶೀಲತೆ**

ஒழுக்கம் விழுப்பம் தரலான் ஒழுக்கம்
உயிரினும் ஓம்பப் படும். (குறள் 131)

ಒಟುಕ್ಕಮ್ ವಿಟುಪ್ಪಮ್ ತರಲಾನ್ ಒಟುಕ್ಕಮ್
ಉಯಿರಿನುಮ್ ಓಮ್ಬಪ್ ಪಡುಮ್.

ಸದಾಚಾರವು ತರುವುದು ಯಶವ
ಸದಾಚಾರವನು ಕಾಯ್ದಿಡು ಜೀವಿತಕೆ ಮಿಗಿಲೆಂದು. (ಕುರಳ್ 131)

ನಡತೆಯೇ ಎಲ್ಲರಿಗೂ ಮೇಲ್ಮೆಯನ್ನು ತರುವುದರಿಂದ, ಅದನ್ನು ಪ್ರಾಣಕ್ಕಿಂತ ಮೇಲಾಗಿ ಕಾಪಾಡಿಕೊಳ್ಳಬೇಕು.

## 15. பிறனில் விழையாமை

**ಪಿಱನಿಲ್ ವಿಟೈಯಾಮೈ – ಪರ ಸ್ತ್ರೀಯರ ಕಾಮಿಸದಿರುವುದು**

பிறன்மனை நோக்காத பேராண்மை சான்றோர்க்கு
அறனொன்றோ ஆன்ற ஒழுக்கு. (குறள் 148)

ಪಿಱನ್ಮನೈ ನೋಕ್ಕಾದ ಪೇರಾಣ್ಮೈ ಸಾನ್ಱೋರ್ಕ್ಕು
ಅಱನೊನ್ಱೋ ಆನ್ಱ ಒಟುಕ್ಕು.

ಪರ ಪತ್ನಿಯ ಕಾಮ ನಯನದಿ ಕಾಣದ ಪೌರುಷತ್ವವೇ
ಸಜ್ಜನರ ಧರ್ಮ ಅವರ ಹಿರಿಮೆ. (ಕುರಳ್ 148)

ಪರರ ಹೆಂಡತಿಯನ್ನು ನೋಡದ ಹಿರಿಯ ಕೆಚ್ಚು, ಸಂಪನ್ನರಿಗೆ ಧರ್ಮ ಮಾತ್ರವಲ್ಲದೆ ಪರಿಪೂರ್ಣ ನಡತೆಯೂ ಆಗುತ್ತದೆ.

## 16.பொறையுடைமை

### ಪೊಱೈಯುಡೈಮೈ - ಕ್ಷಮಾಶೀಲತೆ

பொறுத்தல் இறப்பினை என்றும் அதனை
மறத்தல் அதனினும் நன்று. (குறள் 152)

ಪೊಱುತ್ತಲ್ ಇಱಪ್ಪಿನೈ ಎನ್ಱುಮ್ ಅದನೈ
ಮಱತ್ತಲ್ ಅದನಿನುಮ್ ನನ್ಱು.

ಸಹಿಷ್ಣುತೆ ಉತ್ತಮವೆಂದರೂ ನಿಂದೆಯನು
ಮರೆವುದು ಅತಿ ಉತ್ತಮವೆಂಬರು. (ಕುರಳ್ 152)

ಎಲ್ಲೆಮೀರಿ ಅನ್ಯರೆಸಗಿದ ಕೇಡನ್ನು ಸಹಿಸಿಕೊಂಡಿರುವುದು ಒಳ್ಳೆಯದು. ಆ ಕೇಡನ್ನು ಮನಸ್ಸಿಗೆ ಹಚ್ಚಿಕೊಳ್ಳದೆ ಸಂಪೂರ್ಣವಾಗಿ ಮರೆತು ಬಿಡುವುದು ಅದಕ್ಕಿಂತಲೂ ಶ್ರೇಷ್ಠವಾದ ಗುಣ.

## 17. அழுக்காறாமை

### ಅೞುಕ್ಕಾಱಾಮೈ – ಈರ್ಷೆ ಇಲ್ಲದಿರುವಿಕೆ

ஒழுக்காறாக் கொள்க ஒருவன்தன் நெஞ்சத்து
அழுக்காறு இலாத இயல்பு. (குறள் 161)

ಒೞುಕ್ಕಾಱಾಕ ಕೊಳ್ಕ ಒರುವನ್ದನ್ ನೆಞ್ಚತ್ತು
ಅೞುಕ್ಕಾಱು ಇಲಾದ ಇಯಲ್ಪು.

ಈರ್ಷ್ಯಾಪೂರ್ಣ ಚಿಂತನೆಯ ಮಾಡದಿರು
ಈರ್ಷ್ಯೆಯಿಂದ ಮುಕ್ತಿ ಸದಾಚಾರಕ್ಕೆ ಸಂಪತ್ತು ಸೇರ್ದಂತೆ. (ಕುರಳ್ 161)

ಒಬ್ಬನು ತನ್ನ ಹೃದಯದಲ್ಲಿ ಅಸೂಯೆಯಿಲ್ಲದ ಗುಣವನ್ನು ತನಗುಚಿತವಾದ ಸದಾಚಾರವೆಂದು ಭಾವಿಸಿ ರಕ್ಷಿಸಿಕೊಳ್ಳಬೇಕು.

## 18. வெஃகாமை

### ವೆಃಕಾಮೈ - ಲೋಭ ತ್ಯಾಗ

அஃகாமை செல்வத்திற்கு யாதெனின் வெஃகாமை
வேண்டும் பிறன்கைப் பொருள். (குறள் 178)

ಅಃಗಾಮೈ ಸೆಲ್ವತ್ತಿಱ್ಕು ಯಾದೆನಿನ್ ವೆಃಗಾಮೈ
ವೇಣ್ಡುಮ್ ಪಿಱನ್ಕೈಪ್ ಪೊರುಳ್.

ತನ್ನ ಧನವ ಕಾಯುವುದಕೆ ಮಾರ್ಗ ಯಾವುದೆಂದರೆ
ಪರ ಧನಕೆ ಲೋಭ ಪಡದಿರುವುದು. (ಕುರಳ್ 178)

ಒಬ್ಬನ ಐಶ್ವರ್ಯ ಕುಂಠಿತವಾಗದಿರುವುದಕ್ಕೆ ದಾರಿ ಯಾವುದೆಂದರೆ, ಅವನು ಅನ್ಯರ ವಸ್ತುವನ್ನು ಆಸೆ ಪಡದಿರುವ ಸದ್ಗುಣವೇ.

## 19. புறங்கூறாமை

**ಪುಱಙ್ಕೂಱಾಮೈ - ಚಾಡಿ ಹೇಳದಿರುವುದು**

ஏதிலார் குற்றம்போல் தம்குற்றம் காண்கிற்பின்
தீதுண்டோ மன்னும் உயிர்க்கு. (குறள் 190)

ಏದಿಲಾರ್ ಕುಱ್ಱಮ್ಬೋಲ್ ತಮ್ಕುಱ್ಱಮ್ ಕಾಣ್ಕಿಱ್ಪಿನ್
ತೀದುಣ್ಡೋ ಮನ್ನುಮ್ ಉಯಿರ್ಕ್ಕು.

ಪರರ ದೋಷದಂತೆ ಸ್ವದೋಷವನ್ನೂ ಕಂಡಿರಲು
ಕೇಡು ಅಂಟದು ಜೀವಿಪರ ಲೋಕದೊಳು. (ಕುರಳ್ 190)

ಅನ್ಯರ ದೋಷಗಳನ್ನು ಹುಡುಕಿ ಕಾಣುವಂತೆ ತಮ್ಮ ದೋಷಗಳನ್ನು ಹುಡುಕಿ ಮನುಷ್ಯರು ತಿದ್ದಿಕೊಳ್ಳುವುದಾದರೆ, ಅವರಲ್ಲಿ ಯಾವ ದೋಷವುಂಟು?

## 20. பயனில சொல்லாமை

**ಪಯನಿಲ ಸೊಲ್ಲಾಮೈ - ಫಲವಿಲ್ಲದ ಮಾತನಾಡದಿರುವುದು**

சொல்லுக சொல்லில் பயனுடைய சொல்லற்க
சொல்லில் பயனிலாச் சொல். (குறள் 200)

ಸೊಲ್ಲುಗ ಸೊಲ್ಲಿಲ್ ಪಯನುಡೈಯ ಸೊಲ್ಲಱ್ಕ
ಸೊಲ್ಲಿಲ್ ಪಯನಿಲಾಚ್ ಸೊಲ್.

ಆಡು ಅರ್ಥಭರಿತ ಪ್ರಯೋಜನ ತರುವ ಮಾತನು
ಆಡದಿರು ಅರ್ಥರಹಿತ ಪ್ರಯೋಜನ ವಿಲ್ಲದ ಮಾತನು. (ಕುರಳ್ 200)

ಮಾತುಗಳಲ್ಲಿ ಫಲವಿರುವುದನ್ನೇ ಆಡಬೇಕು; ಫಲವಿರದ ಮಾತುಗಳನ್ನು ಆಡಲೇ ಕೂಡದು.

## 21. தீவினையச்சம்

**ತೀವಿನೈಯಚ್ಚಮ್ - ಪಾಪದ ಭಯ**

தீயவை தீய பயத்தலால் தீயவை
தீயினும் அஞ்சப் படும். (குறள் 202)

ತೀಯವೈ ತೀಯ ಪಯತ್ತಲಾಲ್ ತೀಯವೈ
ತೀಯಿನುಮ್ ಅಞ್ಚಪ್ ಪಡುಮ್.

ಪಾಪಕ್ಕೆ ಪಾಪದ ಭಯದಲಿ ಪಾಪವ
ಪಾಪಾಗ್ನಿ ಎಂದು ಅಂಜುವುದು ಲೇಸು. (ಕುರಳ್ 202)

ಕೆಟ್ಟ ಕೆಲಸಗಳು ಕೆಡುಕನ್ನೇ ಉಂಟುಮಾಡುವುದು. ಆದರಿಂದ ಬೆಂಕಿಯನ್ನು ಕಂಡು ಹೆದರುವಂತೆ ಕೆಟ್ಟ ಕೆಲಸಕ್ಕೆ ಹೆದರಿ ದೂರ ಸರಿಯಬೇಕು.

## 22. ஒப்புரவறிதல்

### ಒಪ್ಪುರವಱಿದಲ್ – ಲೋಕೋಪಕಾರ

கைம்மாறு வேண்டா கடப்பாடு மாரிமாட்டு
என்னாற்றும் கொல்லோ உலகு. (குறள் 211)

ಕೈಮ್ಮಾಱು ವೇಣ್ಡಾ ಕಡಪ್ಪಾಡು ಮಾರಿಮಾಟ್ಟು
ಎನ್ನಾಱ್ಱುಮ್ ಕೊಲ್ಲೋ ಉಲಗು.

ಪ್ರತಿಫಲವ ನಿರೀಕ್ಷಿಸದೆ ಎಸಗು ಕರ್ತವ್ಯವ ಮೋಡ ಮಳೆಗರೆದರೆ
ಯಾವ ಪ್ರತಿಫಲವ ಎಸಗುವರು ಲೋಕದ ಜನತೆ? (ಕುರಳ್ 211)

ಜೀವರಾಶಿಗಳೆಲ್ಲಾ ತಮಗೆ ಉಪಕಾರ ಮಾಡುವ ಮಳೆಗೆ ಯಾವ ಪ್ರತ್ಯುಪಕಾರವನ್ನು ಮಾಡುತ್ತಿವೆ? ಮಳೆಯಂಥ ಮಹನೀಯರು ಮಾಡುವ ಉಪಕಾರಕ್ಕೆ ಪ್ರತ್ಯುಪಕಾರ ಬೇಕಿಲ್ಲ.

## 23. ஈகை

### ಈಗೈ - ದಾನ

அற்றார் அழிபசி தீர்த்தல் அஃதொருவன்
பெற்றான் பொருள்வைப் புழி. (குறள் 226)

ಅಱ್ಱಾರ್ ಅೞಿಪಸಿ ತೀರ್ತ್ತಲ್ ಅಃದೊರುವನ್
ಪೆಱ್ಱಾನ್ ಪೊರುಳ್ವೈಪ್ ಪುೞಿ.

ದೀನರ ಹಸಿವ ಆರಿಸುವುದೇ
ಧನವಂತನ ಸಂಪತ್ತಿನ ಸದುಪಯೋಗವೆಂಬರು. (ಕುರಳ್ 226)

ಬಡವರನ್ನು ದುಃಖಕ್ಕೆ ಒಳಪಡಿಸುವ ಕ್ರೂರತನದ ಹಸಿವನ್ನು ತೀರಿಸಬೇಕು. ಅದೇ ಐಶ್ವರ್ಯವನ್ನು ಪಡೆದವನು ಮುಂದೆ ತನಗೆ ಸಹಾಯವಾಗುವಂತೆ ಸಂಗ್ರಹಿಸಿಡುವ ಸ್ಥಳ.

## 24. புகழ்

### ಪುಗೞ್ – ಕೀರ್ತಿ

ஈதல் இசைபட வாழ்தல் அதுவல்லது
ஊதியம் இல்லை உயிர்க்கு. (குறள் 231)

ಈದಲ್ ಇಸೈ ಪಡ ವಾೞ್ದಲ್ ಅದುವಲ್ಲದು
ಊದಿಯಮ್ ಇಲ್ಲೈ ಉಯಿರ್ಕ್ಕು.

ಕೊಡುವುದು ದಾನಿ ಎಂಬ ಹೆಸರಗಳಿಸಿ ಬಾಳ್ವದಲ್ಲದೆ ಬೇರೆ
ಹಾದಿ ಇನ್ನಿಲ್ಲ ಜೀವಿಸಲು. (ಕುರಳ್ 231)

ಬಡವರಿಗೆ ಬೇಕಾದ್ದನ್ನು ಸಾಧ್ಯವಾದಷ್ಟು ಮಟ್ಟಿಗೆ ಕೊಡಬೇಕು; ಅದರಿಂದ ಕೀರ್ತಿಗಳಿಸಿ ಬಾಳಬೇಕು; ಆ ಕೀರ್ತಿಯಲ್ಲದೆ ಮನುಷ್ಯನಿಗೆ ಬೇರೊಂದು ಶ್ರೇಯಸ್ಸಿಲ್ಲ.

**25. அருளுடைமை**

**ಅರುಳುಡೈಮೈ - ದಯಾಭಾವನೆ**

அருட்செல்வம்செல்வத்துள் செல்வம் பொருட்செல்வம்

பூரியார் கண்ணும் உள. (குறள் 241)

ಅರುಟ್ಚೆಲ್ವಮ್ ಸೆಲ್ವತ್ತುಳ್ ಸೆಲ್ವಮ್ ಪೊರುಟ್ಚೆಲ್ವಮ್
ಪೂರಿಯಾರ್ ಕಣ್ಣುಮ್ ಉಳ.

ಸಂಪತ್ತೊಳು ಶ್ರೇಷ್ಠವು ದಯಾಭಾವನೆ ಎಂಬ ಸಂಪತ್ತು; ಧನ

ಸಂಪತ್ತು ನೀಚ ವ್ಯಕ್ತಿಯೂ ಪಡೆದಿರಬಹುದು. (ಕುರಳ್ 241)

ದಯಾಭಾವನೆಯೆಂಬ ಐಶ್ವರ್ಯವೇ ಐಶ್ವರ್ಯಗಳಲ್ಲೆಲ್ಲಾ ಶ್ರೇಷ್ಠವಾದದ್ದು; ಲೌಕಿಕ ಐಶ್ವರ್ಯ ಅಧಮರ ಬಳಿಯೂ ಇರುತ್ತದೆ.

**26. புலால் மறுத்தல்**

**ಪುಲಾಲ್ ಮಱುತ್ತಲ್ - ಮಾಂಸ ಉಣದಿರುವುದು**

கொல்லான் புலாலை மறுத்தானைக் கைகூப்பி

எல்லா உயிரும் தொழும். (குறள் 260)

ಕೊಲ್ಲಾನ್ ಪುಲಾಲೈ ಮಱುತ್ತಾನೈಕ ಕೈಕೂಪ್ಪಿ
ಎಲ್ಲಾ ಉಯಿರುಮ್ ತೊೞುಮ್.

ಕೊಲದವನ, ಮಾಂಸ ಒಲ್ಲೆ ಎಂಬವನ

ಕೈ ಮುಗಿದು ನಮಿಸುವವು ಸಕಲ ಜೀವಿತಗಳು. (ಕುರಳ್ 260)

ಯಾವ ಒಂದು ಪ್ರಾಣಿಯನ್ನು ಕೊಲ್ಲದೆ ಮತ್ತು ಅದರ ಮಾಂಸವನ್ನು ತಿನ್ನದೆ ಇರುವವನನ್ನು, ಜಗತ್ತಿನ ಸರ್ವಜೀವರಾಶಿಗಳೂ ಕೈಜೋಡಿಸಿ ವಂದಿಸುವವು.

**27. தவம்**

**ದವಮ್ - ತಪಸ್ಸು**

உற்றநோய் நோன்றல் உயிர்க்குஉறுகண் செய்யாமை

அற்றே தவத்திற்கு உரு. (குறள் 261)

ಉಱ್ಱನೋಯ್ ನೋನ್ಱಲ್ ಉಯಿರ್ಕ್ಕುಉಱುಕಣ್ ಸೆಯ್ಯಾಮೈ
ಅಱ್ಱೇ ದವತ್ತಿಱ್ಕು ಉರು.

ನೋವ ಸಹಿಸಿರೆ, ಅನ್ಯ ಜೀವವ ಹಿಂಸಿಸದಿರೆ

ಅದುವೇ ತಪಕ್ಕೆ ಕುರುಹೆಂಬರು. (ಕುರಳ್ 261)

ತನಗೆ ಒದಗಿ ಬಂದ ದುಃಖವನ್ನು ಸಹಿಸಿಕೊಂಡು, ತಾನು ಇತರ ಜೀವಿಗಳಿಗೆ ಯಾವ ದುಃಖವನ್ನು ಮಾಡದಿರುವುದಷ್ಟೇ ತಪೋಲಕ್ಷಣ ಎನಿಸಿಕೊಳ್ಳುತ್ತದೆ.

**28. கூடாவொழுக்கம்**

**ಕೂಡಾವೊಟುಕ್ಕಮ್ - ವಂಚನೆ**

வலியில் நிலைமையான் வல்லுருவம் பெற்றம்
புலியின்தோல் போர்த்துமேய்ந் தற்று. (குறள் 273)

ವಲಿಯಿಲ್ ನಿಲೈಮೈಯಾನ್ ವಲ್ಲುರುವಮ್ ಪೆಱ್ಱಮ್
ಪುಲಿಯಿನ್ತೋಲ್ ಪೋರ್ತ್ತುಮೇಯ್ನ್ ದಱ್ಱು.

ಬಲಹೀನನು ಶಕ್ತಿಶಾಲಿಯಂತೆ ವರ್ತಿಪುದು
ಹುಲಿ ತೊಗಲ ಹೊದಿಸಿ ಪಶು ಮೇಯುವಂತೆ.(ಕುರಳ್ 273)

ಪಂಚೇಂದ್ರಿಯಗಳನ್ನು ಅಡಗಿಸುವ ಸಾಮರ್ಥ್ಯವಿಲ್ಲದವನು ಕೈಗೊಂಡ ತಪೋವೇಷ, ಹಸುವು ಹುಲಿಯ ಚರ್ಮವನ್ನು ಹೊದ್ದುಕೊಂಡು ಪೈರನ್ನು ಮೇಯುವುದಕ್ಕೆ ಸಮನಾದದ್ದು.

**29.கள் ளாமை**

**ಕಳ್ಳಾಮೈ – ಕಳದಿರುವುದು**

எள்ளாமை வேண்டுவான் என்பான் எனைத்தொன்றும்
கள்ளாமை காக்கதன் நெஞ்சு. (குறள் 281)

ಎಳ್ಳಾಮೈ ವೇಣ್ಡುವಾನ್ ಎನ್ಪಾನ್ ಎನೈತ್ತೊನ್ಱುಮ್
ಕಳ್ಳಾಮೈ ಕಾಕ್ಕತನ್ ನೆಞ್ಜು.

ನಿಂದೆಯ ಬಯಸದವ ಮರೆತೂ ಅಪಹರಣವ
ಚಿಂತಿಸಿ ಮನದೊಳು ತರಬಾರದು (ಕುರಳ್ 281)

ಇತರರು ತನ್ನನ್ನು ಕೀಳಾಗಿ ಕಾಣಬಾರದೆಂದು ಬಯಸುವವನು, ಯಾವುದೇ ಒಂದು ಪದಾರ್ಥವನ್ನು ಕಳ್ಳತನಮಾಡಿ ಪಡೆಯದಂತೆ ತನ್ನ ಮನಸ್ಸನ್ನು ಹಿಡಿತದಲ್ಲಿರಿಸಿ ಕೊಂಡಿರಬೇಕು.

**30. வாய்மை**

**ವಾಯ್ಮೈ – ನಿಜ ನುಡಿವುದು**

வாய்மை எனப்படுவது யாதெனின் யாதொன்றும்
தீமை இலாத சொலல். (குறள் 291)

ವಾಯ್ಮೈ ಎನಪ್ಪಡುವದು ಯಾದೆನಿನ್ ಯಾದೊನ್ಱುಮ್
ತೀಮೈ ಇಲಾದ ಸೊಲಲ್.

ನಿಜ ನುಡಿಯುವುದು ಎಂಬುದು ಯಾವುದೆಂದರೆ ಯಾರಿಗೂ
ಕೇಡು ಬಾರದಂತೆ ಪೇಳುವದು. (ಕುರಳ್ 291)

'ಸತ್ಯ' ಎನಿಸುವುದು ಯಾವುದೆಂದರೆ, ಇತರರಿಗೆ ಕೇಡು ಮಾಡುವಂತಹ ಮಾತುಗಳನ್ನು ಆಡದಿರುವುದೇ.

## 31. வெகுளாமை

### ವೆಗುಳಾಮೈ - ಅಕ್ರೋಧ

தன்னைத்தான் காக்கின் சினம்காக்க காவாக்கால்
தன்னையே கொல்லும் சினம். (குறள் 305)

ತನ್ನೈತ್ತಾನ್ ಕಾಕ್ಕಿನ್ ಸಿನಮ್ಕಾಕ್ಕ ಕಾವಾಕ್ಕಾಲ್
ತನ್ನೈಯೇ ಕೊಲ್ಲುಮ್ ಸಿನಮ್.

ಕ್ರೋಧವ ಶಮನಿಸು ಸ್ವರಕ್ಷಣೆಗಾಗಿ ಕಾಪು ಕೊಡಲು
ಕ್ರೋಧವು ಬಿಡದು ಕೊಲ್ಲದೆ ನಿನ್ನ. (ಕುರಳ್ 305)

ತನ್ನನ್ನು ತಾನು ಕಾಪಾಡಿಕೊಳ್ಳಬೇಕೆಂದು ಬಯಸಿದರೆ, ಒಬ್ಬನು ತನಗೆ ಕೋಪವು ಬರದಂತೆ ಕಾಪಾಡಿಕೊಳ್ಳಬೇಕು. ಹಾಗೆ ಅದನ್ನು ಕಾಯದೆ ಬಿಟ್ಟರೆ, ಅದು ತನ್ನನ್ನೇ ಕೊಲ್ಲುವುದು.

## 32. இன்னா செய்யாமை

### ಇನ್ನಾ ಸೆಯ್ಯಾಮೈ - ಕೇಡು ಎಸಗದಿರುವುದು

இன்னாசெய் தாரை ஒறுத்தல் அவர்நாண
நன்னயம் செய்து விடல். (குறள் 314)

ಇನ್ನಾಸೆಯ್ ದಾರೈ ಒಱುತ್ತಲ್ ಅವರ್ನಾಣ
ನನ್ನಯಮ್ ಸೆಯ್ದು ವಿಡಲ್.

ತನಗೆ ಕೇಡು ಮಾಡಿದವನನ್ನು ಶಿಕ್ಷಿಸುವ ಅತ್ಯುತ್ತಮ ಮಾರ್ಗವೆಂದರೆ, ಅವನು ನಾಚಿಕೆ
ಪಡುವಂತೆ ಅವನಿಗೆ ಒಳ್ಳೆಯದನ್ನು ಮಾಡಿ ಅದನ್ನು ಮರೆತುಬಿಡುವುದು. (ಕುರಳ್ 314)

ತನಗೆ ಕೇಡು ಮಾಡಿದವರನ್ನು ದಂಡಿಸುವುದು ಹೇಗೆಂದರೆ, ಅವರು ನಾಚುವ ರಿತಿಯಲ್ಲಿ, ಅವರಿಗೆ ಒಳ್ಳೆಯದನ್ನು ಮಾಡಿ, ಅವರು ಮಾಡಿದ ಕೇಡನ್ನು ಮರೆತು ಬಿಡುವುದು.

## 33. கொல்லாமை

### ಕೊಲ್ಲಾಮೈ - ಅಹಿಂಸೆ

பகுத்துண்டு பல்லுயிர் ஓம்புதல் நூலோர்
தொகுத்தவற்றுள் எல்லாம் தலை. (குறள் 322)

ಪಗುತ್ತುಣ್ಡು ಪಲ್ಲುಯಿರ್ ಓಮ್ಬುದಲ್ ನೂಲೋರ್
ತೊಗುತ್ತವಱ್ಱುಳ್ ಎಲ್ಲಾಮ್ ತಲೈ.

ಸರ್ವರಿಗೆ ಹಂಚಿ ಉಣಬಡಿಸಿ, ಅಹಿಂಸಾ ಧರ್ಮವ ಪಾಲಿಸಿರೆ ಇದುವೇ
ಸರ್ವ ಧರ್ಮವೂ ಸ್ವೀಕರಿಸಿದ ಪ್ರಥಮ ಧರ್ಮ. (ಕುರಳ್ 322)

ತಾನು ಸಂಪಾದಿಸಿ ತಂದ ಅನ್ನವನ್ನು ಇತರರಿಗೂ ಹಂಚಿ ಕೊಟ್ಟುಂಡು ತನ್ಮೂಲಕ ಹಲವು ಜೀವಿಗಳನ್ನು ಸಂರಕ್ಷಿಸುವುದು, ಧರ್ಮಶಾಸ್ತ್ರಜ್ಞರು ಸಂಗ್ರಹಿಸಿದ ಧರ್ಮಗಳಲ್ಲೆಲ್ಲಾ ಸರ್ವೋತ್ತಮವಾದದ್ದು.

**34. நிலையாமை**

**ನಿಲೈಯಾಮೈ - ಅನಿತ್ಯತೆ**

நெருநல் உளனொருவன் இன்றில்லை என்னும்
பெருமை உடைத்திவ் வுலகு. (குறள் 336)

ನೆರುನಲ್ ಉಳನೊರುವನ್ ಇನ್ರಿಲ್ಲೈ ಎನ್ನುಮ್
ಪೆರುಮೈ ಉಡೈತ್ತಿವ್ ವುಲಗು.

ನಿನ್ನೆ ಇದ್ದವ ಇಂದಿಲ್ಲ; ಇಂದುಳ್ಳವ ನಾಳಿಲ್ಲ ಎಂಬ
ಹೆಗ್ಗಳಿಕೆ ಉಂಟು ಈ ನಶ್ವರ ಸಂಸಾರಕೆ. (ಕುರಳ್ 336)

ಒಬ್ಬನು ನೆನ್ನೆ ಜೀವಸಹಿತವಾಗಿದ್ದನು; ಇಂದು ಆ ರೀತಿ ಜೀವ ಸಹಿತ ಬದುಕಿರದೆ ಸತ್ತುಹೋದನೆಂಬ ನೆಲೆ ಇಲ್ಲದ ಹಿರಿಮೆಯನ್ನು ಈ ಲೋಕವು ಪಡೆದಿರುವುದು.

**35. துறவு**

**ತುಱವು – ಸನ್ಯಾಸ**

பற்றுக பற்றற்றான் பற்றினை அப்பற்றைப்
பற்றுக பற்று விடற்கு. (குறள் 350)

ಪಱ್ಱುಗ ಪಱ್ಱಱ್ಱಾನ್ ಪಱ್ಱಿನೈ ಅಪ್ಪಱ್ಱೈಪ್
ಪಱ್ಱುಗ ಪಱ್ಱು ವಿಡಱ್ಕು.

ಪಿಡಿಯವನ ಪಾದಕಮಲವ ಬಯಕೆ ತೊರೆದವನ
ಬಿಗಿಯಾಗಿ ಪಿಡಿದಿರು ಬೇಡಿ ಪಡೆಶಕ್ತಿಯ ಬಿಡಲು ಬಯಕೆಯ. (ಕುರಳ್ 350)

ಸಮಷ್ಟಿ ಜೀವನವೇ ಧ್ಯೇಯವಾದ ದೇವನು, ಸ್ವಭಾವತಃ ಸ್ವಾರ್ಥರಹಿತನು. ನಾವು ಸ್ವಾರ್ಥರಹಿತ ಜೀವನವನ್ನು ಸಾಗಿಸಲು, ಸ್ವಾರ್ಥರಹಿತನಾದ ದೇವನ ಸಂಬಂಧವನ್ನು ಪಡೆದುಕೊಳ್ಳಬೇಕು.

**36. மெய்யுணர்தல்**

**ಮೆಯ್ಯುಣರ್ದಲ್ – ಸತ್ಯಾನ್ವೇಷಣೆ**

எப்பொருள் எத்தன்மைத்து ஆயினும் அப்பொருள்
மெய்ப்பொருள் காண்பது அறிவு. (குறள் 355)

ಎಪ್ಪೊರುಳ್ ಎತ್ತನ್ಮೈತ್ತು ಆಯಿನುಮ್ ಅಪ್ಪೊರುಳ್
ಮೆಯ್ಪ್ಪೊರುಳ್ ಕಾಣ್ಬದು ಅಱಿವು.

ಎಂತೇ ಇರಲಿ, ಹೇಗೇ ಇರಲಿ, ವಸ್ತುವಿನ ಅಂತರಾಳದೊಳು ಹುದುಗಿರುವ
ಸತ್ಯವ ಕಂಡರಿವುದೇ ಜ್ಞಾನವು. (ಕುರಳ್ 355)

ಯಾವ ವಸ್ತು ಯಾವ ಬಗೆಯಲ್ಲಿ ಹೊರಗೆ ತೋರಿದರೂ, ಆ ಹೊರ ತೋರಿಕೆಗೆ ಮರುಳಾಗದೆ ಆ ವಸ್ತುವಿನ ವಾಸ್ತವ ಗುಣವನ್ನು ವಿಮರ್ಶಿಸಿ ಅರಿತುಕೊಳ್ಳುವುದೇ ನಿಜವಾದ ಅರಿವು.

**37. அவா அறுத்தல்**

**ಅವಾ ಅಱುತ್ತಲ್ - ಆಶೆ ನಿರ್ಮೂಲನ**

அவாஎன்ப எல்லா உயிர்க்கும்எஞ் ஞான்றும்
தவாஅப் பிறப்பீனும் வித்து. (குறள் 361)

ಅವಾಎನ್ಬ ಎಲ್ಲಾ ಉಯಿರ್ಕ್ಕುಮ್ಎಞ್ ಞಾನ್ಱುಮ್
ತವಾಅಪ್ ಪಿಱಪ್ಪೀನುಮ್ ವಿತ್ತು.

ಇಚ್ಛೆ ಎಂಬುದು ಎಲ್ಲ ಜೀವರಾಶಿಗಳಿಗೂ
ಪದೇ ಪದೇ ಜನಿಸಿ ದುಃಖಿಪ ಬೀಜವಿದ್ದಂತೆ. (ಕುರಳ್ 361)

ಎಲ್ಲಾ ಜೀವಿಗಳಿಗೂ ಎಲ್ಲಾಕಾಲಗಳಲ್ಲಿಯೂ ತಪ್ಪದೆ ಉಂಟಾಗುತ್ತಿರುವ ಹುಟ್ಟಿನ ವ್ಯಥೆಗಳಿಗೆಲ್ಲ ಆಸೆಯೇ ಬೀಜವೆಂದು ಜ್ಞಾನಿಗಳು ಹೇಳುವರು.

**38. ஊழ்**

**ಊೞ್ - ಪ್ರಾರಬ್ಧ**

ஊழின் பெருவலி யாவுள மற்றொன்று
சூழினும் தான்முந் துறும். (குறள் 380)

ಊೞಿನ್ ಪೆರುವಲಿ ಯಾವುಳ ಮಱ್ಱೊನ್ಱು
ಸೂೞಿನುಮ್ ತಾನ್ಮುನ್ ತುಱುಮ್.

ಕರ್ಮ ಫಲಕ್ಕಿಂತ ಬಲವಂತವಾವುದಿದೆ?
ತಪ್ಪಲು ಉಪಾಯ ಕಂಡರೆ, ಬಿಡದೆ ಬೆನ್ನತ್ತಿ ಬಂದು ಅಡ್ಡಬರುವುದು ಪ್ರಾರಬ್ಧ ಕರ್ಮ. (ಕುರಳ್ 380)

ವಿಧಿಗಿಂತ ಅಧಿಕ ಬಲವಿರುವಿರುವುದು ಬೇರೆ ಯಾವುದಿರುವುದು? ಅದನ್ನು ಮೀರುವುದಕ್ಕಾಗಿ ಬೇರೊಂದು ಮಾರ್ಗವನ್ನು ನೆನೆದರೂ, ಅಲ್ಲಿಗೂ ವಿಧಿಯು ಬಂದು ಅಡ್ಡಿಯುಂಟುಮಾಡುತ್ತದೆ.

# 2 . பொருட்பால்

## ಪೊರುಟ್ಪಾಲ್

## ಅರ್ಥ ಭಾಗ

**39. இறைமாட்சி**

**ಇಱೈಮಾಟ್ಚಿ - ನೃಪನ ಮಹಿಮೆ**

முறைசெய்து காப்பாற்றும் மன்னவன் மக்கட்கு
இறையென்று வைக்கப் படும். (குறள் 388)

ಮುಱೈಸೆಯ್ದು ಕಾಪ್ಪಾಱ್ಱುಮ್ ಮನ್ನವನ್ ಮಕ್ಕಟ್ಕು
ಇಱೈಯೆನ್ಱು ವೈಕ್ಕಪ್ ಪಡುಮ್.

ನೃಪನವನ ಕರ್ತವ್ಯವ ಪಾಲಿಸಿ ಅನವರತ ಪ್ರಜೆಗಳ ಸಂರಕ್ಷಿಸೆ ಜನತೆ ಆ
ನೃಪನ ದೇವನೆಂದು ವಂದಿಪರು. (ಕುರಳ್ 388)

ನ್ಯಾಯ ನೀತಿಗಳಿಂದ ಪ್ರಜಾ ಸಂರಕ್ಷಣೆ ಮಾಡುವ ಅರಸನನ್ನು ಪ್ರಜೆಗಳು ಸಾಕ್ಷಾತ್ ದೇವರೆಂದೇ ಭಾವಿಸಿ ಗೌರವಿಸುವರು.

## 40. கல்வி

**ಕಲ್ವಿ - ಶಿಕ್ಷಣ**

கற்க கசடறக் கற்பவை கற்றபின்
நிற்க அதற்குத் தக. (குறள் 391)

ಕಱ್ಕ ಕಸಡಱಕ್ ಕಱ್ಪವೈ ಕಱ್ಱಪಿನ್
ನಿಱ್ಕ ಅದಱ್ಕುತ್ ತಗ.

ಕಲಿ ಪರಿಪೂರ್ಣವಾಗಿ ಕಲಿಯಲುಚಿತವ
ಕಲಿತು ನೆಲೆಸಿರು ಜೀವಿತವ ಅದರಂತೆ. (ಕುರಳ್ 391)

ಕಲಿಯುವುದಕ್ಕೆ ಯೋಗ್ಯವಾದ ಕೃತಿಗಳನ್ನು ದೋಷವಿಲ್ಲದೆ ಕಲಿತುಕೊಳ್ಳಬೇಕು; ಹಾಗೆ ಕಲಿತ ನಂತರ ಆ ಕಲಿತ ವಿದ್ಯೆಗೆ ತಕ್ಕಂತೆ ನಡೆದುಕೊಳ್ಳಬೇಕು.

## 41. கல்லாமை

**ಕಲ್ಲಾಮೈ – ಕಲಿಯದಿರುವುದು**

விலங்கொடு மக்கள் அனையர் இலங்குநூல்
கற்றாரோடு ஏனை யவர். (குறள் 410)

ವಿಲಙ್ಕೊಡು ಮಕ್ಕಳ್ ಅನೈಯರ್ ಇಲಙ್ಗು ನೂಲ್
ಕಱ್ಱಾರೋಡು ಏನೈ ಯವರ್.

ಮನುಜರ ನಡುವೆ ಮಿಗ ವಿದ್ದಂತೆ
ಅಶಿಕ್ಷಿತನ ಸ್ಥಿತಿ ಕಲಿತವರೊಳು. (ಕುರಳ್ 410)

ವಿದ್ಯಾವಂತರಿಗೂ ಅವಿದ್ಯಾವಂತರಿಗೂ ಇರುವ ಭೇದವು, ಮನುಷ್ಯರಿಗೂ ಮೃಗಗಳಿಗೂ ಇರುವ ಬೇದದಂತೆ.

## 42. கேள்வி

**ಕೇಳ್ವಿ - ಶ್ರವಣ**

செல்வத்துள் செல்வம் செவிச்செல்வம் அச்செல்வம்
செல்வத்துள் எல்லாம் தலை. (குறள் 411)

ಸೆಲ್ವತ್ತುಳ್ ಸೆಲ್ವಮ್ ಸೆವಿಚ್ಚೆಲ್ವಮ್ ಅಚ್ಚೆಲ್ವಮ್
ಸೆಲ್ವತ್ತುಳ್ ಎಲ್ಲಾಮ್ ತಲೈ.

ಸಂಪತ್ತಿನೊಳು ಸಂಪತ್ತು ಶ್ರವಣ ಸಂಪತ್ತು; ಆ ಸಂಪತ್ತು ಸರ್ವ
ಸಂಪತ್ತೊಳು ಉತ್ಕೃಷ್ಟವು. (ಕುರಳ್ 411)

ಕಿವಿಯ ಮೂಲಕ ಕೇಳಿ ಅರಿತುಕೊಳ್ಳುವುದೂ ಒಂದು ವಿದ್ಯೆಯೇ. ಇದು ಐಶ್ವರ್ಯಕ್ಕೆ ಸಮ. ಈ ಐಶ್ವರ್ಯವು ಎಲ್ಲಾ ಐಶ್ವರ್ಯಕ್ಕಿಂತಲೂ ಅತ್ಯಂತ ಶ್ರೇಷ್ಠವಾದದ್ದು.

## 43. அறிவுடைமை

### ಅಱಿವುಡೈಮೈ - ತಿಳುವಳಿಕೆ

எப்பொருள் யார்யார்வாய்க் கேட்பினும் அப்பொருள்
மெய்ப்பொருள் காண்பது அறிவு. (குறள் 423)

ಎಪ್ಪೊರುಳ್ ಯಾರ್ಯಾರ್ವಾಯ್ಕ್ ಕೇಟ್ಪಿನುಮ್ ಅಪ್ಪೊರುಳ್
ಮೆಯ್ಪ್ಪೊರುಳ್ ಕಾಣ್ಬದು ಅಱಿವು.

ಯಾರ್ಯಾರ ಬಾಯಿಂದ ಏನೇ ಕೇಳಲು; ಅದರೊಳು
ಸತ್ಯವ ಕಾಣುವುದು ಅರಿವು. (ಕುರಳ್ 423)

ಯಾವ ವಿಷಯವನ್ನೇ ಆಗಲಿ, ಯಾರಿಂದ ಕೇಳಿ ತಿಳಿದುಕೊಂಡರೂ, ಆ ವಿಷಯದ ಸತ್ಯವನ್ನು ಕಂಡುಕೊಳ್ಳುವುದೇ ಶುದ್ಧವಾದ ಅರಿವು.

## 44. குற்றங்கடிதல்

### ಕುಱ್ಱಙ್ಗಡಿದಲ್ - ದೋಷ ನಿವಾರಣೆ

தன்குற்றம் நீக்கிப் பிறர்குற்றம் காண்கிற்பின்
என்குற்றம் ஆகும் இறைக்கு. (குறள் 436)

ತನ್ಕುಱ್ಱಮ್ ನೀಕ್ಕಿಪ್ ಪಿಱರ್ಕುಱ್ಱಮ್ ಕಾಣ್ಕಿಱ್ಪಿನ್
ಎನ್ಕುಱ್ಱಮ್ ಆಗುಮ್ ಇಱೈಕ್ಕು.

ಪರರ ದೋಷವ ವಿಶ್ಲೇಷಿಸುವ ಮುನ್ನ
ತನ್ನ ದೋಷವ ಕಳೆದಿರೆ ತಾ ನಿಲುವ ನಿರ್ದೋಷಿಯಾಗಿ. (ಕುರಳ್ 436)

ಮೊದಲು ತನ್ನ ದೋಷಗಳನ್ನು ನಿವಾರಿಸಿಕೊಂಡು, ಬೇರೆಯವರ ದೋಷಗಳನ್ನು ಸೂಕ್ಷ್ಮವಾಗಿ ತಿಳಿಯಬಲ್ಲ ಅರಸನಿಗೆ ಬೇರೆ ಯಾವ ದೋಷಗಳು ಬಾದಿಸುವುದಿಲ್ಲ.

## 45. பெரியாரைத் துணைக்கோடல்

### ಪೆರಿಯಾರೈತ್ ತುಣೈಕ್ಕೋಡಲ್ - ಹಿರಿಯರ ಹಿತವಚನ

இடிப்பாரை இல்லாத ஏமரா மன்னன்
கெடுப்பார் இலானும் கெடும். (குறள் 448)

ಇಡಿಪ್ಪಾರೈ ಇಲ್ಲಾದ ಏಮರಾ ಮನ್ನನ್
ಕೆಡುಪ್ಪಾರ್ ಇಲಾನುಮ್ ಕೆಡುಮ್.

ಖಂಡಿಸಿ ಸಚೇತಗೊಳಿಪ ಸಚಿವನಿಲ್ಲದಿರೆ ಅರಸಗೆ
ಪರ ಶತ್ರು ಬೇಕಿಲ್ಲ ವಿನಾಶಗೊಳಿಸಲು. (ಕುರಳ್ 448)

ಅಪರಾಧಗಳನ್ನು ಖಂಡಿಸಿ ಹಿತೋಪದೇಶ ಹೇಳಿ ರಕ್ಷಿಸಬಲ್ಲ ಪ್ರಜ್ಞಾವಂತರ ಆಶ್ರಯವಿಲ್ಲದ ಅರಸನು, ಶತ್ರುಗಳಿಲ್ಲದೆಯೂ ನಾಶವಾಗುವನು.

**46. சிற்றினம் சேராமை**

**ಸಿಱ್ಱಿನಮ್ ಸೇರಾಮೈ - ಕುಸಂಗ ವರ್ಜನ**

நிலத்தியல்பால் நீர்திரிந்து அற்றாகும் மாந்தர்க்கு
இனத்தியல்ப தாகும் அறிவு. (குறள் 452)

ನಿಲತ್ತಿಯಲ್ಪಾಲ್ ನೀರ್ತಿರಿನ್ದು ಅಱ್ಱಾಗುಮ್ ಮಾನ್ದರ್ಕ್ಕು
ಇನತ್ತಿಯಲ್ಪ ದಾಗುಮ್ ಅಱಿವು.

ನೆಲದ ಮಣ್ಣಿನ ಗುಣವ ನೀರು ತಾಕೊಂಬಂತೆ

ಸೇರುವವರ ಗುಣ ಕೊಳುವ ಮಾನವ. (ಕುರಳ್ 452)

ತಾನು ಸೇರಿದ ನೆಲದ ಗುಣಕ್ಕೆ ತಕ್ಕಂತೆ ನೀರಿನ ಬಣ್ಣ ರುಚಿಗಳು ಬದಲಾಗುತ್ತವೆ. ಅದರಂತೆ ಒಬ್ಬ ಮನುಷ್ಯನ ಯೋಗ್ಯತೆ ಅವನು ಸೇರಿರುವ ಸ್ನೇಹಿತರಿಂದ ಗೊತ್ತಾಗುತ್ತದೆ.

**47. தெரிந்து செயல்வகை**

**ತೆರಿನ್ದು ಸೆಯಲ್ವಗೈ - ಸುವಿಚಾರಿತ ಕಾರ್ಯಕುಶಲತೆ**

எண்ணித் துணிக கருமம் துணிந்தபின்
எண்ணுவம் என்பது இழுக்கு. (குறள் 467)

ಎಣ್ಣಿತ್ ತುಣಿಗ ಕರುಮಮ್ ತುಣಿನ್ದಪಿನ್
ಎಣ್ಣುವಮ್ ಎನ್ಪದು ಇೞುಕ್ಕು.

ಯೋಚಿಸಿ ಧೈರ್ಯಗೆಡದೆ ಎಸಗು ಕರ್ಮವ; ಧೈರ್ಯದಿ ತೊಡಗಿ

ಚಿಂತಿಸುವೆನೆಂಬುದು ಇಳಿಪು. (ಕುರಳ್ 467)

ಮಾಡಬೇಕಾಗಿರುವ ಕಾರ್ಯವನ್ನು ಮತ್ತು ಅದನ್ನು ಮಾಡಿ ಮುಗಿಸುವ ಮಾರ್ಗವನ್ನು ಚೆನ್ನಾಗಿ ಆಲೋಚಿಸಿದ ಬಳಿಕವೇ ಆರಂಭಿಸಬೇಕು. ಆರಂಭಿಸಿದ ಮೇಲೆ ಅದರ ಬಗ್ಗೆ ಆಲೋಚಿಸೋಣ ಎನ್ನುವುದು ಶುದ್ಧತಪ್ಪು.

**48. வலியறிதல்**

**ವಲಿಯಱಿದಲ್ - ಶಕ್ತಿಯ ಅರಿವು**

வினைவலியும் தன்வலியும் மாற்றான் வலியும்
துணைவலியும் தூக்கிச் செயல். (குறள் 471)

ವಿನೈವಲಿಯುಮ್ ತನ್ವಲಿಯುಮ್ ಮಾಱ್ಱಾನ್ ವಲಿಯುಮ್
ತುಣೈವಲಿಯುಮ್ ತೂಕ್ಕಿಚ್ ಸೆಯಲ್.

ನಿಜಬಲ, ರಿಪುಬಲ, ಕಾರ್ಯಬಲ, ಸ್ವಜನರ ಬಲವ

ತೂಗಿ ನೋಡಿ ಮಾಳ್ಪುದು. (ಕುರಳ್ 471)

ಅರಸನು ತನ್ನ ಕಾರ್ಯ ಆರಂಭಿಸುವ ಮುನ್ನ ಆ ಕಾರ್ಯದ ಬಲವನ್ನೂ, ತನ್ನ ಬಲವನ್ನೂ, ಶತ್ರುವಿನ ಬಲವನ್ನೂ, ಎರಡು ಪಕ್ಷಗಳ ಸಹಾಯಕರ ಬಲವನ್ನೂ ಪರಿಶೀಲಿಸಬೇಕು.

## 49. காலமறிதல்

**ಕಾಲಮಱಿದಲ್ – ಕಾಲವರಿವದು**

கொக்கொக்க கூம்பும் பருவத்து மற்றதன்
குத்தொக்க சீர்த்த இடத்து. (குறள் 490)

ಕೊಕ್ಕೊಕ್ಕ ಕೂಮ್ಬುಮ್ ಪರುವತ್ತು ಮಱ್ಱದನ್
ಕುತ್ತೊಕ್ಕ ಸೀರ್ತ್ತ ಇಡತ್ತು.

ಕೊಕ್ಕರೆಯಂತೆ ಕಾಯಬೇಕು ಪ್ರತಿಕೂಲವಾದಂದು ಮತ್ತದು
ಕುಕ್ಕುವಂತಿರಬೇಕು ಅನುಕೂಲ ಒದಗಿದಂದು. (ಕುರಳ್ 490)

ಕಾರ್ಯೋನ್ಮುಖರಾದ ಕಾಲದಲ್ಲಿ ಕೊಕ್ಕರೆಯಂತೆ ಸಂಯಮದಿಂದ ಕಾಯುತ್ತಿರಬೇಕು. ಸೂಕ್ತ ಸಂದರ್ಭ ಒದಗಿ ಬಂದಾಗ ಅದು ಮೀನನ್ನು ಕುಕ್ಕುವಂತೆ ಕಾರ್ಯವನ್ನು ಮಾಡಿಮುಗಿಸಬೇಕು.

## 50. இடனறிதல்

**ಇಡನಱಿದಲ್ - ಸ್ಥಳ ಪರಿಜ್ಞಾನ**

நெடும்புனலுள் வெல்லும் முதலை அடும்புனலின்
நீங்கின் அதனைப் பிற. (குறள் 495)

ನೆಡುಮ್ಬುನಲುಳ್ ವೆಲ್ಲುಮ್ ಮುದಲೈ ಅಡುಮ್ಬುನಲಿನ್
ನೀಙ್ಗಿನ್ ಅದನೈಪ್ ಪಿಱ.

ಮಡುವಿನಲಿ ಗೆಲುವುದು ಮೊಸಳೆ; ಅದು ಹೊರಬರಲು
ಮಡುವ ಬಿಟ್ಟು, ಗೆಲುವವು ಬೇರೆಯವು. (ಕುರಳ್ 495)

ಆಳವಾದ ನೀರಿರುವ ಸ್ಥಳದಲ್ಲಿ ಮೊಸಳೆಯು ಎಲ್ಲಾ ಮೃಗಗಳನ್ನು ಕೊಲ್ಲುವುದು. ನಿರನ್ನು ಬಿಟ್ಟು ಅದು ಹೊರಗೆ ಬಂದರೆ ಅದನ್ನು ಉಳಿದ ಮೃಗಗಳು ಸುಲಭದಲ್ಲಿ ಗೆಲ್ಲುವುವು.

## 51. தெரிந்து தெளிதல்

**ತೆರಿನ್ದು ತೆಳಿದಲ್ – ನಿಷ್ಠೆಯ ಪರೀಕ್ಷೆ**

குணம்நாடிக் குற்றமும் நாடி அவற்றுள்
மிகைநாடி மிக்க கொளல். (குறள் 504)

ಗುಣಮ್ನಾಡಿಕ್ ಕುಱ್ಱಮುಮ್ ನಾಡಿ ಅವಱ್ಱುಳ್
ಮಿಗೈನಾಡಿ ಮಿಕ್ಕ ಕೊಳಲ್.

ಗುಣವರಸಿ ಕುಂದನೂ ಅರಸಿ ಅದರೊಳು
ಮಿಗೆಯರಸಿ ಮಿಕ್ಕು ಕೊಳ್ವದು. (ಕುರಳ್ 504)

ಒಬ್ಬನ ಗುಣ, ದೋಷಗಳನ್ನು ಪರೀಕ್ಷಿಸಿ, ಅವನಲ್ಲಿ ವಿಶಿಷ್ಟ ಗುಣಗಳೇನೆಂಬುದು ವಿಚಾರಿಸಿ, ಅವುಗಳಿಂದ ಅರ್ಹತೆಯನ್ನು ಕುರಿತು ತೀರ್ಮಾನಕ್ಕೆ ಬರಬೇಕು.

**52. தெரிந்து வினையாடல்**

**ತೆರಿನ್ದು ವಿನೈಯಾಡಲ್ - ಅರಿಸಿ ಕಾರ್ಯ ಹೇರಿಕೆ**

இதனை இதனால் இவன்முடிக்கும் என்றாய்ந்து
அதனை அவன்கண் விடல். (குறள் 517)

ಇದನೈ ಇದನಾಲ್ ಇವನ್ಮುಡಿಕ್ಕುಮ್ ಎನ್ರಾಯ್ನ್ದು
ಅದನೈ ಅವನ್ಕಣ್ ವಿಡಲ್.

ಇದನು ಇದರಿಂದ ಇವನು ಸಂಪೂರ್ಣಗೊಳಿಸುವ ಕ್ಷಮತೆಯುಳ್ಳವನೆಂದರಿತು
ಅದನು ಅವನ ನಿರ್ವಾಹಕೆ ಒಪ್ಪಿಸು. (ಕುರಳ್ 517)

ಇಂಥವನು ಇಂತಹ ಕಾರ್ಯವನ್ನು ಇಂತಹ ಬಗೆಯಲ್ಲಿ ಮಾಡಿ ಮುಗಿಸಬಲ್ಲನೆಂಬುದನ್ನರಿತ ಬಳಿಕ ಆ ಕಾರ್ಯವನ್ನು ಅವನಿಗೆ ಒಪ್ಪಿಸಬೇಕು.

**53. சுற்றந்தழால்**

**ಸುಱ್ಱನ್ದಟಾಲ್ - ಬಂಧುಗಳ ಕಾಯುವುದು**

காக்கை கரவா கரைந்துண்ணும் ஆக்கமும்
அன்னநீ ரார்க்கே உள. (குறள் 527)

ಕಾಕ್ಕೈ ಕರವಾ ಕರೈನ್ದುಣ್ಣುಮ್ ಆಕ್ಕಮುಮ್
ಅನ್ನನೀ ರಾರ್ಕ್ಕೇ ಉಳ.

ಕಾಗೆಯೂ ಕರೆದು ಉಣುವಂತೆ ಸ್ವಜನರೊಳು ಹಂಚಿ
ಉಂಡವನ ಸಂಪತ್ತು ಅಕ್ಷಯವಾಗುವುದು. (ಕುರಳ್ 527)

ಕಾಗೆಯು ತನಗೆ ದೊರೆತ ಆಹಾರವನ್ನು ಬಚ್ಚಿಡದೆ ತನ್ನ ಬಳಗವನ್ನೆಲ್ಲಾ ಕೂಗಿ ಕರೆದು ಉಣ್ಣುವುದು. ಐಶ್ವರ್ಯವು ಅಂತಹ ಉದಾರಗುಣವುಳ್ಳವನಲ್ಲಿ ಮಾತ್ರ ಬಂದು ಸೇರುತ್ತದೆ.

**54. பொச்சாவாமை**

**ಪೊಚ್ಚಾವಾಮೈ - ಕರ್ತವ್ಯವ ಮರೆಯದಿರುವಿಕೆ**

முன்னுறக் காவாது இழுக்கியான் தன்பிழை
பின்னூறு இரங்கி விடும். (குறள் 535)

ಮುನ್ನುಱಕ್ ಕಾವಾದು ಇಟುಕ್ಕಿಯಾನ್ ತನ್ಪಿಟೈ
ಪಿನ್ನೂಱು ಇರಙ್ಗಿ ವಿಡುಮ್.

ಮುಂಬರುವ ಸಂಕಟವ ಊಹಿಸಿ ಕಾದುಕೊಳದೆ ಮರೆತವನು
ಹಿಂಬರುವದು ಪಶ್ಚಾತ್ತಾಪ; ನೆರೆಯದ ಕರ್ತವ್ಯವ ನೆನೆದು. (ಕುರಳ್ 535)

ಮುಂದೆ ಸಂಭವಿಸುವ ಅಡ್ಡಿ ಆತಂಕಗಳನ್ನು ಮೊದಲೇ ಅರಿತು ತನ್ನನ್ನು ರಕ್ಷಿಸಿಕೊಳ್ಳದೆ ಮರೆತವನು, ಅನಂತರ ತನ್ನ ಅಪರಾಧವನ್ನು ಚಿಂತಿಸಿ ದುಃಖಿಸುವನು.

## 55. செங்கோன்மை

**ಸೆಙ್ಕೋನ್ಮೈ – ಸುಶಾಸನ**

வான்நோக்கி வாழும் உலகெல்லாம் மன்னவன்
கோல்நோக்கி வாழும் குடி. (குறள் 542)

ವಾನ್ನೋಕ್ಕಿ ವಾಟುಮ್ ಉಲಕೆಲ್ಲಾಮ್ ಮನ್ನವನ್
ಕೋಲ್ನೋಕ್ಕಿ ವಾಟುಮ್ ಕುಡಿ.

ಅಪೇಕ್ಷಿಸಿ ಮಳೆಯ, ನೋಡುವರು ಆಕಾಶವ ಜಗದಿ
ಅಪೇಕ್ಷಿಸಿ ಸುಶಾಸನವ ನೋಡುವನು ಅರಸನೊಳು ಪ್ರಜೆ. (ಕುರಳ್ 542)

ಜಗತ್ತಿನ ಜೀವರಾಶಿಗಳೆಲ್ಲಾ ಆಹಾರವನ್ನು ನೀಡುವ ಮಳೆಯನ್ನು ನಿರೀಕ್ಷಿಸಿ ಬಾಳುತ್ತಿರುವವು; ಅದರಂತೆ ಪ್ರಜೆಗಳೆಲ್ಲರೂ ರಾಜನ ನ್ಯಾಯಾಡಳಿತವನ್ನು ನಿರೀಕ್ಷಿಸಿ ಬಾಳುತ್ತಿರುವರು.

## 56. கொடுங்கோன்மை

**ಕೊಡುಙ್ಕೋನ್ಮೈ - ನಿರಂಕುಶ ಶಾಸನ**

அல்லற்பட்டு ஆற்றாது அழுதகண் ணீரன்றே
செல்வத்தைத் தேய்க்கும் படை. (குறள் 555)

ಅಲ್ಲಱ್ಪಟ್ಟು ಆಱ್ಱಾದು ಅಟುದಕಣ್ ಣೀರನ್ಱೇ
ಸೆಲ್ವತ್ತೈತ್ ತೇಯ್ಕ್ಕುಮ್ ಪಡೈ.

ಅತ್ಯಾಚಾರದಿಂದ ಪೀಡಿತ ಪ್ರಜೆಯ ನಿಟ್ಟುಸಿರ ಕಣ್ಣೀರು
ಅಂದೇ ಅಳಿಪದು ಸಮೃದ್ಧಿಯನು. (ಕುರಳ್ 555)

ದಬ್ಬಾಳಿಕೆ ನಡೆಸುವ ರಾಜನ ಕ್ರೌರ್ಯಕ್ಕೆ ಒಳಗಾದ ಪ್ರಜೆಗಳ ದುಃಖದ ಕಣ್ಣೀರೇ, ಆ ರಾಜನ ಆಳ್ವಿಕೆಯನ್ನೂ ವೈಭವವನ್ನೂ ನಾಶಮಾಡುವ ಆಯುಧವಾಗುವುದು.

## 57. வெருவந்த செய்யாமை

**ವೆರುವನ್ದ ಸೆಯ್ಯಾಮೈ - ಭಯಂಕರ ಕಾರ್ಯ ಮಾಡದಿರುವುದು**

தக்காங்கு நாடித் தலைச்செல்லா வண்ணத்தால்
ஒத்தாங்கு ஒறுப்பது வேந்து. (குறள் 561)

ತಕ್ಕಾಙ್ಕು ನಾಡಿತ್ ತಲೈಚ್ಚೆಲ್ಲಾ ವಣ್ಣತ್ತಾಲ್
ಒತ್ತಾಙ್ಕು ಒಱುಪ್ಪದು ವೇನ್ದು.

ಅಪರಾಧಿಯನು ಯೋಗ್ಯ ದೊರೆ ವಿಚಾರಿಸಿ ದಂಡಿಸಲು; ಅವನೆಸಗನು
ಅಪರಾಧವ ಮರೆತೂ. (ಕುರಳ್ 561)

ಒಬ್ಬನು ಒಂದು ಅಪರಾಧ ಮಾಡಿದರೆ ಅದನ್ನು ಸೂಕ್ತರೀತಿಯಲ್ಲಿ ಪರಿಶೀಲಿಸಿ, ಪುನಃ ಆ ಅಪರಾಧವನ್ನು ಮಾಡದಂತೆ ತಕ್ಕ ಶಿಕ್ಷೆಯನ್ನು ವಿಧಿಸುವವನೇ ಅರಸನಾಗಲು ಅರ್ಹನು.

## 58. கண்ணோட்டம்

**ಕಣ್ಣೋಟ್ಟಮ್ - ಕೃಪಾದೃಷ್ಟಿ**

பெயக்கண்டும் நஞ்சுண்டு அமைவர் நயத்தக்க
நாகரிகம் வேண்டு பவர். (குறள் 580)

ಪೆಯಕ್ಕಣ್ಡುಮ್ ನಞ್ಜುಣ್ಡು ಅಮೈವರ್ ನಯತ್ತಕ್ಕ
ನಾಗರಿಗಮ್ ವೇಣ್ಡು ಪವರ್.

ವೈರ ಭಾವದಿ ಕೊಟ್ಟ ನಂಜನ್ನೂ ಉಣುವರು
ಸದ್ಗುಣಿ, ಶೀಲಸಂಪನ್ನನೆಂದು ಗಣಿಸಿರೆ. (ಕುರಳ್ 580)

ಎಲ್ಲರೂ ಮೆಚ್ಚುವಂಥ ಕೃಪಾದೃಷ್ಟಿ ಎಂಬ ನಾಗರಿಕ ಗುಣವನ್ನು ಬಯಸುವವರು, ತಮ್ಮ ಆಪ್ತ ಸ್ನೇಹಿತರೇ ವಿಷ ಕೊಟ್ಟರೂ ಅದನ್ನುಂಡು ಸಂತೃಪ್ತಿ ಹೊಂದುವರು.

## 59. ஒற்றாடல்

**ಒಱ್ಱಾಡಲ್ - ಗುಪ್ತಚರ ವ್ಯವಸ್ಥೆ**

ஒற்றும் உரைசான்ற நூலும் இவையிரண்டும்
தெற்றென்க மன்னவன் கண். (குறள் 581)

ಒಱ್ಱುಮ್ ಉರೈಸಾನ್ಱ ನೂಲುಮ್ ಇವೈಯಿರಣ್ಡುಮ್
ತೆಱ್ಱೆನ್ಗ ಮನ್ನವನ್ ಕಣ್.

ಗುಪ್ತಚರ್ಯೆ ಪ್ರಾಮಾಣಿಕ ನೀತಿ ಗ್ರಂಥ ಈ ಎರಡೂ
ಶಾಸಕನ ಎರಡು ನಯನಗಳು. (ಕುರಳ್ 581)

ಬೇಹುಗಾರಿಕೆಯನ್ನೂ ಪ್ರಸಿದ್ಧಿ ಪಡೆದ ರಾಜನೀತಿ ಶಾಸ್ತ್ರವನ್ನೂ ಅರಸನು ತನ್ನ ಎರಡು ಕಣ್ಣುಗಳೆಂದು ಭಾವಿಸಬೇಕು.

## 60. ஊக்கமுடைமை

**ಊಕ್ಕಮುಡೈಮೈ - ಉತ್ಸಾಹ ಸಂಪನ್ನತೆ**

வெள்ளத் தனைய மலர்நீட்டம் மாந்தர்தம்
உள்ளத் தனையது உயர்வு. (குறள் 595)

ವೆಳ್ಳತ್ ತನೈಯ ಮಲರ್ನೀಟ್ಟಮ್ ಮಾನ್ದರ್ತಮ್
ಉಳ್ಳತ್ ತನೈಯದು ಉಯರ್ವು.

ತಾವರೆ ದಂಟಿನ ನೀಳವನಳೆದು ಕೊಳದ ಆಳವ ಅರಿಯುವಂತೆ
ಅವರವರ ಮಹತ್ವಕ್ಕೆ, ಮನದ ಉತ್ಸಾಹವೇ ಅಳತೆಗೋಲು. (ಕುರಳ್ 595)

ನೀರಿನಲ್ಲಿ ಬೆಳೆಯುವ ಹೂವುಗಳ ಕಾಂಡಗಳ ನೀಳವು, ಆ ನೀರಿನ ಆಳಕ್ಕೆ ಅನುಗುಣವಾಗಿರುತ್ತದೆ; ಮನುಷ್ಯರ ಹಿರಿಮೆ ಆಳವು ಕೂಡ ಅವರ ಸಾಮರ್ಥ್ಯದ ಆಳಕ್ಕೆ ಅನುಗುಣವಾಗಿರುತ್ತದೆ.

**61. மடியின்மை**

**ಮಡಿಯಿನ್ಮೈ - ಆಲಸ್ಯ ಹೀನತೆ**

நெடுநீர் மறவி மடிதுயில் நான்கும்
கெடுநீரார் காமக் கலன். (குறள் 605)

ನೆಡುನೀರ್ ಮಱವಿ ಮಡಿತುಯಿಲ್ ನಾನ್ಕುಮ್
ಕೆಡುನೀರಾರ್ ಕಾಮಕ್ ಕಲನ್.

ಆಲಸ್ಯ, ಕಾಲಕಳೆಯುವಿಕೆ ವಿಸ್ಮೃತಿ ಮತ್ತು ನಿದ್ರೆ ಇವು ನಾಲ್ಕು
ಬುದ್ಧಿಹೀನರ ನೌಕೆಯು, ಅವರ ದೂಡುವುದು ವಿನಾಶ ಮಾರ್ಗದಲಿ. (ಕುರಳ್ 605)

ಕಾಲಹರಣ, ಮರೆವು, ಆಲಸ್ಯ ಹಾಗೂ ಅತಿನಿದ್ರೆ-ಈ ನಾಲ್ಕೂ ಕೆಡುವ ಸ್ವಭಾವವುಳ್ಳವರು ಬಯಸಿ ಏರುವ ಮೋಹಕ ನಾವೆಯಾಗುವುದು.

**62. ஆள்வினையுடைமை**

**ಆಳ್ವಿನೈಯುಡೈಮೈ - ಉದ್ಯಮಶೀಲತೆ**

அருமை உடைத்தென்று அசாவாமை வேண்டும்
பெருமை முயற்சி தரும். (குறள் 611)

ಅರುಮೈ ಉಡೈತ್ತೆನ್ಱು ಅಸಾವಾಮೈ ವೇಣ್ಡುಮ್
ಪೆರುಮೈ ಮುಯಱ್ಚಿ ತರುಮ್.

ತ್ಯಜಿಸದಿರು ಕಾರ್ಯವ ಅಸಂಭವವೆಂದು; ಪ್ರಯತ್ನವೇ
ಕಾರ್ಯಕ್ಷಮತೆಯಾಗಿ ಪೊಗಳ ತರುವುದು. (ಕುರಳ್ 611)

ಇದು ಮಾಡಿ ಮುಗಿಸಲು ಕಷ್ಟವಾದುದು ಎಂದು ಭಾವಿಸಿ ಒಬ್ಬನು ಅಧೀರತೆಗೊಳಗಾಗಬಾರದು; ಪ್ರಯತ್ನದಿಂದ ಹಿರಿಮೆಯು ಲಭಿಸುತ್ತದೆ.

63. **இடுக்கணழியாமை**

**ಇಡುಕ್ಕಣ್ ಅೞಿಯಾಮೈ - ಬಾಧೆಗಳು ಬಂದರೆ ಅಚಲನಾಗಿರ್ಪುದು**

இடுக்கண் வருங்கால் நகுக அதனை
அடுத்தூர்வது அஃதொப்பது இல். (குறள் 621)

ಇಡುಕ್ಕಣ್ ವರುಙ್ಗಾಲ್ ನಗುಗ ಅದನೈ
ಅಡುತ್ತೂರ್ವದು ಅಃದೊಪ್ಪದು ಇಲ್.

ಎಡರು ಬರಲು ನಗಾಡು ಅದ
ಅಂಟಿ ಬರುವ ಸಂಕಟವ ದಾಟಲು ಮಾರ್ಗ ಬೇರಿಲ್ಲ. (ಕುರಳ್ 621)

ಆಪತ್ತು ಬಂದಾಗ ಅದಕ್ಕಾಗಿ ವ್ಯಥೆಪಡದೆ ನಗುತ್ತಿರಬೇಕು; ಅದನ್ನು ಎದುರಿಸಿ ಗೆಲ್ಲುವ ಮಾರ್ಗ ಅದರಂತೆ ಬೇರೊಂದಿಲ್ಲವೆಂಬುದನ್ನು ತಿಳಿಯಬೇಕು.

## 64. அமைச்சு

### ಅಮೈಚ್ಚು - ಅಮಾತ್ಯತೆ

கருவியும் காலமும் செய்கையும் செய்யும்
அருவினையும் மாண்டது அமைச்சு. (குறள் 631)

ಕರುವಿಯುಮ್ ಕಾಲಮುಮ್ ಸೆಯ್ಕೈಯುಮ್ ಸೆಯ್ಯುಮ್
ಅರುವಿನೈಯುಮ್ ಮಾಣ್ಡದು ಅಮೈಚ್ಚು.

ಅಮೂಲ್ಯ ಸಲಹೆಯ ತಕ್ಕ ತರುಣದೊಳು ಕೊಟ್ಟು
ಕಾಲವರಿತು ಕೈಂಕರ್ಯವೆಸಗುವವನೇ ಅಮಾತ್ಯನು. (ಕುರಳ್ 631)

ಒಂದು ಕಾರ್ಯವನ್ನು ಮಾಡುವಾಗ ತಕ್ಕ ಸಾಧನ, ತಕ್ಕ ಕಾಲ, ಮಾಡಿಮುಗಿಸುವ ವಿಧಾನ ಮತ್ತು ಫಲ ತರುವ ಕಷ್ಟ ಕಾರ್ಯವನ್ನು ನಿರ್ಧರಿಸಿ ಅದನ್ನು ಯಶಸ್ವಿಗೊಳಿಸಬಲ್ಲವನೇ ಮಂತ್ರಿಯಾಗಲು ಅರ್ಹನು.

## 65. சொல்வன்மை

### ಸೊಲ್ವನ್ಮೈ - ವಾಕ್ಪಟುತ್ವ

சொல்லுக சொல்லைப் பிறிதோர்சொல் அச்சொல்லை
வெல்லும்சொல் இன்மை அறிந்து. (குறள் 645)

ಸೊಲ್ಲುಗ ಸೊಲ್ಲೈಪ್ ಪಿಱಿದೋರ್ಸೊಲ್ ಅಚ್ಚೊಲ್ಲೈ
ವೆಲ್ಲುಮ್ಸೊಲ್ ಇನ್ಮೈ ಅಱಿನ್ದು.

ಸೊಲ್ಲು ಸೊಲ್ಲನು ಬೇರೊಂದು ಸೊಲ್ಲು ಆ
ಸೊಲ್ಲ ಗೆಲುವ ಸೊಲ್ಲಲ್ಲವೆಂದರಿತು. (ಕುರಳ್ 645)

ಬೇರೊಬ್ಬರು ತಮ್ಮ ಮಾತನ್ನು ಎದುರಾಡಿ ಗೆಲ್ಲಲಾರರು ಎಂಬುದನ್ನು ಅರಿತುಕೊಂಡೇ ಹೇಳಬೇಕೆನಿಸಿದ ಮಾತನ್ನು ಆಡಬೇಕು.

## 66. வினைத்தூய்மை

### ವಿನೈತ್ತೂಯ್ಮೈ - ಕರ್ಮಶುದ್ಧಿ

ஈன்றாள் பசிகாண்பான் ஆயினும் செய்யற்க
சான்றோர் பழிக்கும் வினை. (குறள் 656)

ಈನ್ಱಾಳ್ ಪಸಿಕಾಣ್ಬಾನ್ ಆಯಿನುಮ್ ಸೆಯ್ಯಱ್ಕ
ಸಾನ್ಱೋರ್ ಪೞಿಕ್ಕುಮ್ ವಿನೈ.

ಹೆತ್ತವಳು ಸೊರಗಲು ಹಸಿವಿನಿಂದ; ಮಾಡರು
ಸಜ್ಜನರು ನಿಂದಿತ ಕರ್ಮವ. (ಕುರಳ್ 656)

ಹಡೆದ ತಾಯಿಯ ಹಸಿವಿನ ಬಾಧೆಯನ್ನು ಕಂಡು ದುಃಖಿಸುವಂಥಾದರೂ, ಉತ್ತಮರು ಖಂಡಿಸಿದ ದುಷ್ಟ ಕಾರ್ಯಗಳನ್ನು ಮಾಡದಿರಬೇಕು.

## 67. வினைத்திட்பம்

**ವಿನೈತ್ತಿಟ್ಟಮ್ - ಕರ್ಮದೊಳು ದೃಢತೆ**

எண்ணிய எண்ணியாங்கு எய்துப எண்ணியார்
திண்ணியர் ஆகப் பெறின். (குறள் 666)

ಎಣ್ಣಿಯ ಎಣ್ಣಿಯಾಙ್ಗು ಎಯ್ದುಬ ಎಣ್ಣಿಯಾರ್
ತಿಣ್ಣಿಯರ್ ಆಗಪ್ ಪೆಱಿನ್.

ಸಂಕಲ್ಪಿಸಿದ ವಸ್ತುವೆಲ್ಲವನೂ ಸಂಕಲ್ಪಿಸಿದಂತೆ
ಸಂಕಲ್ಪಿಕನು ಪಡೆಯಲು ಅದುವೇ ದೃಢ ಸಂಕಲ್ಪ. (ಕುರಳ್ 666)

ಒಂದು ಕಾರ್ಯವನ್ನು ಸಾಧಿಸಲು ಸಂಕಲ್ಪಿಸಿರುವವರು ಮನೋಸ್ಥೈರ್ಯವುಳ್ಳವರಾದರೆ, ತಮ್ಮ ಸಂಕಲ್ಪದಂತೆಯೇ ಅದನ್ನು ಸಾಧಿಸಿ ಅದರಲ್ಲಿ ಸಂಪೂರ್ಣ ಯಶಸ್ವಿಯನ್ನು ಕಾಣುವರು.

## 68. வினைசெயல்வகை

**ವಿನೈಸೆಯಲ್ವಗೈ - ಕಾರ್ಯಪ್ರಣಾಳಿ**

தூங்குக தூங்கிச் செயற்பால தூங்கற்க
தூங்காது செய்யும் வினை. (குறள் 672)

ತೂಙ್ಗುಗ ತೂಙ್ಗಿಚ್ ಸೆಯಱ್ಪಾಲ ತೂಙ್ಗಱ್ಕ
ತೂಙ್ಗಾದು ಸೆಯ್ಯುಮ್ ವಿನೈ.

ತಳ್ಳಿಡಿಪ ಕಾರ್ಯವ ತಳ್ಳಿಹಾಕಿ
ತಳ್ಳಿಡಿಸ ಒಲ್ಲದನು ತ್ವರತೆಯಿಂ ಪೂರೈಸು. (ಕುರಳ್ 672)

ಕಾಲವಿಳಂಬ ಮಾಡಿ ಮಾಡಬೇಕಾದ ಕಾರ್ಯವನ್ನು ಕಾಲವಿಳಂಬ ಮಾಡಿಯೇ ಮಾಡಬೇಕು. ಕಾಲವಿಳಂಬ ಮಾಡಬಾರದ ಕಾರ್ಯವನ್ನು ಕಾಲವಿಳಂಬ ಮಾಡದಯೇ ಮಾಡಬೇಕು.

## 69. தூது

**ತೂದು - ದೌತ್ಯ**

இறுதி பயப்பினும் எஞ்சாது இறைவற்கு
உறுதி பயப்பதாம் தூது. (குறள் 690)

ಇಱುದಿ ಪಯಪ್ಪಿನುಮ್ ಎಞ್ಚಾದು ಇಱೈವಱ್ಕು
ಉಱುದಿ ಪಯಪ್ಪದಾಮ್ ತೂದು.

ಪ್ರಾಣಭಯವ ತೊರೆದು ಸಾಹಸಿಯಾಗಿ
ತನ್ನ ಸ್ವಾಮಿಯ ಹಿತದೊಳು ಗುರಿಯಾಗಿರುವವನೇ ಸಫಲ ದೂತ. (ಕುರಳ್ 690)

ತನ್ನ ಪ್ರಾಣಕ್ಕೆ ಅಪಾಯವುಂಟಾಗುವ ಸ್ಥಿತಿ ಒದಗಿದರೂ, ಪ್ರಾಣಭಯದಿಂದ ಕರ್ತವ್ಯಭ್ರಷ್ಟನಾಗದೆ ತನ್ನ ರಾಜನಿಗೆ ನಲ್ಮೆ ತರಬಲ್ಲವನೇ ದೂತನೆನಿಸಿಕೊಳ್ಳಲು ಯೋಗ್ಯನು.

## 70. மன்னரைச் சேர்ந்தொழுகல்

### ಮನ್ನರೈಚ್ ಸೇರ್ನ್ದೊಟುಗಲ್ - ರಾಜ ಸಭೆಯಲಿ ವರ್ತನೆ

அகலாது அணுகாது தீக்காய்வார் போல்க
இகல்வேந்தர்ச் சேர்ந்தொழுகு வார். (குறள் 691)

ಅಗಲಾದು ಅಣುಕಾದು ತೀಕ್ಕಾಯ್ವಾರ್ ಪೋಲ್ಕ
ಇಗಲ್ವೇನ್ದರ್ಚ್ ಸೇರ್ನ್ದೊಟುಗು ವಾರ್.

ಅಗಲದೆ ಅಣುಗದೆ ಕೆಂಡ ಕಾಯ್ದಿಡುವಂದದಲಿ
ಭಾವ ಬದಲಿಪ ಅರಸನ ಓಲೈಸು. (ಕುರಳ್ 691)

ಚಂಚಲಗುಣವುಳ್ಳ ಅರಸರನ್ನು ಆಶ್ರಯಿಸಿ ಬಾಳುವವರು, ಅವರಿಂದ ಅತಿದೂರವಿರದೆ ಅತಿಸಮೀಪವಿರದೆ ಚಳಿಗಾಲದಲ್ಲಿ ಬೆಂಕಿ ಕಾಯಿಸಿಕೊಳ್ಳುವವರಂತೆ ನಡೆದುಕೊಳ್ಳಬೇಕು.

## 71. குறிப்பறிதல்

### ಕುಱಿಪ್ಪಱಿದಲ್ – ಮನವರಿವದು

அடுத்தது காட்டும் பளிங்குபோல் நெஞ்சம்
கடுத்தது காட்டும் முகம். (குறள் 706)

ಅಡುತ್ತದು ಕಾಟ್ಟುಮ್ ಪಳಿಙ್ಗು ಪೋಲ್ ನೆಞ್ಜಮ್
ಕಡುತ್ತದು ಕಾಟ್ಟುಮ್ ಮುಗಮ್.

ತೋರ್ಪಂತೆ ಸ್ಫಟಿಕ ಸಮೀಪದಲಿರುವದ
ತೋರ್ಪುದು ಮುಖ ಮನೋಭಾವವ. (ಕುರಳ್ 706)

ತನ್ನ ಮುಂದಿರುವ ವಸ್ತುವಿನ ಆಕಾರವನ್ನು ಸ್ಪಷ್ಟವಾಗಿ ಕನ್ನಡಿ ತೋರಿಸುತ್ತದೆ. ಅದರಂತೆ ಒಬ್ಬನ ಹೃದಯಲ್ಲಿ ಅಡಗಿರುವುದನ್ನು ಅವನ ಮುಖವು ತೋರಿಸಿಕೊಡುತ್ತದೆ.

## 72. அவையறிதல்

### ಅವೈಯಱಿದಲ್ - ಸಭೆಯರಿವುದು

அவையறிந்து ஆராய்ந்து சொல்லுக சொல்லின்
தொகையறிந்த தூய்மை யவர். (குறள் 711)

ಅವೈಯಱಿನ್ದು ಆರಾಯ್ನ್ದು ಸೊಲ್ಲುಗ ಸೊಲ್ಲಿನ್
ತೊಗೈಯಱಿನ್ದ ತೂಯ್ಮೈ ಯವರ್.

ಸಭೆಯರಿತು ವಿವೇಚಿಸಿ ನುಡಿಯಲು
ಸೊಲ್ಲರಿತ ಶಬ್ಧಯುತ ಜ್ಞಾನಿ ಎಂಬರು ಸೊಲುವವರ. (ಕುರಳ್ 711)

ಮಾತುಗಳ ಜೋಡಣೆಯನ್ನು ಅರಿತ ಶುದ್ಧವಾದ ತಿಳಿವಳಿಕೆಯುಳ್ಳವರು, ಒಂದು ಮಾತನ್ನು ಆಡಬೇಕೆನಿಸಿದಾಗ ಸಭೆಯ ಸ್ವಭಾವವನ್ನು ಅರಿತು ವಿಚಾರಮಾಡಿ ಮಾತನಾಡಬೇಕು.

## 73. அவையஞ்சாமை

### ಅವೈಯಞ್ಜಾಮೈ – ಸಭೆಗೆ ಅಂಜದಿರುವುದು

கற்றாருள் கற்றார் எனப்படுவர் கற்றார்முன்
கற்ற செலச்சொல்லு வார். (குறள் 722)

ಕಱ್ಱಾರುಳ್ ಕಱ್ಱಾರ್ ಎನಪ್ಪಡುವರ್ ಕಱ್ಱಾರ್ಮುನ್
ಕಱ್ಱ ಸೆಲಚ್ಚೊಲ್ಲು ವಾರ್.

ಕಲಿತವರೊಳು ಕಲಿತವನೆಂಬರು
ಕಲಿತವರ ಮುಂದು ಕಲಿತದ್ದು ಪ್ರಕಟಿಸಲು. (ಕುರಳ್ 722)

ವಿದ್ವಾಂಸರ ಮುಂದೆ ತಾವು ಕಲಿತದನ್ನು ಅವರ ಮನಸ್ಸಿನಲ್ಲಿ ನಾಟುವಂತೆ ಮಾತನಾಡಬಲ್ಲವರು, ವಿದ್ವಾಂಸರಲ್ಲೆಲ್ಲಾ ಶ್ರೇಷ್ಠ ವಿದ್ವಾಂಸರೆಂದು ಗೌರವಿಸಲ್ಪಡುವರು.

## 74. நாடு

### ನಾಡು - ನಾಡು

பிணியின்மை செல்வம் விளைவின்பம் ஏமம்
அணியென்ப நாட்டிற்கிவ் வைந்து. (குறள் 738)

ಪಿಣಿಯಿನ್ಮೈ ಸೆಲ್ವಮ್ ವಿಳೈವಿನ್ಬಮ್ ಏಮಮ್
ಅಣಿಯೆನ್ಬ ನಾಟ್ಟಿಱ್ಕಿವ್ ವೈನ್ದು.

ನಿರೋಗತೆ, ಅಕ್ಷಯ ಕೋಶ ಧನ ಧಾನ್ಯ ಸಮೃದ್ಧಿ,
ಸುಖ ಶಾಂತಿ, ಸಂರಕ್ಷಣೆ ಈ ಐದು ನಾಡಿನ ಆಭರಣಗಳು. (ಕುರಳ್ 738)

ಆರೋಗ್ಯ, ಐಸಿರಿ, ಸಮೃದ್ಧ ಬೆಳೆ, ತೃಪ್ತಿಯ ಜೀವನ ಮತ್ತು ಸುಭದ್ರತೆ-ಈ ಐದು ಒಂದು ನಾಡಿಗೆ ಅಲಂಕಾರ ಎಂದು ಹೇಳುವರು.

## 75. அரண்

### ಅರಣ್ - ದುರ್ಗ

மணிநீரும் மண்ணும் மலையும் அணிநிழல்
காடும் உடையது அரண். (குறள் 742)

ಮಣಿನೀರುಮ್ ಮಣ್ಣುಮ್ ಮಲೈಯುಮ್ ಅಣಿನಿೞಲ್
ಕಾಡುಮ್ ಉಡೈಯದು ಅರಣ್.

ಅಕ್ಷಯ ಜಲಾಶಯ; ಸಮತಲ ಮೈದಾನ, ಮಲೆ,
ನೆಳಲ್ಕೊಡುವ ಕಾಡು ಉಳ್ಳಡಗಿಯದೇ ದುರ್ಗ. (ಕುರಳ್ 742)

ಮಣಿಯಂತೆ ತಿಳಿಯಾದ ನೀರು, ಸಮತಟ್ಟಾದ ಭೂಮಿ, ಹಬ್ಬಿರುವ ಮಲೆ ಮತ್ತು ಸೊಗಸಾದ ನೆರುಳುಳ್ಳ ಕಾಡು-ಇವುಗಳನ್ನು ಹೊಂದಿರುವುದೇ ಕೋಟೆಯೆನಿಸಿಕೊಳ್ಳುತ್ತದೆ.

## 76. பொருள்செயல்வகை

**ಪೊರುಳ್ಚೆಯಲ್ವಗೈ - ಅರ್ಥ ಸಂಚಯನ**

செய்க பொருளைச் செறுநர் செருக்கறுக்கும்

எஃகுஅதனிற் கூரியது இல். (குறள் 759)

ಸೆಯ್ಗ ಪೊರುಳೈಚ್ ಸೆಱುನರ್ ಸೆರುಕ್ಕಱುಕ್ಕುಮ್
ಎಃಗುಅದನಿಱ್ ಕೂರಿಯದು ಇಲ್.

ಧನ ಸಂಪತ್ತು ಅರ್ಜಿಸು; ಶತೃವಿನ ಅಹಂಕಾರವ ಕಳೆಯಲು

ಧನಕ್ಕಿಂತ ಮಿಗಿಲಾದ ಬೇರೆ ಆಯುಧವಿಲ್ಲ. (ಕುರಳ್ 759)

ಹಣವನ್ನು ಹೆಚ್ಚು ಸಂಪಾದಿಸಬೇಕು; ಅದು ಶತ್ರುಗಳ ಅಹಂಕಾರವನ್ನು ಕತ್ತರಿಸುವ ಆಯುಧ; ಅದಕ್ಕಿಂತ ಆಯುಧ ಬೇರೆ ಯಾವುದೂ ಇಲ್ಲ.

## 77. படைமாட்சி

**ಪಡೈಮಾಟ್ಚಿ - ಸೈನ್ಯ**

மறம்மானம் மாண்ட வழிச்செலவு தேற்றம்

எனநான்கே ஏமம் படைக்கு. (குறள் 766)

ಮಱಮ್ಮಾನಮ್ ಮಾಣ್ಡ ವೞಿಚ್ಚೆಲವು ತೇಱ್ಱಮ್
ಎನನಾನ್ಕೇ ಏಮಮ್ ಪಡೈಕ್ಕು.

ಪರಾಕ್ರಮ ಅಭಿಮಾನ ಶೌರ್ಯ ಪರಂಪರೆ, ವಿಶ್ವಾಸ

ಪಾತ್ರತೆ, ಈ ನಾಲ್ಕೂ ಸೈನ್ಯದ ಲಕ್ಷಣಗಳು. (ಕುರಳ್ 766)

ಪರಾಕ್ರಮ, ಅಭಿಮಾನ, ತನ್ನ ಹಿಂದಿನ ವೀರರು ತುಳಿದ ಹಾದಿಯಲ್ಲಿ ಮುನ್ನುಗ್ಗುವ ನಡೆ ಮತ್ತು ರಾಜನಿಷ್ಠೆ-ಈ ನಾಲ್ಕು ಗುಣಗಳು ಪಡೆಗೆ ಬೆಂಗಾವಲಾಗಿರುವವು.

## 78. படைச்செருக்கு

**ಪಡೈಚ್ಚೆರುಕ್ಕು - ಸೈನ್ಯದ ಗರ್ವ**

பேராண்மை என்ப தறுகண்ஒன்று உற்றக்கால்

ஊராண்மை மற்றதன் எஃகு. (குறள் 773)

ಪೇರಾಣ್ಮೈ ಎನ್ಪ ತಱುಕಣ್ಒನ್ಱು ಉಱ್ಱಕ್ಕಾಲ್
ಊರಾಣ್ಮೈ ಮಱ್ಱದನ್ ಎಃಗು.

ಶತ್ರುವ ಎದಿರಿಪ ವೀರತೆ, ಪೌರುಷ್ವವೆಂದರೆ, ಸಂಕಟದಲಿ ಸಿಲುಕಿದ

ಶತ್ರುವಿಗೆ ನೆರವಾಗುವುದು ಪೌರುಷದ ಚರಮ ಸೀಮೆ. (ಕುರಳ್ 773)

ಯುದ್ಧದಲ್ಲಿ ನಿರ್ಭೀತಿಯಿಂದ ಶತ್ರುವನ್ನು ಎದುರಿಸುವುದೇ ಮಹಾಶೌರ್ಯವೆನ್ನುವರು; ಶತ್ರುವಿಗೆ ಸಮರದಲ್ಲಿ ಆಪತ್ತು ಒದಗಿದಾಗ ಉದಾರವಾಗಿ ನಡೆದುಕೊಳ್ಳುವುದು ಆ ಮಹಾಶೌರ್ಯಕ್ಕೆ ಘನತೆ ತರುವಂಥದ್ದಾಗುತ್ತದೆ.

## 79. நட்பு

### ನಟ್ಪು - ಮೈತ್ರಿ

உடுக்கை இழந்தவன் கைபோல ஆங்கே
இடுக்கண் களைவதாம் நட்பு. (குறள் 788)

ಉಡುಕ್ಕೈ ಇೞನ್ದವನ್ ಕೈಪೋಲ ಆಙ್ಗೇ
ಇಡುಕ್ಕಣ್ ಕಳೈವದಾಮ್ ನಟ್ಪು.

ಉಟ್ಟಿದ್ದು ಕಳೆಯಲು ಕೈ ತಾನೇ ತಡೆಯುವಂತೆ
ವಿಪತ್ತು ಕಾಡಲು ಕರೆಯದೆ ಬಂದು ಕಾಯುವುದೇ ಮಿತ್ರತ್ವ. (ಕುರಳ್ 788)

ತೊಟ್ಟ ಉಡುಗೆ ಇದ್ದಕ್ಕಿದ್ದ ಹಾಗೆ ಜಾರಿದರೆ ಕೂಡಲೇ ಕೈ ಅದನ್ನು ಹಿಡಿದು ಸರಿಪಡಿಸುವಂತೆ, ಗೆಳೆಯನ ಕಷ್ಟದಲ್ಲಿ ತಕ್ಷಣ ನೆರವಾಗುವವನೇ ನಿಜವಾದ ಸ್ನೇಹಿತನು.

## 80. நட்பாராய்தல்

### ನಟ್ಪಾರಾಯ್ದಲ್ - ಮೈತ್ರಿಯ ಅವಲೋಕನ

கேட்டினும் உண்டுஓர் உறுதி கிளைஞரை
நீட்டி அளப்பதோர் கோல். (குறள் 796)

ಕೇಟ್ಟಿನುಮ್ ಉಣ್ಡೋರ್ ಉಱುದಿ ಕಿಳೈಞರೈ
ನೀಟ್ಟಿ ಅಳಪ್ಪದೋರ್ ಕೋಲ್.

ಸಂಕಟ ಹೊಂದುವುದು ಒಳ್ಳೆಯದೇ ಏಕೆಂದರೆ
ಪರಮ ಮಿತ್ರನ ಅಳೆಯುವ ಅಳತೆಗೋಲು ಅದುವೇ. (ಕುರಳ್ 796)

ಕಷ್ಟ ಬಂದ ಕಾಲದಲ್ಲಿಯೂ ಒಂದು ಬಗೆಯ ಒಳಿತುಂಟು; ತನ್ನ ಮಿತ್ರನ ಯೋಗ್ಯತೆಯನ್ನು ಅಳೆಯಲು ಅದೊಂದು ಅಳತೆಗೋಲಾಗುವುದು.

## 81. பழைமை

### ಪೞೈಮೈ – ಚಿರ ಮೈತ್ರಿ

பழைமை எனப்படுவது யாதெனின் யாதும்
கிழமையைக் கீழ்ந்திடா நட்பு. (குறள் 801)

ಪೞೈಮೈ ಎನಪ್ಪಡುವದು ಯಾದೆನಿನ್ ಯಾದುಮ್
ಕಿೞಮೈಯೈಕ್ ಕೀೞ್ನ್ದಿಡಾ ನಟ್ಪು.

ಮಿತ್ರನು ಮಿತ್ರತೆಯಲಿ ಎಸಗಿದ ಕರ್ಮವ ಅಂತೆಯೇ
ಸ್ವೀಕರಿಸೆ ಅದ ಚಿರಮೈತ್ರಿ ಎಂಬರು. (ಕುರಳ್ 801)

ನಿಕಟ ಸ್ನೇಹವೆನ್ನುವುದು, ಬಹಳ ಕಾಲದ ಗಾಢವಾದ ಗೆಳೆತನದ ಹಕ್ಕಿನಿಂದ ಮಾಡುವ ಕೆಲಸಗಳಲ್ಲಿ ಸ್ವಲ್ಪವೂ ವಿರೋಧವಿಲ್ಲದೆ ಒಂದಾಗಿರುವುದು.

## 82. தீநட்பு

**ತೀನಟ್ಪು – ಹಾನಿಕಾರಕ ಮೈತ್ರಿ**

கனவினும் இன்னாது மன்னோ வினைவேறு
சொல்வேறு பட்டார் தொடர்பு. (குறள் 819)

ಕನವಿನುಮ್ ಇನ್ನಾದು ಮನ್ನೋ ವಿನೈವೇಱು
ಸೊಲ್ವೇಱು ಪಟ್ಟಾರ್ ತೊಡರ್ಪು.

ಹೇಳ್ವದೊಂದು ಮಾಡುವದು ಇನ್ನೊಂದು ಎಂಬವರ
ಮೈತ್ರಿ ದುಃಖದಾಯಕವು ಕನಸಿನಲೂ. (ಕುರಳ್ 819)

ನಡೆ ಬೇರೆ ನುಡಿ ಬೇರೆಯಾಗಿರುವವರ ಮೈತ್ರಿಯು ಒಬ್ಬನಿಗೆ ಕನಸಿನಲ್ಲಿ ಕೂಡ ದುಃಖವನ್ನು ತರುವುದಾಗುತ್ತದೆ.

## 83. கூடாநட்பு

**ಕೂಡಾನಟ್ಪು - ಕಪಟ ಮೈತ್ರಿ**

தொழுதகை யுள்ளும் படையொடுங்கும் ஒன்னார்
அழுதகண் ணீரும் அனைத்து. (குறள் 828)

ತೊಟುದಕೈ ಯುಳ್ಳುಮ್ ಪಡೈಯೊಡುಙ್ಗುಮ್ ಒನ್ನಾರ್
ಅಟುದಕಣ್ ಣೀರುಮ್ ಅನೈತ್ತು.

ನಮನ ಮುದ್ರೆಯೊಳಿರುವ ಶತ್ರುವಿನ ಕಂಕುಳಲ್ಲಿರಬಹುದು ಅಸ್ತ್ರ
ನಂಬದಿರು ಅವನ ಕಣ್ಣೀರ. (ಕುರಳ್ 828)

ಹಗೆಗಳು ನಮಿಸುವ ಕರದೊಳಗೂ ಕೊಲೆ ಮಾಡುವ ಅಸ್ತ್ರ ಅಡಗಿರುತ್ತದೆ. ಅದರಂತೆ ಅವರು ಅತ್ತು ಸುರಿಸುವ ಕಣ್ಣೀರೂ ದುರುದ್ದೇಶದಿಂದ ಕೂಡಿರುತ್ತದೆ.

## 84. பேதைமை

**ಪೇದೈಮೈ - ಮೌಢ್ಯ**

பேதைமை என்பதுஒன்று யாதெனின் ஏதம்கொண்டு
ஊதியம் போக விடல். (குறள் 831)

ಪೇದೈಮೈ ಎನ್ಪದುಒನ್ಱು ಯಾದೆನಿನ್ ಏದಮ್ಕೊಣ್ಡು
ಊದಿಯಮ್ ಪೋಗ ವಿಡಲ್.

ಲಾಭದಾಯಕವ ತ್ಯಜಿಸಿ ಹಾನಿಕಾರಕವ
ಗ್ರಹಿಪದು ಮೂಢತೆಯ ಲಕ್ಷಣ. (ಕುರಳ್ 831)

ಮೂರ್ಖತನ ಎನ್ನುವುದು ಯಾವುದೆಂದರೆ, ತನಗೆ ನಷ್ಟವಾದದ್ದನ್ನು ಸ್ವೀಕರಿಸಿ ಲಾಭವಾದದ್ದನ್ನು ತೊರೆದು ಬಿಡುವುದು.

**85. புல்லறிவாண்மை**

**ಪುಲ್ಲಱಿವಾಣ್ಮೈ - ಮಿಥ್ಯಾಹಂಕಾರ**

உலகத்தார் உண்டென்பது இல்லென்பான் வையத்து
அலகையா வைக்கப் படும். (குறள் 850)

ಉಲಗತ್ತಾರ್ ಉಣ್ಡೆನ್ಬದು ಇಲ್ಲೆನ್ಬಾನ್ ವೈಯತ್ತು
ಅಲಗೈಯಾ ವೈಕ್ಕಪ್ ಪಡುಮ್.

ಜಗವೆಲ್ಲ ಉಂಟೆಂಬುದ, ಇಲ್ಲವೆಂದು ಸಾರುವನು ಬುದ್ಧಿಹೀನನು
ಅವನ ಕಾಣ್ಬರು ಮಾನವನ ಶರೀರ ಹೊಕ್ಕ ಭೂತವೆಂದು. (ಕುರಳ್ 850)

ಹಿರಿಯ ಜ್ಞಾನಿಗಳು ಉಂಟು ಎಂದು ಹೇಳುವುದನ್ನು ಇಲ್ಲ ಎಂದು ಹೇಳುವ ಅವಿವೇಕಿಯು, ಈ ಲೋಕದಲ್ಲಿ ದೆವ್ವವೆಂದು ಭಾವಿಸಲ್ಪಡುವನು.

**86. இகல்**

**ಇಗಲ್ - ವಿಭೇದ**

இகலென்ப எல்லா உயிர்க்கும் பகலென்னும்
பண்பின்மை பாரிக்கும் நோய். (குறள் 851)

ಇಗಲೆನ್ಬ ಎಲ್ಲಾ ಉಯಿರ್ಕ್ಕುಮ್ ಪಗಲೆನ್ನುಮ್
ಪಣ್ಬಿನ್ಮೈ ಪಾರಿಕ್ಕುಮ್ ನೋಯ್.

ಎಲ್ಲ ಜೀವರಾಶಿಗಳಲ್ಲೂ, ಇತರ ಜೀವಿಗಳೊಡನೆ
ಕೂಡಿ ಬಾಳದಿರುವ ಅಧೋಗುಣವಿರೆ ಅದ ವಿಭೇದ ಎಂಬರು ಕಲಿತವರು. (ಕುರಳ್ 851)

ಎಲ್ಲಾ ಜೀವಿಗಳು ಪರಸ್ಪರ ಹೊಂದಿಕೊಳ್ಳದಂತೆ ಬೇರ್ಪಡಿಸುವ ಹೀನಗುಣವೇ ಹಗೆತನವೆಂದು ತಿಳಿದವರು ಹೇಳುವರು.

**87. பகைமாட்சி**

**ಪಗೈಮಾಟ್ಚಿ - ಶತ್ರುತ್ವದ ಉತ್ಕರ್ಷತೆ (ವೈರತ್ವದ ಉನ್ನತಿ)**

வலியார்க்கு மாறுஏற்றல் ஓம்புக ஓம்பா
மெலியார்மேல் மேக பகை. (குறள் 861)

ವಲಿಯಾರ್ಕ್ಕು ಮಾಱುಏಱ್ಱಲ್ ಓಮ್ಬುಗ ಓಮ್ಬಾ
ಮೆಲಿಯಾರ್ಮೇಲ್ ಮೇಗ ಪಗೈ.

ತಮಗಿಂತ ಬಲಿಷ್ಠರೊಳು ಹಗೆ ತೋರಿ ಎದುರಿಸದಿರು
ತಮಗಿಂತ ನಿರ್ಬಲರೊಳು ಶತ್ರುತ್ವ ಬಿಡದೆ ಪಡೆ ಲಾಭವ. (ಕುರಳ್ 861)

ತಮಗಿಂತ ಬಲಿಷ್ಠರಾದವರ ಮೇಲಿನ ಹಗೆತನವನ್ನು ತಪ್ಪಿಸಬೇಕೆಂಬುದು ಪ್ರಸ್ತುತ ಕುರಳಿನ ಪ್ರಧಾನ ಆಶಯ; ಹಗೆತನದ ಬಗೆಗಿನ ತಿರುವಳ್ಳುವರ ದೃಷ್ಟಿಕೋನವನ್ನು ಇದು ವ್ಯಕ್ತಪಡಿಸುತ್ತದೆ.

**88. பகைத்திறம் தெரிதல்**

**ಪಗೈತ್ತಿಱಮ್ ತೆರಿದಲ್ - ಶತ್ರು ಶಕ್ತಿಯ ಜ್ಞಾನ**

பகையென்னும் பண்பி லதனை ஒருவன்
நகையேயும் வேண்டற்பாற்று அன்று. (குறள் 871)

ಪಗೈಯೆನ್ನುಮ್ ಪಣ್ಬಿ ಲದನೈ ಒರುವನ್
ನಗೈಯೇಯುಮ್ ವೇಣ್ಡಱ್ಪಾಱ್ಱು ಅನ್ಱು.

ಹಗೆ ಎಂಬ ಅಸಭ್ಯ ಗುಣವ ಬಯಸದಿರು
ನಕ್ಕು ಹಗುರಾಗಲೂ. (ಕುರಳ್ 871)

ಹಗೆತನ ಎನ್ನುವ ದುರ್ಗುಣವನ್ನು ಒಬ್ಬನು ಪರಿಹಾಸ್ಯ ಮಾಡುವುದಕ್ಕೂ ಸಹ ಬಯಸಕೂಡದು.

**89. உட்பகை**

**ಉಟ್ಪಗೈ – ಆಂತರಿಕ ಶತ್ರು**

உடம்பாடு இலாதவர் வாழ்க்கை குடங்கருள்
பாம்போடு உடனுறைந் தற்று. (குறள் 890)

ಉಡಮ್ಪಾಡು ಇಲಾದವರ್ ವಾೞ್ಕ್ಕೈ ಕುಡಙ್ಗರುಳ್
ಪಾಮ್ಬೋಡು ಉಡನುಱೈನ್ ದಱ್ಱು.

ಹೊಂದಿಕೆ ಇಲ್ಲದವರೊಂದಿಗೆ ಬಾಳುವದು
ಹಾವಿನೊಂದಿಗೆ ಒಂದೇ ಬಿಲದೊಳು ಬಾಳುವಂತೆ. (ಕುರಳ್ 890)

ಮನಸ್ಸಿನಲ್ಲಿ ಸಾಮರಸ್ಯವಿಲ್ಲದವರೊಡನೆ ಸಹಬಾಳ್ವೆಯು, ಒಂದೇ ಗುಡಿಸಿಲೊಳಗೆ ಹಾವಿನೊಂದಿಗೆ ಕೂಡಿ ಬಾಳಿದಂತೆ.

**90. பெரியாரைப் பிழையாமை**

**ಪೆರಿಯಾರೈಪ್ ಪಿೞೈಯಾಮೈ - ಹಿರಿಯರ ಅಪಚಾರ ಮಾಡದಿರುವುದು**

பெரியாரைப் பேணாது ஒழுகின் பெரியாரால்
பேரா இடும்பை தரும். (குறள் 892)

ಪೆರಿಯಾರೈಪ್ ಪೇಣಾದು ಒೞುಗಿನ್ ಪೆರಿಯಾರಾಲ್
ಪೇರಾ ಇಡುಮ್ಬೈ ತರುಮ್.

ಹಿರಿಯರ ಅಪಚಾರ ಮಾಡಿದೊಡೆ ಬರುವುದು
ಹಿರಿಯರಿಂದ ಹೇಳಲಾಗದ ಪೀಡೆ. (ಕುರಳ್ 892)

ದಕ್ಷರಾದ ಹಿರಿಯ ವ್ಯಕ್ತಿಗಳನ್ನು ಗೌರವಿಸದವರು ಅವರಿಂದ ನೀಗದ ಹಲವಾರು ಸಂಕಟಗಳಿಗೆ ಗುರಿಯಾಗುವರು.

## 91. பெண்வழிச் சேறல்

### ಪೆಣ್ವಟಿಚ್ ಸೇಱಲ್ - ಪತ್ನಿ ದಾಸನಾಗುವುದು

மனைவிழைவார் மாண்பயன் எய்தார் வினைவிழைவார்

வேண்டாப் பொருளும் அது. (குறள் 901)

ಮನೈವಿೞೈವಾರ್ ಮಾಣ್ಪಯನ್ ಎಯ್ದಾರ್ ವಿನೈವಿೞೈವಾರ್
ವೇಣ್ಡಾಪ್ ಪೊರುಳುಮ್ ಅದು.

ಕಾಯ ವಶದಿ ಪತ್ನಿಯ ಇಂಗಿತದಲಾಡುವ ಪುರುಷ ಶ್ರೇಷ್ಠ ಸಿದ್ಧಿಯನಡೆಯಲಾರನು

ಕರ್ತವ್ಯ ಪಾಲನೆಯ ಇಚ್ಛುಕರು ಬಿಡುವುದು ಲೇಸು ಈ ಕಾಯವ. (ಕುರಳ್ 901)

ಹೆಂಡತಿ ಮೇಲಿನ ವ್ಯಾಮೋಹದಿಂದ ಅವಳು ಹೇಳಿದಂತೆ ಕೇಳಿ ನಡೆಯುವವರು ಶ್ರೇಷ್ಠ ಫಲವನ್ನು ಪಡೆಯಲಾರರು; ನಿಜವಾದ ಕರ್ತವ್ಯವನ್ನು ಬಯಸುವವರಿಗೆ ಬೇಡವಾದ ಸಂಗತಿ ಅದುವೆ.

## 92. வரைவின் மகளிர்

### ವರೈವಿನ್ ಮಗಳಿರ್ – ವಾರಾಂಗನೆಯರು

அன்பின் விழையார் பொருள்விழையும் ஆய்தொடியார்

இன்சொல் இழுக்குத் தரும். (குறள் 911)

ಅನ್ಬಿನ್ ವಿೞೈಯಾರ್ ಪೊರುಳ್ವಿೞೈಯುಮ್ ಆಯ್ದೊಡಿಯಾರ್
ಇನ್ಸೊಲ್ ಇೞುಕ್ಕುತ್ ತರುಮ್.

ಸಹಜ ಪ್ರೇಮ ತೋರದೆ, ಕೇವಲ ಧನ ಪ್ರಾಪ್ತಿಗೆ

ಪ್ರೇಮ ಪ್ರದರ್ಶಿಪ ವಾರಾಂಗನೆಯ ವಚನ, ಅಂತ್ಯದಲಿ ತರುವುದು ದುಃಖವ. (ಕುರಳ್ 911)

ಪ್ರೀತಿಯನ್ನೀಡದೆ ಹಣವನ್ನು ಬಯಸುವ ಅಂದವಾದ ಆಯ್ದ ಬಳೆಗಳನ್ನು ಧರಿಸಿದ ಚೆಲುವ ಸ್ತ್ರೀಯರ ಮಧುರ ನುಡಿಗಳು ಒಬ್ಬನಿಗೆ ದುಃಖವನ್ನು ತರುತ್ತವೆ.

## 93. கள்ளுண்ணாமை

### ಕಳ್ಳುಣ್ಣಾಮೈ – ಕಳ್ಳು ಉಣ್ಣದಿರುವುದು

கள்ளுண்ணாப் போழ்தில் களித்தானைக் காணுங்கால்

உள்ளான்கொல் உண்டதன் சோர்வு. (குறள் 930)

ಕಳ್ಳುಣ್ಣಾಪ್ ಪೋೞ್ದಿಲ್ ಕಳಿತ್ತಾನೈಕ್ ಕಾಣುಙ್ಗಾಲ್
ಉಳ್ಳಾನ್ಕೊಲ್ ಉಣ್ಡದನ್ ಚೋರ್ವು.

ಕಳ್ಳುಣ್ಣದ ಕಾಲದಲಿ, ಕುಡುಕನ ಕಾಣಲು

ಕಳ್ಳುಣುವವ ಕಾಣ್ಬನೇ ಕುಡಿತದ ಕೇಡ. (ಕುರಳ್ 930)

ಒಬ್ಬನು ತಾನು ಮದ್ಯವನ್ನು ಕುಡಿಯದಿರುವಾಗ, ಮದ್ಯದ ಅಮಲಿನಲ್ಲಿ ಇರುವವನನ್ನು ಕಂಡಾಗ ಮದ್ಯ ಕುಡಿಯುವುದರಿಂದ ಆಗುವ ಕೆಡುಕನ್ನು ಯೋಚಿಸಲಾರನೇ?

**94. சூது**

**ಸೂದು - ಜೂಜು**

வேண்டற்க வென்றிடினும் சூதினை வென்றதூஉம்

தூண்டில்பொன் மீன்விழுங்கி யற்று. (குறள் 931)

ವೇಣ್ಡಱ್ಕ ವೆನ್ಱಿಡಿನುಮ್ ಸೂದಿನೈ ವೆನ್ಱದೂಉಮ್
ತೂಣ್ಡಿಲ್ಪೊನ್ ಮೀನ್ವಿೞುಙ್ಕಿ ಯಱ್ಱು.

ಒಲ್ಲೆನೆಂದಿರು, ದ್ಯೂತದಲಿ ಜಯಿಸಲೂ, ಗೆದ್ದದ್ದು

ಗಾಳದಲಿರುವ ಹುಳುವ ನುಂಗಿದ ಮೀನಿನಂತೆ. (ಕುರಳ್ 931)

ಜಯವನ್ನು ತರುವುದಾಗಿದ್ದರೂ ಜೂಜಾಟವನ್ನು ಬಯಸಬಾರದು; ಜೂಜಾಡಿ ಗೆದ್ದು ಪಡೆದ ಆ ಲಾಭವು, ಗಾಳದ ಕೊಕ್ಕೆಯನ್ನು ಆಹಾರವೆಂದು ಭಾವಿಸಿ ಅದನ್ನು ಮೀನು ನುಂಗಿದಂತೆ ಅಪಾಯಕಾರಿ.

**95. மருந்து**

**ಮರುನ್ದು - ಮದ್ದು**

மாறுபாடு இல்லாத உண்டி மறுத்துண்ணின்

ஊறுபாடு இல்லை உயிர்க்கு. (குறள் 945)

ಮಾಱುಪಾಡು ಇಲ್ಲಾದ ಉಣ್ಡಿ ಮಱುತ್ತುಣ್ಣಿನ್
ಊಱುಪಾಡು ಇಲ್ಲೈ ಉಯಿರ್ಕ್ಕು.

ಶರೀರವ ಕಾಯಲು ತಕ್ಕ ಭೋಜನವ ಸೇವಿಸೆ

ಸಂಕಟ ತರುವ ರೋಗವೂ ಅಂಟದು. (ಕುರಳ್ 945)

ಶರೀರಕ್ಕೆ ಒಗ್ಗುವಂಥ ಆಹಾರವನ್ನು ಮಿತಿಯರಿತು ಊಟ ಮಾಡಿದರೆ ಜೀವಕ್ಕೆ ಯಾವ ಅಪಾಯವೂ ಉಂಟಾಗುವುದಿಲ್ಲ.

**96. குடிமை**

**ಕುಡಿಮೈ - ಕುಲೀನತೆ**

இல்பிறந்தார் கண்ணல்லது இல்லை இயல்பாகச்

செப்பமும் நாணும் ஒருங்கு. (குறள் 951)

ಇಲ್ಪಿಱನ್ದಾರ್ ಕಣ್ಣಲ್ಲದು ಇಲ್ಲೈ ಇಯಲ್ಪಾಗಚ್
ಸೆಪ್ಪಮುಮ್ ನಾಣುಮ್ ಒರುಙ್ಗು.

ಕುಲೀನರ ಬಿಟ್ಟು ಬೇರೆಲ್ಲೂ ಕಾಣಲರಿದು ಸಹಜವಾಗಿ

ನ್ಯಾಯಪರತೆ, ವಿನಯಶೀಲತೆಗಳೆರಡು ಒಗ್ಗೂಡಿ ಇರುವುದನು. (ಕುರಳ್ 951)

ನ್ಯಾಯಪರತೆ, ವಿನಯಶೀಲತೆ-ಇವೆರಡೂ ಒಳ್ಳೆಯ ಮನೆತನದಲ್ಲಿ ಹುಟ್ಟಿದವರ ಸಹಜವಾದ ಗುಣಗಳು; ಬೇರೆಯವರಲ್ಲಿ ಇರುವುದಿಲ್ಲ.

**97. மானம்**

**ಮಾನಮ್ - ಮಾನ**

மயிர்நீப்பின் வாழாக் கவரிமா அன்னார்

உயிர்நீப்பர் மானம் வரின். (குறள் 969)

ಮಯಿರ್ನೀಪ್ಪಿನ್ ವಾೞಾಕ್ ಕವರಿಮಾ ಅನ್ನಾರ್
ಉಯಿರ್ನೀಪ್ಪರ್ ಮಾನಮ್ ವರಿನ್.

ಮೈ ಮೇಲಿನ ಒಂದು ರೋಮ ಉದಿರಲು ಪ್ರಾಣ ತ್ಯಜಿಪ ಚಮರೀಮೃಗದಂತೆ

ಸ್ವಾಭಿಮಾನಿ ಸಮ್ಮಾನ ನಷ್ಟವಾಗಲು ತ್ಯಜಿಸುವ ನಿಜ ಪ್ರಾಣವ. (ಕುರಳ್ 969)

ತನ್ನ ಶರೀರದಿಂದ ಕೂದಲು ಕೆಳಗೆ ಉದುರಿದರೆ ಬದುಕಿರದ ಜಿಂಕೆಯಂಥ ಮಾನವಂತರು ತಮ್ಮ ಮಾನಕ್ಕೆ ಹಾನಿ ಬಂದಾಗ ತಮ್ಮ ಪ್ರಾಣವನ್ನೇ ತ್ಯಾಗ ಮಾಡುವರು.

**98. பெருமை**

**ಪೆರುಮೈ – ಹಿರಿಮೆ**

பிறப்பொக்கும் எல்லா உயிர்க்கும் சிறப்பொவ்வா

செய்தொழில் வேற்றுமை யான். (குறள் 972)

ಪಿಱಪ್ಪೊಕ್ಕುಮ್ ಎಲ್ಲಾ ಉಯಿರ್ಕ್ಕುಮ್ ಸಿಱಪ್ಪೊವ್ವಾ
ಸೆಯ್ತೊೞಿಲ್ ವೇಱ್ಱುಮೈ ಯಾನ್.

ಜನ್ಮ ದೃಷ್ಟಿಯಲಿ ಮಾನವರೆಲ್ಲ ಸರಿಸಮಾನರೆ

ಭಿನ್ನತೆ ತರುವುದು ಗುಣದಲಿ, ಅವರವರ ಭಿನ್ನ ಕರ್ಮ. (ಕುರಳ್ 972)

ಜನ್ಮದಿಂದ ಎಲ್ಲಾ ಜೀವಿಗಳೂ ಒಂದೇ; ಆದರೆ ಮಾಡುವ ಕಾರ್ಯದ ವ್ಯತ್ಯಾಸದಿಂದ ಭಿನ್ನವಾಗಿರುತ್ತವೆ.

**99. சான்றாண்மை**

**ಸಾನ್ಱಾಣ್ಮೈ – ಗುಣ ಸಂಪನ್ನತೆ**

ஆற்றுவார் ஆற்றல் பணிதல் அதுசான்றோர்

மாற்றாரை மாற்றும் படை. (குறள் 985)

ಆಱ್ಱುವಾರ್ ಆಱ್ಱಲ್ ಪಣಿದಲ್ ಅದುಸಾನ್ಱೋರ್
ಮಾಱ್ಱಾರೈ ಮಾಱ್ಱುಮ್ ಪಡೈ.

ವಿನಮ್ರತೆ ಬಲವಂತರ ಮಹಾಶಕ್ತಿ, ಇದು

ಶತ್ರುವನ್ನೂ ಮಿತ್ರನಾಗಿಪ ಅಸ್ತ್ರ. (ಕುರಳ್ 985)

ಬಲಶಾಲಿಗಳ ಸಾಮರ್ಥ್ಯವಿರುವುದು ಅವರು ತಗ್ಗಿ ನಡೆಯುವುದರಲ್ಲಿ; ಅದು ಸಜ್ಜನರು ತಮ್ಮ ಹಗೆಗಳನ್ನು ಪರಿವರ್ತಿಸುವ ಸಾಧನವೂ ಹೌದು.

**100. பண்புடைமை**

**ಪಣ್ಬುಡೈಮೈ - ಶಿಷ್ಟಾಚಾರ**

அரம்போலும் கூர்மைய ரேனும் மரம்போல்வர்

மக்கட்பண்பு இல்லா தவர். (குறள் 997)

ಅರಮ್ಬೋಲುಮ್ ಕೂರ್ಮೈಯ ರೇನುಮ್ ಮರಮ್ಬೋಲ್ವರ್
ಮಕ್ಕಟ್ಪಣ್ಬು ಇಲ್ಲಾ ದವರ್.

ಅರದಂತೆ ಚುರುಕು ಬುದ್ಧಿಯುಳ್ಳವರೇ ಆದರೂ

ಮಾನವೀಯ ಗುಣವಿಲ್ಲದಿರೆ ಜಡ ವೃಕ್ಷಕ್ಕೆ ಸಮ. (ಕುರಳ್ 997)

ಮಾನವೀಯ ಗುಣವಿಲ್ಲದವರ ಬುದ್ಧಿಯು ಅರದಂತೆ ಹರಿತವಾಗಿದ್ದರೂ ಅದು ನಿರರ್ಥಕ; ಅವರು ಮರಕ್ಕೆ ಸಮಾನರು.

**101. நன்றியில் செல்வம்**

**ನನ್ರಿಯಿಲ್ ಸೆಲ್ವಮ್ - ನಿಷ್ಫಲ ಧನ**

வைத்தான்வாய் சான்ற பெரும்பொருள் அஃதுஉண்ணான்

செத்தான் செயக்கிடந்தது இல். (குறள் 1001)

ವೈತ್ತಾನ್ವಾಯ್ ಸಾನ್ರ ಪೆರುಮ್ಬೊರುಳ್ ಅಃದುಉಣ್ಣಾನ್
ಸೆತ್ತಾನ್ ಸೆಯಕ್ಕಿಡನ್ದದು ಇಲ್.

ಅಪಾರ ಧನರಾಶಿ ಸಂಪಾದಿಸಿ ಅದ ಉಪಯೋಗಿಸದೆ

ಆನಂದಿಸಿದವನ ಜೀವನ ಸತ್ತವಗೆ ಸಮ. (ಕುರಳ್ 1001)

ಒಬ್ಬನು ತನ್ನ ಮನೆಯ ತುಂಬ ಸಿರಿಯನ್ನು ಕೂಡಿಟ್ಟುಕೊಂಡು ಜಿಪುಣ ತನದಿಂದ ಅದನ್ನು ಅನುಭವಿಸದಿದ್ದರೆ, ಅವನು ಜೀವಂತವಿದ್ದರೂ ಸತ್ತವರಿಗೆ ಸಮಾನನು. ಅವನ ಆ ಸಿರಿಯು ವ್ಯರ್ಥವಾಗುತ್ತದೆ.

**102. நாணுடைமை**

**ನಾಣುಡೈಮೈ - ಲಜ್ಜಾ ಶೀಲತೆ**

கருமத்தால் நாணுதல் நாணுத் திருநுதல்

நல்லவர் நாணுப் பிற. (குறள் 1011)

ಕರುಮತ್ತಾಲ್ ನಾಣುದಲ್ ನಾಣುತ್ ತಿರುನುದಲ್
ನಲ್ಲವರ್ ನಾಣುಪ್ ಪಿಱ.

ಪಾಪ ಕರ್ಮಕ್ಕೆ ಅಂಜುವುದು ನಿಜವಾದ ಲಜ್ಜಾಶೀಲತೆ

ಕುಲಾಂಗನಾ ವನಿತೆಯರ ಸ್ವಾಭಾವಿಕ ಲಜ್ಜೆ ಬೇರೆ. (ಕುರಳ್ 1011)

ತಾನು ಮಾಡಿದ ಹೇಯ ಕಾರ್ಯಗಳಿಗಾಗಿ ನಾಚುವುದೇ ವಿನಯವಂತಿಕೆಯೆನಿಸುವುದು; ಸುಂದರವಾದ ಹಣೆಯುಳ್ಳ ಸ್ತ್ರೀಯರ ನಾಚಿಕೆಯು ಬೇರೆ ಬಗೆಯದು.

## 103. குடிசெயல்வகை

**ಕುಡಿಸೆಯಲ್ವಗೈ – ಕುಲ ಸಂರಕ್ಷಣೆ**

கருமம் செயஒருவன் கைதூவேன் என்னும்
பெருமையின் பீடுடையது இல். (குறள் 1021)

ಕರುಮಮ್ ಸೆಯಒರುವನ್ ಕೈದೂವೇನ್ ಎನ್ನುಮ್
ಪೆರುಮೈಯಿನ್ ಪೀಡುಡೈಯದು ಇಲ್.

ಕುಲ ಗೌರವಕ್ಕೆ ತಕ್ಕ ಕರ್ಮವ ಮಾಡಲು ಹಿಂಜರಿಯೆನು ಎಂಬ
ದೃಢ ಮನದಿ ಕಾರ್ಯವೆಸಗಿರೆ ಅದಕ್ಕಿಂತ ಹೆಮ್ಮೆ ಪಡಲು ಬೇರಿಲ್ಲ. (ಕುರಳ್ 1021)

ಕುಲ ಸಂರಕ್ಷಣೆಗಾಗಿ ಕರ್ತವ್ಯವನ್ನು ಮಾಡುವುದಕ್ಕೆ ಹಿಂಜರಿಯುವುದಿಲ್ಲ ಎಂದು ಒಬ್ಬನು ಪ್ರಯತ್ನ ನಡೆಸುವ ಹಿರಿಮೆಗಿಂತ ಮೇಲಾದುದು ಬೇರೊಂದಿಲ್ಲ.

## 104. உழவு

**ಉಟವು - ಕೃಷಿ**

சுழன்றும்ஏர்ப் பின்னது உலகம் அதனால்
உழந்தும் உழவே தலை. (குறள் 1031)

ಸುಟನ್ರುಮ್ಏರ್ಪ್ ಪಿನ್ನದು ಉಲಗಮ್ ಅದನಾಲ್
ಉಟನ್ದುಮ್ ಉಟವೇ ತಲೈ.

ಹಲಪಿಡಿದು ಉಳುಮೆಗೆಯ್ವುದು ಶ್ರಮವೇ ಆದರೂ
ಜಗದೊಳು ಕೃಷಿಯೇ ಪ್ರಧಾನ ಮತ್ತೆಲ್ಲಕ್ಕೂ ಅದುವೇ ಆಧಾರ. (ಕುರಳ್ 1031)

ಲೋಕದ ಜನರು ಹಲವು ಉದ್ಯೋಗಗಳಲ್ಲಿ ಎಷ್ಟೇ ಸುತ್ತಾಡಿದರೂ ಅದು ನೇಗಿಲ ದುಡಿಮೆಗೆ ಹಿಂದೆ ನಿಲ್ಲುವಂಥದ್ದು; ಆದ್ದರಿಂದ ಎಷ್ಟೇ ಶ್ರಮಪಟ್ಟರೂ ಉಳುವ ದುಡಿಮೆಯೇ ಮೇಲಾದುದು.

## 105. நல்குரவு

**ನಲ್ಕುರವು - ದಾರಿದ್ರ್ಯ**

இன்மையின் இன்னாதது யாதெனின் இன்மையின்
இன்மையே இன்னா தது. (குறள் 1041)

ಇನ್ಮೈಯಿನ್ ಇನ್ನಾದದು ಯಾದೆನಿನ್ ಇನ್ಮೈಯಿನ್
ಇನ್ಮೈಯೇ ಇನ್ನಾ ದದು.

ದಾರಿದ್ರ್ಯತೆಗೆ ಎಣೆಯಾದುದು ಯಾವುದೆನಲು
ದಾರಿದ್ರ್ಯತೆಗೆ ಎಣೆ ದಾರಿದ್ರವೇ ಎಂಬರು. (ಕುರಳ್ 1041)

ಬಡತನದಂತೆ ದುಃಖ ತರುವಂಥದ್ದು ಬಡತನವೇ; ಅದಕ್ಕೆ ಸಮನಾದ ದುಃಖ ಬೇರೊಂದಿಲ್ಲ.

## 106. இரவு

**ಇರವು – ಯಾಚನೆ**

இரக்க இரத்தக்கார்க் காணின் கரப்பின்
அவர்பழி தம்பழி அன்று. (குறள் 1051)

ಇರಕ್ಕ ಇರತ್ತಕ್ಕಾರ್ಕ್ ಕಾಣಿನ್ ಕರಪ್ಪಿನ್
ಅವರ್ಪಳಿ ತಮ್ಪಳಿ ಅನ್ಱು.

ಯಾಚಿಸಿದೊಡೆ ಕೊಡುವವರ ಕಂಡು ಯಾಚಿಸು
ಯಾಚಿಸಿದರೂ ಕೊಡದಿರೆ ತಪ್ಪು ಅವರದು, ನಿನ್ನದಲ್ಲ. (ಕುರಳ್ 1051)

ಬೇಡಲು ತಕ್ಕವರನ್ನು ಕಂಡರೆ ಬೇಡಿಕೊಳ್ಳಬೇಕು; ಅವರು ಕೊಡದೆ ನಿರಾಕರಿಸಿದರೆ, ಆ ದೋಷವು ಅವರಿಗೆ ವಿನಾ ಬೇಡುವವನದಲ್ಲ.

## 107. இரவச்சம்

**ಇರವಚ್ಚಮ್ – ಯಾಚನೆಯ ಭಯ**

இரந்தும் உயிர்வாழ்தல் வேண்டின் பரந்து
கெடுக உலகியற்றி யான். (குறள் 1062)

ಇರನ್ದುಮ್ ಉಯಿರ್ವಾೞ್ದಲ್ ವೇಣ್ಡಿನ್ ಪರನ್ದು
ಕೆಡುಗ ಉಲಗಿಯಱ್ಱಿ ಯಾನ್.

ಬೇಡಿಯೇ ಜೀವಿಸಬೇಕೆಂದು ಬಯಸಿದನಾದರೆ
ಪಡೆದವನೇ ಬಂದು ಜಗಕೆ, ಬೇಡಿ ಅಳಿಯಲಿ. (ಕುರಳ್ 1062)

ಲೋಕದಲ್ಲಿ ಭಿಕ್ಷೆ ಬೇಡಿಯೇ ಜೀವಿಸಬೇಕೆಂಬ ಇಚ್ಛೆಯಿಂದ ಸೃಷ್ಟಿಕರ್ತನು ಸೃಷ್ಟಿಸಿದ್ದರೆ, ಆ ಸೃಷ್ಟಿಕರ್ತನು ಭಿಕ್ಷುಕರಂತೆ ಅಲೆದಲೆದು ನಾಶವಾಗಿ ಹೋಗಲಿ-ಬಡತನಕ್ಕೆ ವಿರೋಧವಾದ ತಿರುವಳ್ಳುವರ ಸಿಟ್ಟು.

## 108. கயமை

**ಕಯಮೈ – ನೀಚತೆ**

மக்களே போல்வர் கயவர் அவரன்ன
ஒப்பாரி யாம்கண்டது இல். (குறள் 1071)

ಮಕ್ಕಳೇ ಪೋಲ್ವರ್ ಕಯವರ್ ಅವರನ್ನ
ಒಪ್ಪಾರಿ ಯಾಮ್ಕಣ್ಡದು ಇಲ್.

ನೀಚ ಜನರು ಜನ ಸಾಮಾನ್ಯರಂತೆಯೇ ಕಾಣುವರು
ಇಷ್ಟು ರೂಪ ಸಾದೃಶ್ಯವ ಕಾಣಲರಿದು. (ಕುರಳ್ 1071)

ನೀಚ ಜನರು ಹೊರರೂಪದಲ್ಲಿ ಮನುಷ್ಯರಂತೆಯೇ ತೋರುವರು; ಇಂತಹ ಹೋಲಿಕೆಯನ್ನು ಬೇರೆಲ್ಲೂ ಕಂಡಿಲ್ಲ.